ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

ನಿರ್ವಸಾಹತೀಕರಣ : ಡಿ.ಆರ್. ನಾಗರಾಜ್‌ರವರ ಚಿಂತನೆಗಳು

(ಸಾಹಿತ್ಯ ಕಥನ ಮತ್ತು ಸಂಸ್ಕೃತಿ ಕಥನ ಕೃತಿಗಳನ್ನು ಆಧರಿಸಿ)

ಪ್ರದೀಪ್ ಎಲ್. ಎಂ.
ಸಂಶೋಧನಾ ವಿದ್ಯಾರ್ಥಿ
ನೋಂದಣಿ ಸಂಖ್ಯೆ : KVMBKS – 00437

ಮಾರ್ಗದರ್ಶಕರು

ಪ್ರೊ.ಜಿ. ಬಸವರಾಜು
ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು
ಬಸವನಗುಡಿ, ಬೆಂಗಳೂರು.

ಕಾವ್ಯಮಂಡಲ
ನಂ. 13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು – 560 004

2010

ದೃಢೀಕರಣ ಪತ್ರ

ಪ್ರದೀಪ್. ಎಲ್.ಎಂ. ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **ನಿರ್ವಸಾಹತೀಕರಣ : ಡಿ.ಆರ್. ನಾಗರಾಜ್‌ರವರ ಚಿಂತನೆಗಳು** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
ಪ್ರೊ. ಜಿ. ಬಸವರಾಜು
ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು
ಬಸವನಗುಡಿ, ಬೆಂಗಳೂರು.

ಪ್ರೊ|| ಜಿ. ಬಸವರಾಜು
ಕನ್ನಡ ವಿಭಾಗ,
ನ್ಯಾಷನಲ್ ಪದವಿ ಕಾಲೇಜು,
ಬಸವನಗುಡಿ, ಬೆಂಗಳೂರು - 560 004.

ದಿನಾಂಕ : 13/09/10
ಸ್ಥಳ: ಬೆಂಗಳೂರು.

ಪ್ರಮಾಣ ಪತ್ರ

ನಿರ್ವಸಾಹತೀಕರಣ : ಡಿ.ಆರ್. ನಾಗರಾಜ್‌ರವರ ಚಿಂತನೆಗಳು ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಪ್ರೊ. ಜಿ. ಬಸವರಾಜುರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ವಿಷಯವನ್ನು ಇದುವರೆಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 13/09/10
ಸ್ಥಳ: ಬೆಂಗಳೂರು.

ಪ್ರದೀಪ್ ಎಲ್.ಎಂ.
ಸಂಶೋಧನಾ ವಿದ್ಯಾರ್ಥಿ
ಬಸವನಗುಡಿ, ಬೆಂಗಳೂರು.

ಪರಿವಿಡಿ

ಕ್ರಸಂ.	ವಿಷಯ	ಪು.ಸಂ
ಅಧ್ಯಾಯ – 1	ಅಧ್ಯಯನದ ಉದ್ದೇಶ ಮತ್ತು ವ್ಯಾಪಿ	1
ಅಧ್ಯಾಯ – 2	ನಿರ್ವಸಾಹತೀಕರಣ : ಒಂದು ಪ್ರವೇಶ	6
	ಕನ್ನಡದಲ್ಲಿ ನಡೆದಿರುವ ನಿರ್ವಸಾಹತೀಕರಣದ ಚಿಂತನೆಗಳು	10
	ಗಾಂಧಿಯವರ ಚಿಂತನೆಗಳು	11
	ಗೂಗಿ ವಾ ಥಿಯಾಂಗೊರವರ ಚಿಂತನೆಗಳು	12
	ರಾಜೇಂದ್ರ ಚೆನ್ನಿಯವರ ಚರ್ಚೆಗಳು	15
	ಜಿ.ಎನ್.ದೇವಿಯವರ ಚಿಂತನೆಗಳು	16
	ರಹಮತ್ ತರೀಕೆರೆಯವರ ಚರ್ಚೆಗಳು	18
	ನಟರಾಜ್ ಹುಳಿಯಾರ್‌ರವರ ಚಿಂತನೆಗಳು	19
	ಶಂಕರ ಬಟ್‌ರವರ ಚಿಂತನೆಗಳು	22
ಅಧ್ಯಾಯ – 3	ಡಿ.ಆರ್.ನಾಗರಾಜ್‌ರವರ ನಿರ್ವಸಾಹತೀಕರಣದ ಚಿಂತನೆಗಳು	29
	ಡಿ.ಆರ್.ನಾಗರಾಜ್ ಅವರ ಕೃತಿಗಳು : ಒಂದು ಪ್ರವೇಶ	29
	ಡಿ.ಆರ್.ನಾಗರಾಜ್‌ರವರ ಚಿಂತನೆಗಳು	32
	ಸಾಹಿತ್ಯಕ ನಿರ್ವಸಾಹತೀಕರಣದ ಚಿಂತನೆಗಳು	38
	ಕಾವ್ಯಮೀಮಾಂಸೆಯಲ್ಲಿನ ನಿರ್ವಸಾಹತೀಕರಣದ ಚಿಂತನೆಗಳು	43
	ಸಂಸ್ಕೃತಿ ಹಾಗೂ ಧರ್ಮಗಳ ಬಹುಮುಖಿ ಸ್ವರೂಪದ ಮೂಲಕ ನಿರ್ವಸಾಹತೀಕರಣ	46
	ರಾಜಕೀಯ ಹಾಗೂ ಬೌದ್ಧಿಕ ನಿರ್ವಸಾಹತೀಕರಣದ ಚಿಂತನೆಗಳು	55
ಅಧ್ಯಾಯ – 4	ದೇಶೀವಾದ ಹಾಗೂ ನಿರ್ವಸಾಹತೀಕರಣದ ಸಾಧ್ಯತೆಗಳು	73
	ದೇಶೀವಾದದ ಚರ್ಚೆಗಳು	73
	ದೇಶೀವಾದ ಮತ್ತು ನಿರ್ವಸಾಹತೀಕರಣದ ಸಮಸ್ಯೆಗಳು	77
	ಸಾಹಿತ್ಯದಲ್ಲಿ ದೇಶೀ ಮಾದರಿಗಳ ಸಾಧ್ಯತೆಗಳು	84
	ಭಾಷಿಕ ನಿರ್ವಸಾಹತೀಕರಣದ ಚಿಂತನೆಗಳು	86
ಅಧ್ಯಾಯ – 5	ಸಮಾರೋಪ	92
	ಆಕರ ಗ್ರಂಥಗಳು	94
	ಪರಾಮರ್ಶನ ಗ್ರಂಥಗಳು	95

ಅಧ್ಯಾಯ – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ದೇಶೀ ಸಮುದಾಯಗಳಲ್ಲಿ ವಸಾಹತುಗಳ ಆಗಮನವು ಸಾಂಸ್ಕೃತಿಕ ಸಂದರ್ಭದಲ್ಲಿ ನಿರ್ಣಾಯಕವಾದ ಬಿರುಕನ್ನುಂಟುಮಾಡಿದೆ. ಅದರ ಪರಿಣಾಮವಾಗಿ ಇಂದಿಗೂ ಈ ದೇಶೀ ಸಮುದಾಯಗಳ ಭಾಷೆ, ಧರ್ಮ, ಶಿಕ್ಷಣ, ಚಿಂತನಕ್ರಮ, ಸಂಸ್ಕೃತಿಗಳ ಮೇಲೆ ಬಲವಂತದ ಹೇರಿಕೆಯ ಕ್ರಮಗಳು ಜಾರಿಗೆ ಬಂದ ಪರಿಣಾಮವಾಗಿ ಇಂದಿಗೂ ಈ ದೇಶೀ ಸಮುದಾಯಗಳು ಅನೇಕ ಬಿರುಕುಗಳನ್ನು ಎದುರಿಸುತ್ತಿವೆ. ವಸಾಹತುಶಾಹಿಗಳ ನಿರ್ಗಮನದ ನಂತರವೂ ಅವರ ಸಾಂಸ್ಕೃತಿಕ ಹೇರಿಕೆಗಳನ್ನು ಅರಗಿಸಿಕೊಳ್ಳಲೂ ಆಗದೆ, ಮೀರಲೂ ಸಾಧ್ಯವಾಗದ ಇಬ್ಬಂದಿತನದಲ್ಲಿ ಮುಂದುವರಿಯುತ್ತಿವೆ. ಈ ಬಗೆಯ ಸಾಂಸ್ಕೃತಿಕ ಪಲ್ಲಟಗಳನ್ನು, ಕಾರಣಗಳನ್ನು, ಪರಿಣಾಮಗಳನ್ನು, ಪರಿಹಾರಗಳನ್ನು ಸೂಕ್ಷ್ಮವಾಗಿ ವಿವೇಚಿಸುವ ಪ್ರಯತ್ನವನ್ನು ನಿರ್ವಸಾಹತೀಕರಣದ ಪ್ರಯತ್ನವೆನ್ನಬಹುದು. ಇದೊಂದು ಪರಿಭಾಷೆಯಂತೆಯೇ ಪ್ರಕ್ರಿಯೆಯೂ ಆಗಿರುವುದರಿಂದ, ಇದರಲ್ಲಿ ವಸಾಹತುಗಳು ಮತ್ತು ವಸಾಹತುಶಾಹಿಗಳಿಬ್ಬರ ಸಾಂದರ್ಭಿಕ ವರ್ತನೆಗಳ ಅಭ್ಯಾಸವು ಅಗತ್ಯವಾಗಿದ್ದು, ಅದರಂತೆ ಇವುಗಳ ಬಗೆಗೆ ಸೂಕ್ಷ್ಮವಾದ ವಿವೇಚನೆಯನ್ನು ನಡೆಸಬೇಕಾದ ಅನಿವಾರ್ಯತೆ ಇದೆ.

ಭಾರತದ ಅಸ್ಮಿತೆಯನ್ನು ಬದಲಿಸಿದ ನಿರ್ಧಾರಕ ಚಾರಿತ್ರಿಕ ಬೆಳವಣಿಗೆಯಲ್ಲಿ ವಿದೇಶೀ ದಾಳಿಗಳದ್ದು ಪ್ರಮುಖ ಪಾತ್ರ. ಪ್ರಾಗೈಹಾಸಿಕ ಕಾಲದಿಂದಲೂ ಭಾರತವು ಒಂದಿಲ್ಲೊಂದು ಬಗೆಯಲ್ಲಿ, ಈ ಬಗೆಯ ದಾಳಿಗಳಿಗೆ ನಿರಂತರ ಒಳಗಾಗುತ್ತಿದೆ. ಐತಿಹಾಸಿಕ, ಪೌರಾಣಿಕ, ಕಾವ್ಯದ ಅನೇಕ ದಾಖಲೆಗಳು ಈ ಮಾತನ್ನು ಸಮರ್ಥಿಸುತ್ತವೆ. ಈ ಅಸ್ಮಿತೆಯೆಂಬುದು ಹಾಗೆ ನಾವು ಊಹಿಸಿದಂತೆ ತನ್ನ ಪರಿಧಿಯೊಳಗೆ ಕಟ್ಟಿಕೊಳ್ಳುವಷ್ಟು ಸುಲಭ, ಸರಳವಾದುದೇನಾಗಿರುವುದಿಲ್ಲ. ಏಕೆಂದರೆ ಭಿನ್ನ ಅನುಸಂಧಾನಗಳ ಫಲಿತದಿಂದಾಗಿಯೇ ಸಂಸ್ಕೃತಿಗಳ ಬೆಳವಣಿಗೆಯ ಸಾಧ್ಯತೆಗಳು ಅನೇಕ ಹೊರಚಾಚುಗಳಿಗೆ ತೆರೆದುಕೊಳ್ಳುವ ಅನೇಕ ಸಾಧ್ಯತೆಗಳಿರುತ್ತವೆ.

ಆರ್ಯನ್ನರ ಆಗಮನವು ಒಂದು ಬಗೆಯಲ್ಲಿ ದೇಶೀ ಧರ್ಮ, ನಾಗರಿಕತೆ, ಸಂಪ್ರದಾಯ, ಆಚರಣೆ, ಭಾಷೆ, ಸಂಸ್ಕೃತಿಗಳ ಮೇಲೆ ಉಂಟುಮಾಡಿದ ಅಗಾಧವಾದ ಪರಿಣಾಮದಷ್ಟೇ, ಮುಂದಿನ ದಾಳಿಗಳಾದ ಹೂಣರು, ಶಕರು, ಆಫ್ಘನ್ನರು, ಮೊಘಲರು

ಮತ್ತು ಅಂತಿಮ ಹಂತದಲ್ಲಿ ಡಚ್ಚರು, ಪೋರ್ಚುಗೀಸರು, ಬ್ರಿಟಿಷರ ದಾಳಿಗಳಲ್ಲಿ, ಬ್ರಿಟಿಷ್ ವಸಾಹತುಶಾಹಿಗಳ ಆಡಳಿತದವರೆಗೆ ಒಂದು ಬಗೆಯದಾದರೆ, ಬ್ರಿಟಿಷರ ಕಾಲದ ದಾಳ ಮತ್ತೊಂದು ಬಗೆಯದು. ಇಲ್ಲಿ ಗಮನಿಸಬಹುದಾದ ಮುಖ್ಯ ಅಂಶವೆಂದರೆ ಆರ್ಯನ್ನರಿಂದ ಆರಂಭವಾದ ದಾಳಿಗಳು ದೇಶೀ ಸಮುದಾಯಗಳೊಡನೆ ಹೊಂದಾಣಿಕೆಯ ಸಾಧ್ಯತೆಗಳನ್ನು ಹೊಂದಿದ್ದವು. ಆದರೆ ವಸಾಹತು ಹಾಗೂ ನವವಸಾಹತುಶಾಹಿಗಳ ಕಾಲದಲ್ಲಿ ಆ ಬಗೆಯ ಹೊಂದಾಣಿಕೆಗಳ ಬದಲು ಹೇರಲ್ಪಡುವ ಮತ್ತು ಅದನ್ನು ಜಾಗತಿಕ ವಿದ್ಯಮಾನವೆನ್ನುವಂತೆ, ಸರ್ವಸಮ್ಮತವೆನ್ನುವಂತೆ ಒಪ್ಪಿಕೊಳ್ಳುವಂತಹ ರೂಪಣೆಗಳ ಮೂಲಕ, ದೇಶೀ ಸಮುದಾಯವನ್ನು ತನ್ನ ಅಸಂಖ್ಯಾತ ಹುನ್ನಾರಗಳ ಅಧೀನಕ್ಕೊಳಪಡಿಸುವ ಜಾಣ್ಮೆಯನ್ನಿವು ಮೆರೆಯುತ್ತಿವೆ.

ಸ್ವಾತಂತ್ರ್ಯಾನಂತರವೂ ವಸಾಹತುಗಳ ಆಳ್ವಿಕೆಗೊಳಪಟ್ಟ ದೇಶಗಳಲ್ಲಿ ಉಳಿದು, ಮುಂದುವರೆಯುತ್ತಿರುವ ವಸಾಹತುಶಾಹಿಗಳು ನಿರ್ಮಿಸಿಕೊಟ್ಟ ಮಾರ್ಗದಲ್ಲಿ ಕ್ರಮಿಸುವುದರಿಂದ ದೇಶೀ ಸಮುದಾಯಗಳಲ್ಲಿ ಒಂದು ಬಗೆಯ ದ್ವಂದ್ವ ವ್ಯಕ್ತಿತ್ವ ನಿರ್ಮಾಣವಾಗುವುದನ್ನು ಪ್ರಸ್ತುತ ಅಧ್ಯಯನವು ಕೆಲವು ಸಾಹಿತ್ಯಕ ದಾಖಲೆಗಳನ್ನು ಬಳಸಿಕೊಂಡು ನಿರ್ವಚಿಸುವ ಮೂಲಕ, ನಿರ್ವಸಾಹತೀಕರಣದ ಸಾಧ್ಯತೆಗಳೆಡೆಗೆ ವಸಾಹತು ಆಳ್ವಿಕೆಗೊಳಪಟ್ಟ ದೇಶಗಳಿಗಿರುವ ಸಾಧ್ಯತೆಗಳತ್ತ ಕಿರುನೋಟ ಬೀರುವ ಉದ್ದೇಶವನ್ನೊಳಗೊಂಡಿದೆ.

ದೇಶೀ ಸಮುದಾಯದ ಬಿಡುಗಡೆಯ ಹಂಬಲಗಳು ಸಕಾರಾತ್ಮಕವೂ ಅಥವಾ ನಕಾರಾತ್ಮಕವೂ ಆಗಿರಬಹುದು. ದೇಶೀಯತೆಯ ಹೆಸರಿನಲ್ಲಿ ಮತೀಯತೆಯನ್ನು ಪ್ರತಿಪಾದಿಸುವ ಪ್ರಯತ್ನವಾಗಿ ಪರ್ಯವಸಾನಗೊಳ್ಳುವ ಅಸಂಖ್ಯಾತ ಹುನ್ನಾರಗಳು ಹೊರ ಹೊಮ್ಮುತ್ತಿರುವ ಸಂದರ್ಭದಲ್ಲಿ ನಿರ್ವಸಾಹತೀಕರಣದ ಚಿಂತನೆಗಳು ಪ್ರಸ್ತುತವೆನ್ನುವುದನ್ನು ಈ ಅಧ್ಯಯನಕಾರನು ನಂಬುವುದರಿಂದ, ನಿರ್ವಸಾಹತೀಕರಣದ ಚಿಂತನೆಗಳೊಳಗೆ ಹುದುಗಿರಬಹುದಾದ ಸಾಂಸ್ಕೃತಿಕ ರಾಜಕಾರಣವನ್ನು, ಅದರ ಅಸಂಖ್ಯ ಹುನ್ನಾರಗಳ ಹತಾರಗಳೊಡನೆ ಪರಿಶೀಲಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಈ ಹಿಂದಿನ ಹುನ್ನಾರಗಳನ್ನು ಅರಿಯುವ ಪ್ರಯತ್ನವು ಪ್ರಸ್ತುತ ಛಿದ್ರಗೊಳ್ಳುತ್ತಿರುವ ಸಮಾಜದಲ್ಲಿ ಅನಿವಾರ್ಯವಾದುದೆಂಬುದು ನನ್ನ ನಂಬಿಕೆ. ಇಲ್ಲವಾದಲ್ಲಿ, ಅನೇಕ ಕಾರಣಗಳಿಂದಾಗಿ ನಿರಂತರ ವಿಘಟನೆಗಳಿಗೆ ಒಳಗಾಗುತ್ತಿರುವ ಸಮಾಜವು ಪತನದಂಚಿಗೆ ಸಾಗುತ್ತದೆ. ಆದುದರಿಂದ ನಿರ್ವಸಾಹತೀಕರಣ ಪ್ರಕ್ರಿಯೆಯು ಪ್ರಸ್ತುತ ಸಾಂಸ್ಕೃತಿಕ

ಸಂದರ್ಭದಲ್ಲಿ ಮುಖ್ಯವಾದುದರಿಂದ ಆ ಮೂಲಕ ಅನೇಕ ಸಮಸ್ಯೆಗಳನ್ನು ಪರಿಶೀಲಿಸುವ ಉದ್ದೇಶವನ್ನು ಈ ಪ್ರಬಂಧವು ಹೊಂದಿದೆ.

ಇಂತಹ ಚಾರಿತ್ರಿಕ ಒತ್ತಡವನ್ನು ಇದುವರೆಗೆ ಎದುರಿಸಿದಂತೆ ಇನ್ನು ಮುಂದೆ ನಿರ್ವಹಿಸುವುದು ಸಾಧ್ಯವೇ? ಎಂಬ ಪ್ರಶ್ನೆಗಳ ಹಿನ್ನೆಲೆಯಲ್ಲಿ ದೇಶೀ ಸಮುದಾಯಗಳ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ವಸಾಹತು ಮತ್ತು ನವವಸಾಹತುಶಾಹಿಗಳ ಬಿಗಿ ಹಿಡಿತದಿಂದ ಬಿಡುಗಡೆ ಹೊಂದುವ ಸಾಧ್ಯತೆಗಳತ್ತ, ಇದುವರೆಗೆ ನಡೆದಿರುವ ನಿರ್ವಸಾಹತೀಕರಣದ ಚಿಂತನೆಗಳನ್ನು ಡಿ.ಆರ್. ನಾಗರಾಜ್‌ರವರ 'ಸಾಹಿತ್ಯ ಕಥನ' ಮತ್ತು 'ಸಂಸ್ಕೃತಿ ಕಥನ' ಕೃತಿಗಳ ಮೂಲಕ ಕುವೆಂಪು, ಶಿವರಾಮ ಕಾರಂತ, ರಾಜೇಂದ್ರ ಚೆನ್ನಿಯವರ ಚಿಂತನೆಗಳನ್ನು ಒಳಗೊಂಡು ಗಾಂಧೀಜಿಯವರ ಹಿಂದ್ ಸ್ವರಾಜ್, ಅಶೀಶ್ ನಂದಿ, ಜಿ.ಎನ್.ದೇವಿಯರ ಚಿಂತನೆಗಳ ಮೂಲಕ, ಭಾರತದ, ಅದರಲ್ಲೂ ಮುಖ್ಯವಾಗಿ ಡಿ.ಆರ್. ನಾಗರಾಜ್‌ರವರ ನಿರ್ವಸಾಹತೀಕರಣದ ಚಿಂತನೆಗಳನ್ನು, ಅದಕ್ಕೆ ಪೂರಕವಾಗಿ ಇನ್ನಿತರ ಚಿಂತಕರ ಅಭಿಪ್ರಾಯ, ನಿಲುವುಗಳನ್ನು ಈ ಅಧ್ಯಯನದ ವ್ಯಾಪ್ತಿಯು ಒಳಗೊಂಡಿದೆ.

ಭಾರತದ ದೇಶೀ ಸಮುದಾಯಗಳ ಮೇಲೆ ವಸಾಹತುಶಾಹಿ ಆಡಳಿತ ಕ್ರಮದಿಂದಾಗಿ ಉಂಟಾದ ಅನೇಕ ಪಲ್ಲಟಗಳು ಇನ್ನೂ ಸಂಪೂರ್ಣ ಅರಿವಿಗೆ ಬಾರದಿರುವಷ್ಟರಲ್ಲಿ, ಮತ್ತೊಮ್ಮೆ ಬಹುರಾಷ್ಟ್ರೀಯ ಕಂಪನಿಗಳು ಆಧುನಿಕ ವಸಾಹತುಶಾಹಿಗಳಾಗಿ ಕಾಲಿಡುತ್ತಿರುವ ಸಂಕೀರ್ಣ ಸ್ಥಿತಿಯಲ್ಲಿ 'ನಿರ್ವಸಾಹತೀಕರಣ'ದ ಚರ್ಚೆಯು ಅಗತ್ಯವೆನಿಸುತ್ತದೆ. ಇದೊಂದು ಸಂಕೀರ್ಣ ಪರಿಭಾಷೆಯಾಗಿರುವಂತೆಯೇ, ಒಂದು ಪ್ರಕ್ರಿಯೆಯೂ ಹೌದು.

ವಸಾಹತುಶಾಹಿ ಆಡಳಿತದ ಫಲಿತವಾದ ಆಧುನಿಕ ಶಿಕ್ಷಣ, ಪ್ರಭುತ್ವ, ಭಾಷೆ, ಧರ್ಮ, ಸಂಸ್ಕೃತಿ, ಕೈಗಾರೀಕರಣ ಇನ್ನಿತರ ಆಯಾಮಗಳನ್ನು ವ್ಯಾಪಿಸಿಕೊಂಡು ದೇಶೀ ಜೀವನ ಕ್ರಮಗಳನ್ನು ಆತ್ಯಂತಿಕವಾಗಿ ಆವರಿಸಿಕೊಂಡು, ದೇಶೀ, ಧರ್ಮ, ಭಾಷೆ, ಆಡಳಿತ ಕ್ರಮ, ಲೋಕಗ್ರಹಿಕೆ, ಆರ್ಥಿಕತೆಯನ್ನು ಇಲ್ಲವಾಗಿಸುವ ದಮನಕಾರಿ ಹೇರಿಕೆಗಳನ್ನು ಪ್ರಶ್ನಾತೀತವಾಗಿ ಒಪ್ಪಿಸಲಾಗಿದೆ ಅಥವಾ ಹೇರಲಾಗಿದೆ. (ಅಧ್ಯಯನದ ವ್ಯಾಪ್ತಿಯಿಂದಾಗಿ ಅದರ ಸಾಧಕಗಳೆಡೆಗೆ ಈ ಅಧ್ಯಯನಕಾರ ನಕಾರಾತ್ಮಕವಾಗಿಯೇನೂ ಇಲ್ಲ) ಇವುಗಳನ್ನು ಮೀರುವ ಪ್ರಯತ್ನವನ್ನು ನಿರ್ವಸಾಹತೀಕರಣ ಎನ್ನಬಹುದು.

ವಸಾಹತುಶಾಹಿಗಳ ಈ ದಾಳಿಗಳಿಂದ ದೇಶೀ ಸಮುದಾಯಗಳಿಗೆ ಆತ್ಯಂತಿಕವಾಗಿ ದುರ್ದೆಸೆ ಒದಗಿದೆ ಎಂದು ಹೇಳಲಾಗದಿದ್ದರೂ ದೇಶೀ ಜೀವನ ಪದ್ಧತಿ, ಅವುಗಳನ್ನಾಧರಿಸಿದ ವಿಜ್ಞಾನ, ತಂತ್ರಜ್ಞಾನ, ಭಾಷೆ, ಧರ್ಮ, ಸಂಸ್ಕೃತಿಗಳು ಇಂದು ತಮ್ಮ ವೈವಿಧ್ಯತೆಯನ್ನು ಕಳೆದುಕೊಂಡು ಏಕರೂಪೀಕರಣ ಹೊಂದುತ್ತಿರುವುದು ಆತಂಕಕಾರಿ ವಿಷಯವಾಗಿದೆ.

ಈ ಬಗೆಯ ಬಲವಂತದ ಹೇರಿಕೆಯನ್ನು ಅನೇಕ ಕಾರಣಗಳಿಗಾಗಿ ನಿರಾಕರಿಸುವ ಸಾಧ್ಯತೆಗಳ ನಡುವೆಯೂ ಅದರ ಸಾಧಕ ಬಾಧಕಗಳನ್ನು ಅರಿಯುವುದು ಈ ಪ್ರಬಂಧದ ಸ್ವರೂಪವಾಗಿದೆ.

ಅಧ್ಯಯನದ ವಿಧಾನಗಳು

ಪ್ರಸ್ತುತ ಪ್ರಬಂಧದ ಅಧ್ಯಯನವು ಅಳವಡಿಸಿಕೊಂಡಿರುವ ವಿಧಾನಗಳೆಂದರೆ :

1. ಸಾಹಿತ್ಯ ಕೃತಿಗಳ ವಿಶ್ಲೇಷಣೆ
2. ವಿಮರ್ಶೆ ಹಾಗೂ ಸಂಶೋಧನಾ ಕೃತಿಗಳ ವಿಶ್ಲೇಷಣೆ
3. ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆ

ಅಧ್ಯಯನದ ಹಂತಗಳು

ನಿರ್ವಸಾಹತೀಕರಣದ ಅಧ್ಯಯನದ ಅನುಕೂಲಕ್ಕಾಗಿ ಕೆಲವು ಹಂತಗಳಾಗಿ ವಿಭಾಗಿಸಿ ಅಧ್ಯಯನ ನಡೆಸಲಾಗಿದೆ. ಅವುಗಳೆಂದರೆ,

1. ನಿರ್ವಸಾಹತೀಕರಣ: ಒಂದು ಪ್ರವೇಶ
2. ಡಿ.ಆರ್.ನಾಗರಾಜ್‌ರವರ ನಿರ್ವಸಾಹತೀಕರಣದ ಚಿಂತನೆಗಳು
3. ದೇಶೀವಾದ ಮತ್ತು ನಿರ್ವಸಾಹತೀಕರಣದ ಸಾಧ್ಯತೆಗಳು
4. ಸಮಾರೋಪ

1. ನಿರ್ವಸಾಹತೀಕರಣ : ಒಂದು ಪ್ರವೇಶ

ಈ ಅಧ್ಯಾಯದಲ್ಲಿ ನಿರ್ವಸಾಹತೀಕರಣ ಎಂದರೇನು? ನಿರ್ವಸಾಹತೀಕರಣದ ಬಗ್ಗೆ ಕನ್ನಡ, ಇಂಗ್ಲಿಷ್, ಸಾಹಿತ್ಯ, ವಿಮರ್ಶೆ, ಸಂಶೋಧನೆ, ಅನುವಾದಿತ ಕೃತಿಗಳಲ್ಲಿ

ನಡೆದಿರುವ ಚಿಂತನೆಗಳನ್ನು ಕ್ರೋಢೀಕರಿಸಿ ಪ್ರಬಂಧದ ಅಧ್ಯಯನಕ್ಕೆ ಒಂದು ಪ್ರವೇಶ ಒದಗಿಸುವ ನಿಟ್ಟಿನಲ್ಲಿ ಅರ್ಥ, ವ್ಯಾಖ್ಯೆ, ವ್ಯಾಖ್ಯಾನಗಳನ್ನೊಳಗೊಂಡ ಚರ್ಚೆಯಿದೆ.

ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ, ಜಿ.ಎನ್.ದೇವಿ, ಗೂಗಿ ವಾ ಥಿಯಾಂಗೋ, ರಹಮತ್ ತರೀಕೆರೆ, ನಟರಾಜ್ ಹುಳಿಯಾರ್, ಡಿ.ಎನ್.ಶಂಕರ್ ಬಟ್ ಮೊದಲಾದವರ ಸಾಹಿತ್ಯಾಧ್ಯಯನ ಹಾಗೂ ಸಾಮಾಜಿಕ ಕಳಕಳಿಯ ಬಗೆಗೆ ನಡೆಸಿರುವ ನಿರ್ವಸಾಹತೀಕರಣದ ಚಿಂತನೆಗಳನ್ನು ಅಧ್ಯಯನಕ್ಕೆ ಪ್ರವೇಶವಾಗಿ ಬಳಸಿಕೊಳ್ಳಲಾಗಿದೆ.

2. ಡಿ.ಆರ್.ನಾಗರಾಜ್‌ರವರ ಚಿಂತನೆಗಳು

ಈ ಅಧ್ಯಾಯದಲ್ಲಿ ಡಿ.ಆರ್.ನಾಗರಾಜ್‌ರವರ 'ಸಾಹಿತ್ಯ ಕಥನ' ಹಾಗೂ 'ಸಂಸ್ಕೃತಿ ಕಥನ' ಕೃತಿಗಳಲ್ಲಿ ವ್ಯಕ್ತವಾಗಿರುವ ನಿರ್ವಸಾಹತೀಕರಣದ ಚಿಂತನೆಗಳ ಕುರಿತು ಅಧ್ಯಯನ ನಡೆಸಲಾಗಿದೆ. ಅವರ ಚಿಂತನೆಗಳನ್ನು ಸಾಹಿತ್ಯಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಭಿತ್ತಿಯಲ್ಲಿ ಅಧ್ಯಯನದ ಅನುಕೂಲಕ್ಕಾಗಿ ವಿಭಾಗಿಸಿಕೊಳ್ಳಲಾಗಿದೆ. ಆಯಾ ನಿರ್ದಿಷ್ಟ ವಿಷಯಗಳಡಿಯಲ್ಲಿ ಡಿ.ಆರ್.ನಾಗರಾಜ್‌ರವರು ನಡೆಸಿದ ಚಿಂತನೆಗಳನ್ನು ಸಾಂದರ್ಭಿಕ ನೆಲೆಯಲ್ಲಿಟ್ಟು ಪರಿಶೀಲಿಸುವುದರ ಮೂಲಕ ಅಧ್ಯಯನದ ಮುಖ್ಯ ಉದ್ದೇಶವಾದ ನಿರ್ವಸಾಹತೀಕರಣದ ಚಿಂತನೆಗಳ ಹರಹು, ವಿಶಾಲತೆಯನ್ನು ಪ್ರತಿಪಾದಿಸುತ್ತಲೇ, ಇದರಲ್ಲೇ ಎದುರಾಗುವ ವೈರುಧ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನವನ್ನು ನಡೆಸಲಾಗಿದೆ.

3. ದೇಶೀವಾದ ಮತ್ತು ನಿರ್ವಸಾಹತೀಕರಣದ ಸಾಧ್ಯತೆಗಳು

ಪ್ರಸ್ತುತ ಅಧ್ಯಾಯದಲ್ಲಿ ದೇಶೀವಾದಕ್ಕೂ ನಿರ್ವಸಾಹತೀಕರಣಕ್ಕೂ ಇರುವ ಸಂಬಂಧಗಳನ್ನು ಪರಿಶೀಲಿಸುವ ಪ್ರಯತ್ನವಿದೆ. ಈ ಅಧ್ಯಾಯದಲ್ಲಿ 'ದೇಶೀ ದರ್ಶನಗಳು', 'ದೇಶೀವಾದ' ಕೃತಿಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳ ಮೂಲಕ ಈ ಎರಡರ ನಡುವೆ ಇರುವ ಸಾಮ್ಯಗಳನ್ನು ಚರ್ಚೆಗೊಳಪಡಿಸಲಾಗಿದೆ.

ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಹಿನ್ನೆಲೆಯಲ್ಲಿ ನಿರ್ವಸಾಹತೀಕರಣ ಪ್ರಕ್ರಿಯೆಗೆ ಇರುವ ಅಡೆತಡೆಗಳೆಡೆಗೆ ಗಮನ ಹರಿಸಿ, ಅವುಗಳ ವ್ಯವಸ್ಥಿತ ಬಳಕೆಯ ಮೂಲಕ ಈ ಪ್ರಕ್ರಿಯೆಯ ಮುಖ್ಯ ತಾತ್ವಿಕ ಅಂಶಗಳು ಸಾಹಿತ್ಯಕ ಹಾಗೂ ಭಾಷಿಕ ನಿರ್ವಸಾಹತೀಕರಣದ ಬಗ್ಗೆ ಇರುವ ಸಾಧ್ಯತೆಗಳೆಡೆಗೆ ನಡೆದಿರುವ ಚಿಂತನೆಗಳನ್ನು ಪರಿಶೀಲಿಸಲಾಗಿದೆ.

ಅಧ್ಯಾಯ–2

ನಿರ್ವಸಾಹತೀಕರಣ : ಒಂದು ಪ್ರವೇಶ

ವಸಾಹತೋತ್ತರ ಚಿಂತನೆಗಳಲ್ಲಿ ರಾಜಕೀಯ, ಆರ್ಥಿಕ, ಸಾಹಿತ್ಯಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳನ್ನು ಗ್ರಹಿಸಲು ಪ್ರಮುಖ ಪರಿಕಲ್ಪನೆ ಹಾಗೂ ಆಶಯವಾಗಿ ಬಳಕೆಯಾಗುತ್ತಿರುವ ನಿರ್ವಸಾಹತೀಕರಣದ ಪ್ರಕ್ರಿಯೆಯು ಆಧುನಿಕೋತ್ತರ ಸಂದರ್ಭದಲ್ಲಿ ಅನೇಕ ಬಗೆಯ ಪರ, ವಿರೋಧದ ಚರ್ಚೆಗಳಿಗೆ ಕಾರಣವಾಗಿದೆ. ನಿರ್ವಸಾಹತೀಕರಣವನ್ನು ಪರಿಭಾವಿಸುವ ಭಿನ್ನ ಕ್ರಮಗಳಿಂದಾಗಿ ಹಾಗೂ ಈ ಪ್ರಕ್ರಿಯೆಯ ಸಂಕೀರ್ಣ ಸ್ವರೂಪದಿಂದಾಗಿ ಇದು ಸಹಜವಾದುದಾಗಿದೆ. ಕನ್ನಡದಲ್ಲಿನ ಇದುವರೆಗಿನ ನಿರ್ವಸಾಹತೀಕರಣದ ಚರ್ಚೆಗಳಲ್ಲಿ ಮುಖ್ಯವಾಗಿ ರಹಮತ್ ತರೀಕೆರೆಯವರ 'ಮರದೊಳಗಣ ಕಿಚ್ಚು', 'ಸಾಂಸ್ಕೃತಿಕ ಅಧ್ಯಯನ' ಕೃತಿಗಳಲ್ಲಿ ಪ್ರಾಸಂಗಿಕವಾಗಿ ನಡೆಸಿದ ಚರ್ಚೆಗಳಿದ್ದರೆ, ವಿ.ಬಿ. ತಾರಕೇಶ್ವರ್‌ರವರ 'ವಸಾಹತುಶಾಹಿ ಮತ್ತು ಭಾಷಾಂತರ' ಕೃತಿಯಲ್ಲಿ ಈ ಬಗೆಯ ಗ್ರಹಿಕೆ ಮುಂದುವರೆದಿದೆ. ರಾಜೇಂದ್ರ ಚೆನ್ನಿಯವರ 'ದೇಶೀವಾದ' ಕೃತಿಯಲ್ಲಿ ಕೂಡ ಇದರ ಚರ್ಚೆಯನ್ನು ಕಾಣಬಹುದು. ನಟರಾಜ್ ಹುಳಿಯಾರ್‌ರವರ 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' ಕೃತಿಯಲ್ಲಿ ಅಧ್ಯಯನದ ನಿರ್ದಿಷ್ಟತೆಗಾಗಿ ನಿರ್ವಸಾಹತೀಕರಣವನ್ನು ಸಾಹಿತ್ಯಕೃತಿ ಹಾಗೂ ವಿಮರ್ಶಾಕೃತಿಗಳ ಹಿನ್ನೆಲೆಯಲ್ಲಿ ತಾತ್ವಿಕ ಭಿತ್ತಿಯಾಗಿ ಈ ಪ್ರಕ್ರಿಯೆಯ ಸಾಧ್ಯತೆಗಳೆಡೆಗೆ ಇರುವ ಸಾಧಕ ಬಾಧಕಗಳ ವಿವರವಾದ ಚರ್ಚೆಯನ್ನು ಒಳಗೊಂಡಿದೆ.

Decolonisation - ನಿರ್ವಸಾಹತೀಕರಣ ಎಂದರೇನು?

"'ನಿರ್ವಸಾಹತೀಕರಣವೆಂದರೆ ಹೊಸ ಮನುಷ್ಯನ ಸೃಷ್ಟಿ; ವಸಾಹತೀಕರಣಕ್ಕೊಳಗಾಗಿದ್ದ 'ವಸ್ತು' ತನ್ನನ್ನು ತಾನು ಸ್ವತಂತ್ರಗೊಳಿಸಿಕೊಳ್ಳುವ ರೀತಿಯಿಂದಲೆ ಮನುಷ್ಯನಾಗುತ್ತದೆ' ಎಂದು ನಿರ್ವಸಾಹತೀಕರಣದ ಮೂಲಕ ಆರಂಭವಾಗುವ ಸ್ವ–ಪ್ರತಿಪಾದನೆಯನ್ನು ಫ್ಯಾನನ್ ಸೂಚಿಸುತ್ತಾನೆ".[1]

"Decolonisation or Decolonize withdraw from (a colony), living it independent"[2]

"The action of changing from colonial to independent status"[3]

"Decolonisation (or decolonization) refers to the undoing of colonialism, the establishment of governance or authority through the creation of settlements by another country or jurisdiction"[4]

"Decolonize - grant independence to (a former colony); "West Africa was decolonized in the early 1960's"[5]

"Decolonize - to release from the status of colony; to allow a colony to become independent"[6]

"A process where a colonized people, by developing a consciousness based on the remnants of the traditional culture, redefine themselves as peoples and reassert the distinct qualities that historically guided their existence"[7]

"Decolonization is the movement of American/European/Asian colonies gaining independence (mostly beginning after the post-WWII era). Some were peaceful struggles while others became violent"[8]

"The progressive dismantling of colonial rule around the world"[9]

ಈ ಅರ್ಥಗಳು ಹಾಗೂ ವ್ಯಾಖ್ಯೆಗಳಿಂದ ವ್ಯಕ್ತವಾಗುವ ಒಂದು ಅಂಶವೆಂದರೆ, ವಸಾಹತುಶಾಹಿಯ ಧರ್ಮ, ಕಲೆ, ಶಿಕ್ಷಣ, ಆಡಳಿತ ಕ್ರಮ, ಲೋಕಗ್ರಹಿಕೆ, ಸಂಸ್ಕೃತಿಯ ನೆಲೆ ಇತ್ಯಾದಿಗಳನ್ನು ಪ್ರಜ್ಞಾಪೂರ್ವಕವಾಗಿ ಮೀರುವ ಪ್ರಕ್ರಿಯೆಯನ್ನು ನಿರ್ವಸಾಹತೀಕರಣ ಎನ್ನಬಹುದು. ಈ ಬಗೆಯ ಮೀರುವಿಕೆಯು ಸಾಧ್ಯವೇ? ಎಂಬ ಪ್ರಶ್ನೆ ಮೂಡುವಂತೆ ಆಧುನಿಕೋತ್ತರ ಸಂದರ್ಭದಲ್ಲಿ ನವವಸಾಹತುಶಾಹಿಗಳ ನಿರಂತರವಾದ ದಾಳಿ ದೇಶೀ ಸಮುದಾಯಗಳ ಮೇಲೆ ನಡೆಯುತ್ತಿದೆ. ಈ ಬಗೆಯ ದಾಳಿಗಳನ್ನು ಪ್ರಜ್ಞಾಪೂರ್ವಕವಾಗಿ ತಡೆಯುವಲ್ಲಿ ಈಗಾಗಲೇ ಜೀವನಕ್ರಮದಲ್ಲಿ, ದೃಷ್ಟಿ-ಧೋರಣೆಯಲ್ಲಿ, ಚಿಂತನೆಗಳಲ್ಲಿ ಅಳವಟ್ಟಿರುವ ವಸಾಹತುಶಾಹೀ ಧೋರಣೆಗಳೇ ಅಡ್ಡಿಯಾಗಿವೆ.

ವಸಾಹತುವಾದವೆನ್ನುವುದು ಆರಂಭದಲ್ಲಿ ವ್ಯಾಪಾರದ ಉದ್ದೇಶವನ್ನು ಹೊಂದಿದ್ದು, ಕಾಲಾನಂತರದಲ್ಲಿ ವಸಾಹತು ದೇಶಗಳ ಆಂತರಿಕ ಸಮಸ್ಯೆಗಳಾದ ರಾಜಕೀಯ ಅನೈಕ್ಯತೆ, ಅಪನಂಬಿಕೆ, ಮೂಢನಂಬಿಕೆಗಳು, ಪರಸ್ಪರ ಒಂದಾಗಲು ಬಿಡದ ಜಾತಿ, ವರ್ಣಾಶ್ರಮ ವ್ಯವಸ್ಥೆಗಳನ್ನು ತನ್ನ ಉದ್ದೇಶ ಸಾಧನೆಗಾಗಿ – ವ್ಯವಸ್ಥಿತವಾಗಿ ಬಳಸಿಕೊಳ್ಳುವ ಮೂಲಕ ವಸಾಹತುಗಳ ಭೌತಿಕ ಸಂಪತ್ತನ್ನು ದೋಚುವ ಸಲುವಾಗಿ ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಂಡಿತು. ಆ ಮೂಲಕ ದೇಶೀ ಸಮುದಾಯಗಳ ಮೇಲೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆಡಳಿತಾತ್ಮಕ, ಭಾಷಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಹಂತಹಂತವಾಗಿ ಹಿಡಿತ ಸಾಧಿಸಿ, ಅವುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು – ಆಳುವ ಸಿದ್ಧಾಂತವಾಗಿ ವಸಾಹತುವಾದವು ರೂಪುಗೊಂಡಿದೆ. ಈ ಬಗೆಯ ಹಿಡಿತಕ್ಕೆ ವಸಾಹತುಶಾಹಿಗಳು ಧರ್ಮ, ಮಾನವಶಾಸ್ತ್ರ, ಸಾಹಿತ್ಯ ಇತ್ಯಾದಿಗಳನ್ನು ಬಳಸಿಕೊಂಡು ಪೌರ್ವಾತ್ಯ ದೇಶಗಳನ್ನು ತಮ್ಮ ವಸಾಹತುಗಳನ್ನಾಗಿಸಿಕೊಂಡ ಕ್ರಮವನ್ನು ಎಡ್ವರ್ಡ್ ಸೈದ್‌ನ 'ಓರಿಯಂಟಲಿಸಂ' ಕೃತಿಯಲ್ಲಿ ವಸಾಹತುವಾದದ ವ್ಯವಸ್ಥಿತ ರೂಪಣೆಯನ್ನು ವಿವರಿಸಲಾಗಿದೆ.

ನಟರಾಜ್ ಹುಳಿಯಾರ್ ಅವರು ಹೇಳುವಂತೆ : "ಸೈದನ ಪ್ರಕಾರ ಓರಿಯಂಟ್ (ಅಥವಾ 'ಪ್ರಾಚೀನ' ಅಥವಾ 'ಹಳೆಯ' ಜಗತ್ತು) ಎಂಬ ಸೃಷ್ಟಿಯೇ ಯೂರೋಪಿನ ಆಲೋಚನಾ ಕ್ರಮದ ಫಲ. ಯೂರೋಪು ತಾನು 'ಓರಿಯೆಂಟ್' ಎಂದು ಕರೆದ ಜಗತ್ತಿನ ಬಗ್ಗೆ ವ್ಯಾಖ್ಯಾನ ಮಾಡುವುದು, ಆ ವ್ಯಾಖ್ಯಾನಗಳನ್ನು ಸಮರ್ಥಿಸುವುದು, ಆ ಜಗತ್ತನ್ನು ವರ್ಣಿಸುವುದು, ಅದನ್ನು ಕುರಿತು ಬೋಧಿಸುವುದು ಹಾಗೂ ಅಲ್ಲಿ ನೆಲೆಸುವುದು ಮತ್ತು ಆಳುವುದು... ಈ ಎಲ್ಲ ಅಂಶಗಳು ಸೇರಿ ರೂಪುಗೊಂಡ ಒಂದು ನೋಟಕ್ರಮ ಅಥವಾ ಸಂಸ್ಥೆಯೇ ಓರಿಯೆಂಟಲ್‌ವಾದ. ಅಂದರೆ, ತನಗಿಂತ ಭಿನ್ನವಾದ ಇನ್ನೊಂದು ಜಗತ್ತನ್ನು ನೋಡುವ ಕ್ರಮದಲ್ಲಿಯೇ ಆ ಜಗತ್ತನ್ನು ತನಗೆ ಸರಿ ಕಂಡಂತೆ ನಿರ್ಮಿಸಿಕೊಳ್ಳುವ ಹಾಗೂ ಅದನ್ನು ಆಳುವ ಕ್ರಮವೂ ಇರುತ್ತದೆ. ಯೂರೋಪಿನ ಹಲವು ತಲೆಮಾರುಗಳ ಬುದ್ಧಿಜೀವಿಗಳು, ಕಲಾವಿದರು, ವ್ಯಾಖ್ಯಾನಕಾರರು, ಲೇಖಕರು ಹಾಗೂ ರಾಜಕಾರಣಿಗಳು ಕೆಲವು ನಿರ್ದಿಷ್ಟ ಬಗೆಯ ಅನಿಸಿಕೆಗಳನ್ನು ಹಾಗೂ ಸಿದ್ಧ ಮಾದರಿಗಳನ್ನು 'ಸತ್ಯ'ವೆಂದು ಪ್ರತಿಪಾದಿಸಿದ ರೀತಿಯಿಂದಾಗಿ ಯೂರೋಪಿಗೆ 'ಪ್ರಾಚೀನ' ಜಗತ್ತಿನ ಮೇಲೆ ಯಜಮಾನಿಕೆ ಸುಲಭವಾಯಿತು ಎಂಬುದು ಸೈದನ ವಾದ."[9a]

ಈ ವಸಾಹತುವಾದ ಎನ್ನುವುದು ಹಂತಹಂತದ ಬೆಳವಣಿಗೆಯಾಗಿದ್ದು, ವ್ಯಾಪಾರಿ ಉದ್ದೇಶದಿಂದ ಆರಂಭಗೊಂಡು ಅಂತಿಮವಾಗಿ ಅಧಿಕಾರವನ್ನು ಹಿಡಿಯುವ ಆಕ್ರಮಣಕಾರಿ ಸಿದ್ಧಾಂತವಾಗಿ ಬೆಳೆದಿರುವುದನ್ನು ಚಾರಿತ್ರಿಕ ಅಧ್ಯಯನದಿಂದ ಕಂಡುಕೊಳ್ಳಬಹುದು.

ವಸಾಹತುಶಾಹಿಗಳ ಅನೇಕ ಬಗೆಯ ಪ್ರಭಾವಗಳಿಂದ ಬಿಡುಗಡೆ ಹೊಂದಲು ನಡೆಸಿದ ಸೈದ್ಧಾಂತಿಕ ಪ್ರಕ್ರಿಯೆಯೇ ನಿರ್ವಸಾಹತೀಕರಣ. ಇದೊಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು ಸಂಪೂರ್ಣ ನಿರ್ವಸಾಹತೀಕರಣದ ಸಾಧ್ಯತೆಗಳ ಬಗೆಗೆ ಅನೇಕ ಅನುಮಾನಗಳಿವೆ. ಏಕೆಂದರೆ, ವಸಾಹತುಶಾಹಿಗಳ ಆಡಳಿತಕ್ಕೆ ಸಿಲುಕಿ, ಅದರ ಆಡಳಿತ ಕ್ರಮ, ಶಿಕ್ಷಣಕ್ರಮ, ಚಿಂತನಕ್ರಮ ಮುಂತಾದವುಗಳನ್ನು ಸ್ವೀಕರಿಸಿ, ಅಳವಡಿಸಿಕೊಂಡು ಸಾಕಷ್ಟು ಕಾಲ ನಡೆದಿರುವುದರಿಂದ, ವಸಾಹತುಶಾಹಿಯ ನಿರ್ಗಮನದ ನಂತರ ನಡೆಸುವ ಈ ಪ್ರಯತ್ನವು ಅನೇಕ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಹೇಗೆಂದರೆ, ಚಿಂತನಕ್ರಮದ ಮೇಲೆ ವಸಾಹತುಶಾಹಿ ಬೀರಿದ ಪ್ರಭಾವವನ್ನು ಈಗಾಗಲೇ ಅನೇಕ ಹಂತಗಳಲ್ಲಿ ಒಪ್ಪಿ, ಅರಗಿಸಿಕೊಂಡಿರುವ ದೇಶೀ ಸಮುದಾಯಗಳು ಮತ್ತೆ ಹಿಂದಕ್ಕೆ ತೆರಳಲು ಬಯಸಲಾರವು ಅಥವಾ ಬಯಸಿದರೂ ಸಾಧ್ಯವಾಗದಿರಬಹುದು. ಅಲ್ಲದೇ ಈ ಬಗೆಯ ಚಿಂತನಕ್ರಮಗಳು ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವುದರ ಪರಿಣಾಮವಾಗಿ, ತಾನು ಏನನ್ನು ಮೀರಲು ಬಯಸುತ್ತದೆಯೋ ಅದರೆಡೆಗೆ, ಒಂದು ಉದ್ದೇಶಪೂರ್ವಕ ಪ್ರಯತ್ನವಾಗಿ ಆರಂಭವಾಗುವ ಈ ಪ್ರಯತ್ನಕ್ಕೆ ಅನೇಕ ಅಡೆತಡೆಗಳನ್ನು ತಾನು ಚಿಂತಿಸುತ್ತಿರುವ ಚಿಂತನಕ್ರಮಗಳೇ ಒಡ್ಡತೊಡಗುತ್ತವೆ. ಆಗ ಒಳ ಮತ್ತು ಹೊರ ವಸಾಹತುಶಾಹಿಗಳ ಬಗೆಗಿನ ದ್ವಂದ್ವಗಳು ಎದುರಾಗುತ್ತವೆ.

ಅಂಬೇಡ್ಕರ್‌ರವರ ಚಿಂತನೆಗಳನ್ನು ಈ ನೆಲೆಯಲ್ಲೇ ಗ್ರಹಿಸಬೇಕಾದ ಅಗತ್ಯವಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿರುವಾಗ, ಅಂಬೇಡ್ಕರ್‌ರವರು ದಲಿತರ ಸಮಸ್ಯೆಗಳನ್ನು ಕೇಂದ್ರಕ್ಕೆ ತರುವ ಪ್ರಯತ್ನ ನಡೆಸಿದರು. ಅಂತೆಯೆ ಕುವೆಂಪುರವರು ತಮ್ಮ ಕವನ, ವಿಚಾರ, ವಿಮರ್ಶಾ ಲೇಖನಗಳಲ್ಲಿ ಪುರೋಹಿತಶಾಹಿಗಳಿಂದ ನಿರ್ಮಿತವಾದ ಆಂತರಿಕ ವಸಾಹತುಶಾಹಿಯ ವಿರುದ್ಧ ನಡೆಸಿದ ಹೋರಾಟವನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಈ ಬಗೆಯ ದ್ವಂದ್ವಗಳಷ್ಟೇ ಅಲ್ಲದೇ, ಈಗಾಗಲೇ ದೇಶೀ ಸಮುದಾಯಗಳ ಮೇಲೆ ವಸಾಹತುಶಾಹಿಗಳ ಆಡಳಿತದಿಂದಾಗಿ ಚಾಲ್ತಿಯಲ್ಲಿರುವ ನ್ಯಾಯ ಪದ್ಧತಿ, ಆಡಳಿತ ಪದ್ಧತಿ, ಆರ್ಥಿಕ ನೀತಿ, ಶಿಕ್ಷಣಕ್ರಮ, ತಂತ್ರಜ್ಞಾನ, ಧರ್ಮ, ಸಂಸ್ಕೃತಿ,

ಭಾಷೆಗಳನ್ನು ಮೀರುವ ಅಥವಾ ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸುವ, ತಡೆಯುವ, ಅದಕ್ಕೆ ಪ್ರತಿಯಾಗಿ ಬಳಸುವ ಶೋಧಗಳ ಅವಶ್ಯಕತೆಯನ್ನು ಅನ್ವೇಷಿಸುವ ಸಾಧ್ಯತೆಗಳ ಕೊರತೆಯೂ ಕೂಡ ನಿರ್ವಸಾಹತೀಕರಣದ ತಡೆಗೋಡೆಯಾಗಿ ಕೆಲಸ ನಿರ್ವಹಿಸುತ್ತವೆ.

ಇದೇ ಸಂದರ್ಭದಲ್ಲೇ ದೇಶೀವಾದದ ಹೆಸರಿನಲ್ಲಿ ದೇಶೀ ಧರ್ಮ, ಭಾಷೆಗಳ ಅಸ್ಮಿತೆಯ ಹೆಸರಿನಲ್ಲಿ ಮೂಲಭೂತವಾದದ ಹುಟ್ಟನ್ನು ಪರಿಶೀಲಿಸಬಹುದು. ಈ ಬಗೆಯ ಅಸ್ಮಿತೆಯ ಹುಡುಕಾಟದಲ್ಲಿ ಏಕರೂಪಿ ಧರ್ಮ, ಭಾಷೆ, ಸಂಸ್ಕೃತಿಗಳ ನಿರ್ಮಾಣದತ್ತ ಚಲಿಸುವ ಪ್ರಕ್ರಿಯೆಗಳು ಚಾಲ್ತಿಗೆ ಬಂದ ಪರಿಣಾಮವಾಗಿ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಮೂಲಭೂತವಾದದ ಹುಟ್ಟಿಗೆ ಕಾರಣವಾಗುತ್ತದೆ. ದೇಶೀ ಸಮುದಾಯಗಳಲ್ಲಿ ಇದುವರೆಗೆ ಇದ್ದ ಹೊಂದಾಣಿಕೆಯ ಬದಲಿಗೆ, ಬಿರುಕನ್ನುಂಟು ಮಾಡುವುದರ ಮೂಲಕ, ಶಾಂತಿ, ಸುವ್ಯವಸ್ಥೆಯನ್ನು ಕದಡುವ ಕಡೆಗೆ ಇದರ ಒಂದು ಮುಖದ ಚಲನೆಯನ್ನು ಕಾಣಬಹುದು.

ಇದರ ಜೊತೆಗೆ, ನಿರ್ವಸಾಹತೀಕರಣದ ಸಾಧ್ಯತೆಗಳ ಬಗೆಗೆ ಕೆಲವು ಅನುಮಾನಗಳು ಹುಟ್ಟುತ್ತವೆ. ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ಭಾಷೆ, ಧರ್ಮ, ಶಿಕ್ಷಣ, ತಂತ್ರಜ್ಞಾನ, ಆಲೋಚನಾಕ್ರಮಗಳಿಂದ ಬಿಡುಗಡೆ ಹೊಂದುವ ಸಾಧ್ಯತೆಯೆಡೆಗೆ ಚಿಂತಿಸಿದಾಗ, ಈ ಆಶಯಗಳು ಸಾಧ್ಯವೇ? ಎಂಬ ಪ್ರಶ್ನೆ ಉಂಟಾಗುತ್ತದೆ.

ಕನ್ನಡದಲ್ಲಿ ನಡೆದಿರುವ ನಿರ್ವಸಾಹತೀಕರಣದ ಚರ್ಚೆಗಳು

ಕನ್ನಡ ಸಾಹಿತ್ಯವು ನಿರಂತರವಾದ ವಿಭಿನ್ನ ಅನುಸಂಧಾನಗಳ ಫಲಿತವಾಗಿ ಅನೇಕ ಹೊರಚಾಚುಗಳಿಗೆ ತೆರೆದುಕೊಳ್ಳುವ ಅನೇಕ ಸಾಧ್ಯತೆಗಳ ಹುಡುಕಾಟದಲ್ಲಿರುವುದನ್ನು ಹಲವು ಘಟ್ಟಗಳಲ್ಲಿ ಕಾಣಬಹುದು. ಆರಂಭದಲ್ಲಿ ಸಂಸ್ಕೃತ, ಪ್ರಾಕೃತ, ನಂತರದಲ್ಲಿ ನೆರೆಯ ಭಾಷೆಗಳಾದ ತೆಲುಗು, ತಮಿಳು, ಮಲೆಯಾಳಂ, ಮರಾಠಿ, ಹಿಂದಿ, ಬಂಗಾಳಿ ಮತ್ತು ಆಧುನಿಕ ಕಾಲದಲ್ಲಿ ಇಂಗ್ಲಿಷ್ ಭಾಷೆಗಳೊಡನೆ ಕನ್ನಡ ಸಾಹಿತ್ಯವು ಈ ಬಗೆಯ ಅನುಸಂಧಾನ ನಡೆಸಿದ ಪರಿಣಾಮವಾಗಿ ಅನೇಕ ಪ್ರಕಾರಗಳಲ್ಲಿ ಅನೇಕ ರೂಪಗಳಲ್ಲಿ, ವಸ್ತು ವೈವಿಧ್ಯದ ಸಾಹಿತ್ಯ ಸೃಷ್ಟಿಯಾಗಿದೆ. ಅದೇ ಕಾಲಕ್ಕೆ ಮಾರ್ಗ – ದೇಸೀ, ವಸ್ತುಕ – ವರ್ಣಕದಂತಹ ಅರ್ಥಪೂರ್ಣ ಸೂಕ್ಷ್ಮ ಚರ್ಚೆಗಳಿಗೂ ಕಾರಣವಾಗಿರುವುದನ್ನು ಗಮನಿಸಬಹುದು.

ಸಂಸ್ಕೃತ ಭಾಷೆಯನ್ನು ಕನ್ನಡದಲ್ಲಿ ಬಳಸುವ ಬಗೆಗೆ ಇರಬೇಕಾದ ಎಚ್ಚರ, ವಿವೇಕವನ್ನು ಶ್ರೀ ವಿಜಯನು 'ಕವಿರಾಜಮಾರ್ಗದ'ಲ್ಲಿ ಹೇಳಿದ್ದಾನೆ.[10] ಮುಂದೆ ವಚನ ಚಳುವಳಿಯು ಅದುವರೆಗಿನ ಕಾವ್ಯದ ವಸ್ತು, ಆಶಯ, ಪ್ರಕಾರ, ಅಭಿವ್ಯಕ್ತಿ ಕ್ರಮಗಳನ್ನೇ ಮುರಿದು ಹೊಸದಾಗಿ ಕಟ್ಟುವ ಪ್ರಯತ್ನ ನಡೆಸಿತು. ಇದೇ ಕಾಲಘಟ್ಟದಲ್ಲಿ ಆಂಡಯ್ಯನು ತನ್ನ 'ಕಬ್ಬಿಗರ ಕಾವ'ದಲ್ಲಿ ಸಂಸ್ಕೃತದಿಂದ ಬಿಡುಗಡೆ ಹೊಂದುವ ಪ್ರಯತ್ನವನ್ನು ನಡೆಸಿದನು. (ಎಷ್ಟರಮಟ್ಟಿಗೆ ಯಶಸ್ವಿಯಾದನೆನ್ನುವುದು ಬೇರೆ ಮಾತು) ಇವುಗಳು ಆರಂಭಿಕ ಪ್ರಯತ್ನಗಳಿಗೆ ಕೆಲವು ಉದಾಹರಣೆಗಳು. ಆದರೆ ಆಧುನಿಕ ಕಾಲಕ್ಕೂ ಆಧುನಿಕ ಪೂರ್ವಕ್ಕೂ ಒಂದೇ ಬಗೆಯ ಸಾಂಸ್ಕೃತಿಕ ಒತ್ತಡಗಳಿದ್ದವೆಂದು ಭಾವಿಸುವಂತಿಲ್ಲ. ಏಕೆಂದರೆ, ವಸಾಹತುಶಾಹಿಗಳ ಆಗಮನದವರೆಗೆ ದೇಶೀ ಸಮುದಾಯಗಳಲ್ಲಿ ಇರುವ ವೈರುಧ್ಯಗಳಲ್ಲೇ ಅನೇಕ ಹೊಂದಾಣಿಕೆಯ ಸಾಧ್ಯತೆಗಳಿರುತ್ತಿದ್ದವು. ಅಥವಾ ಇದು ಸಾಂದರ್ಭಿಕ ಒಪ್ಪಂದವಾಗಿ ಒಪ್ಪಿತವಾಗಿದ್ದಿರಬಹುದು.

ಆದರೆ ಆಧುನಿಕ ಸಂದರ್ಭದಲ್ಲಿ ವಸಾಹತುಶಾಹಿಗಳು ತಂದೊಡ್ಡಿದ ತುರ್ತುಗಳು ಅಸಂಖ್ಯ. ವಸಾಹತುಶಾಹಿಗಳ ಆಳ್ವಿಕೆಗೊಳಪಟ್ಟ ಭಾರತದಂತಹ ದೇಶಗಳು ಒಂದು ಕಡೆ ನೈತಿಕ ಸ್ಥೈರ್ಯವನ್ನು, ಆತ್ಮಾಭಿಮಾನವನ್ನು ಕಳೆದುಕೊಳ್ಳತೊಡಗಿದ್ದರೆ, ಮತ್ತೊಂದು ನೆಲೆಯಲ್ಲಿ ಆರ್ಥಿಕವಾಗಿ ದಿವಾಳಿ ಸ್ಥಿತಿ ತಲುಪತೊಡಗಿದ್ದವು. ಇಂಗ್ಲೆಂಡ್‌ನ ಶೋಷಕ ಧೋರಣೆಯಿಂದಾಗಿ, ಭಾರತದಂತಹ ವಸಾಹತುಗಳನ್ನು ತನ್ನ ದೇಶದ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುವ ದೇಶಗಳನ್ನಾಗಿ ಬದಲಾಯಿಸಿಕೊಂಡು, ತಾನು ತಯಾರಿಸಿದ ಉಪಕರಣಗಳು, ವಸ್ತ್ರಗಳು, ಯಂತ್ರೋಪಕರಣಗಳನ್ನು ಬಳಸುವಂತೆ ವಸಾಹತುಗಳ ಮೇಲೆ ಹೇರುವಿಕೆ ನಡೆಯಿತು. ಇದರ ಪರಿಣಾಮವಾಗಿ ನಡೆದ ರಾಷ್ಟ್ರೀಯ ಚಳುವಳಿಗಳು ವಸಾಹತುಶಾಹಿಗಳ ವಿರುದ್ಧ ನಡೆಸಿದ ಸ್ವದೇಶಿ ಚಳುವಳಿ, ಸತ್ಯಾಗ್ರಹಗಳು ಭಾರತದ ಆಧುನಿಕ ಸಂದರ್ಭದ ನಿರ್ವಸಾಹತೀಕರಣದ ಆರಂಭಿಕ ಪ್ರಯತ್ನಗಳು.

ಗಾಂಧಿಯವರ ಚಿಂತನೆಗಳು

ಭಾರತದ ನಿರ್ವಸಾಹತೀಕರಣದ ಚಿಂತನೆಯನ್ನು ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲೇ ಅನೇಕ ಹಂತಗಳಲ್ಲಿ ಅನ್ವೇಷಣೆಗೆ ಒಳಪಡಿಸಿದ್ದು ಮೋಹನ್‌ದಾಸ್ ಕರಮ್‌ಚಂದ್ ಗಾಂಧಿಯವರು. ತಮ್ಮ 'ಹಿಂದ್ ಸ್ವರಾಜ್' ಕೃತಿಯಲ್ಲಿ ಬ್ರಿಟಿಷ್ ವಸಾಹತುಶಾಹಿ ರೂಪುಗೊಳಿಸುತ್ತಿದ್ದ ಆಧುನಿಕತೆಯ ವಿರುದ್ಧ – ಒಂದು ಪರ್ಯಾಯ ಬದುಕಿನ ಜೀವನ ಪದ್ಧತಿಯನ್ನು ಈ ಕೃತಿ ಕಟ್ಟಿಕೊಡುತ್ತದೆ. ಸ್ವಾತಂತ್ರ್ಯ ಸಾಧನೆಯೆಂಬುದು

ಗಾಂಧಿಯವರಿಗೆ ಕೇವಲ ರಾಜಕಾರಣದ ಮಾತಾಗಿರಲಿಲ್ಲ. ಅಥವಾ ಬ್ರಿಟಿಷ್‌ರ ದಾಸ್ಯದಿಂದ ಮುಕ್ತಿ ಕೊಡಿಸುವುದೊಂದೇ ಪ್ರಧಾನ ಆಶಯ ಆಗಿರಲಿಲ್ಲ. ವಸಾಹತುಶಾಹಿ ಆಳ್ವಿಕೆಯಿಂದ ಬಿಡುಗಡೆ ಪಡೆದರೂ ಅವರು ಬಿಟ್ಟು ಹೋಗುವ ರಾಜಕೀಯ, ಆರ್ಥಿಕತೆ, ಆಡಳಿತ, ಭಾಷೆ, ಧರ್ಮ, ಸಂಸ್ಕೃತಿ ಮೊದಲಾದ ವಿಚಾರಧಾರೆಗಳು ದಾಸ್ಯದ ಸಂಕೋಲೆಗಳಾಗಿ ಮುಂದುವರೆಯುತ್ತವೆಂಬ – ಅದನ್ನು ಅವಶ್ಯವಾಗಿ ಮೀರಬೇಕೆಂಬ ಮುಖ್ಯ ಕಾಳಜಿ ಹಿಂದ್ ಸ್ವರಾಜ್‌ನಲ್ಲಿದೆ. ಈ ಹಿನ್ನೆಲೆಯಲ್ಲಿಯೇ ಗಾಂಧಿಯವರು ವಸಾಹತುಶಾಹಿಯ ಕೇಂದ್ರೀಕೃತ ರಾಜಕಾರಣದ ಬದಲು ಗ್ರಾಮಸ್ವರಾಜ್ಯದ ನೆಲೆಯ ವಿಕೇಂದ್ರೀಕೃತ ರಾಜಕಾರಣವನ್ನು, ಕ್ರೈಸ್ತರ ಮತ ಪ್ರಚಾರದ ಎದುರು ಹಿಂದೂ ಧರ್ಮವನ್ನು, ಇಂಗ್ಲಿಷ್ ಭಾಷೆಯ ಎದುರು ದೇಶೀ ಭಾಷೆಗಳನ್ನು, ವಸಾಹತುಶಾಹಿ ಹುಟ್ಟು ಹಾಕಿದ ಮತೀಯತೆಯ ವಿರುದ್ಧ ಸೌಹಾರ್ದತೆಯನ್ನು, ಬೃಹತ್‌ಯಂತ್ರ ನಾಗರೀಕತೆಯ ವಿರುದ್ಧ ಗುಡಿ ಕೈಗಾರಿಕೆಗಳನ್ನು ಮಂಡಿಸುತ್ತಾ; ವಿದೇಶಿ ನ್ಯಾಯ ಪದ್ಧತಿ, ವೈದ್ಯ ಪದ್ಧತಿ, ರೈಲ್ವೇಗಳೆಲ್ಲವನ್ನು ತಿರಸ್ಕರಿಸುತ್ತಾರೆ.

ವಸಾಹತುಶಾಹಿಗಳ ಆಳ್ವಿಕೆಯ ಅವಧಿಯಲ್ಲೇ ನಿರ್ವಸಾಹತೀಕರಣದ ಚರ್ಚೆಗೆ ತೊಡಗಿರುವ ಈ ಕೃತಿ, ಈ ದಿಸೆಯಲ್ಲಿ ಮುಖ್ಯವಾದ ಪ್ರಯತ್ನ. ವಸಾಹತುಶಾಹಿಗಳ ಕಾಲದಲ್ಲೇ ವಿದೇಶೀ ವಸ್ತುಗಳ ಬಹಿಷ್ಕಾರ, ಸತ್ಯಾಗ್ರಹ, ಕರನಿರಾಕರಣೆ, ಉಪವಾಸ ಸತ್ಯಾಗ್ರಹಳಂತಹ ದೇಶೀ, ಅಹಿಂಸಾ ಪ್ರತಿಭಟನೆಯ ಮಾದರಿಗಳ ಶೋಧದ ಪೂರ್ವದಲ್ಲಿ ಯಾವ ಬಗೆಯಲ್ಲಿ ಭಾರತವನ್ನು ನಿರ್ವಸಾಹತೀಕರಣಗೊಳಿಸಬೇಕೆಂಬುದರ ಸ್ಪಷ್ಟ ರೂಪುರೇಷೆಗಳು ಈ ಕೃತಿಯಲ್ಲಿವೆ.[11]

ಗೂಗಿ ವಾ ಥಿಯಾಂಗೊರವರ ಚಿಂತನೆಗಳು

ನಿರ್ವಸಾಹತೀಕರಣದ ಚಿಂತನೆಗಳು ಜಗತ್ತಿನಾದ್ಯಂತ ಭಿನ್ನ ಅನುಸಂಧಾನದ ಫಲಿತವಾಗಿ ಭಿನ್ನವಾಗಿವೆ. ಕನ್ನಡ, ಇಂಗ್ಲಿಷ್, ಆಫ್ರಿಕನ್, ಆಸ್ಟ್ರೇಲಿಯನ್, ಭಾರತೀಯ ಚಿಂತನೆಗಳಲ್ಲಿ ಈ ಭಿನ್ನ ಪರಿಭಾವನೆಗಳನ್ನು ಕಾಣಬಹುದು. ಧರ್ಮ, ಜಾತಿ, ಬುಡಕಟ್ಟು, ಜನಾಂಗಿಕ, ಲಿಂಗ, ಸಾಮಾಜಿಕ, ಸಾಹಿತ್ಯಕ ಮುಂತಾದವಲ್ಲದೆ, ಕೈಗಾರಿಕೀರಣ, ಕೃಷಿ, ಗ್ರಾಮೀಣ ಸಮಸ್ಯೆಗಳು, ದಲಿತ ಪ್ರಶ್ನೆಗಳು, ಶೈಕ್ಷಣಿಕ ಶಿಸ್ತುಗಳಲ್ಲಿ ಅನೇಕ ಪರ್ಯಾಯ ಚಿಂತನೆಗಳು ಪ್ರಚಲಿತದಲ್ಲಿವೆ.

ಗೂಗಿ ವಾ ಥಿಯಾಂಗೊ ಆಫ್ರಿಕನ್ ನಿರ್ವಸಾಹತೀಕರಣದ ಬಗೆಗೆ ಚಿಂತಿಸುತ್ತಾ ಪ್ರಜ್ಞೆಯ ನಿರ್ವಸಾಹತೀಕರಣದ ಬಗ್ಗೆ ತಮ್ಮ ಕೃತಿ 'Decolonizing The Mind' ನಲ್ಲಿ ವಿಚಾರಗಳನ್ನು ಮಂಡಿಸಿದ್ದಾರೆ. ವಸಾಹತುವಾದಿಗಳಿಗೆ ಅವರು ಮುಖಾಮುಖಿಯಾಗುತ್ತಾ "ನನ್ನ ಅಭಿಪ್ರಾಯದಲ್ಲಿ, ನಾವು ಆಫ್ರಿಕಾದ ಆಲೋಚನಾ ಕ್ರಮ, ತತ್ವಶಾಸ್ತ್ರ, ಜಾನಪದ, ಪ್ರತಿಮೆ, ಇವೆಲ್ಲವನ್ನು ನಮ್ಮ ಬರಹದಲ್ಲಿ ಬರಪೂರವಾಗಿ ಬಳಸಬೇಕು. ಇವನ್ನು ಆಫ್ರಿಕನ್ ಭಾಷೆಗಳಿಂದ ಅಕ್ಷರಶಃ ಅನುವಾದಿಸಬೇಕು. ನಮ್ಮ ದೇಶೀ ಭಾಷೆಗೆ ಸಾಧ್ಯವಾದಷ್ಟು ಸಮೀಪ ಬರುವಂತೆ ಅನುವಾದಿಸಬೇಕು. ಒಂದೊಂದು ಪದ ನುಡಿಗಟ್ಟು ವಾಕ್ಯಗಳಲ್ಲೂ, ಒಂದೊಂದು ಹೆಸರಲ್ಲೂ, ಪ್ರತಿಯೊಂದರಲ್ಲೂ ಆಫ್ರಿಕನ್ ಜನತೆಯ ಸಾಮಾಜಿಕ ಆಚರಣೆ, ಸ್ವಭಾವ, ನಂಬಿಕೆ ಮೌಲ್ಯಗಳು ತುಂಬಿಕೊಂಡಿವೆ. ಆಫ್ರಿಕನ್ ನುಡಿಯಲ್ಲಿರುವ ಈ ಜೀವಂತಿಕೆಯನ್ನು ಉಳಿಸಿಕೊಳ್ಳುವಂತೆ ಇಂಗ್ಲಿಶಿನಲ್ಲಿ ಭಾವನೆಗಳನ್ನು ಅಭಿವ್ಯಕ್ತಿಸುವ ಅಭ್ಯಾಸವನ್ನು ನಾನಂತೂ ಮಾಡಿಕೊಂಡಿದ್ದೇನೆ. ಮೊದ ಮೊದಲು ಇದು ಕಷ್ಟಕರವಾಗಿತ್ತು. ಆಮೇಲೆ ನಾನದನ್ನು ಪಳಗಿಸಿಕೊಂಡೆ. ನಾನು ಬಳಸುವ ಪ್ರತಿಯೊಂದು ಇಜವಾ ಭಾಷೆಯ ಅಭಿವ್ಯಕ್ತಿಯನ್ನು, ಅದರ ಹುಟ್ಟಿನ ಸಂದರ್ಭದ ಸಮೇತ ಇಂಗ್ಲಿಶಿನ ಅರ್ಥಕ್ಕೆ ಆದಷ್ಟು ಹತ್ತಿರ ತರುವುದು ಹೇಗೆಂದು ಆಲೋಚನೆ ಮಾಡಿದೆ. ಇದೊಂದು ಆಕರ್ಷಕ ಪ್ರಯೋಗ ಅನಿಸಿತು."[12] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ವಸಾಹತುಗಳ ನೋಟಕ್ರಮಗಳಿಂದ ಬಿಡುಗಡೆಯನ್ನು ಬಯಸುವ ಗೂಗಿಯವರಿಗೆ ಆಫ್ರಿಕಾದ ಅಧಿಕೃತ ಚಿಂತನ ಕ್ರಮಗಳು ತಾವು ಬರೆಯುವ ಬರಹಗಳಲ್ಲಿ, ಚಿಂತನೆಯಲ್ಲಿ ಬದುಕಿನಲ್ಲಿ ಪ್ರಚಲಿತಕ್ಕೆ ಬರಬೇಕೆಂಬ ಆಶಯವಿದೆ. ಆರಂಭದಲ್ಲೆ ನಿರ್ವಸಾಹತೀಕರಣಕ್ಕೆ ಅವಶ್ಯಕವಾಗಿರುವ ಒಂದು ಬಗೆಯ ಸಾತ್ವಿಕ ಹಠವನ್ನು ಮೇಲಿನ ಭಾಗದಲ್ಲಿ ಕಾಣಬಹುದು. ವಸಾಹತುಶಾಹಿ ಭಾಷೆಯಲ್ಲಿ ಬರೆಯಬೇಕಾದ ಸಂದರ್ಭದಲ್ಲಿ ಈ ಬಗೆಯ ದೇಶೀ ಜೀವನಕ್ರಮಗಳನ್ನು ಅಧಿಕೃತವಾಗಿ ಮಂಡಿಸುವುದರ ಮೂಲಕ ಪ್ರಜ್ಞೆಯ ನಿರ್ವಸಾಹತೀಕರಣದ ಆರಂಭವಾದರೂ, ಮುಂದುವರೆದು ಈ ಬಗೆಯ ಭಾಷಾಂತರದಿಂದಷ್ಟೇ ಎಲ್ಲವೂ ಸಾಧ್ಯವಿಲ್ಲವೆಂಬ ಕಾರಣದಿಂದಾಗಿ, ದೇಶೀ ಭಾಷೆಯ ಅಂತರ್ಗತ ಶಕ್ತಿಗಳನ್ನು ಅನ್ಯ ಭಾಷೆಯ ಬೆಳವಣಿಗೆಗೆ ಧಾರೆಯೆರೆಯುತ್ತಿರುವ ಕ್ರಮಗಳನ್ನು ಪ್ರಶ್ನಿಸುತ್ತಾರೆ.

ಈ ಬಗೆಯ ಪ್ರಯತ್ನಗಳಲ್ಲಿ ಭಾಷಾಂತರಕ್ಕಷ್ಟೇ ಸೀಮಿತವಾಗಿ ಬಿಡಬಹುದಾದ ದೇಶೀ ಜೀವನ ಮಾದರಿಗಳ ಚೈತನ್ಯವು ಆಯಾ ದೇಶೀ ಭಾಷೆಗಳಲ್ಲಿ

ಅಭಿವ್ಯಕ್ತಿಯಾಗುವುದರತ್ತ ಅವರ ಮುಂದಿನ ಗಮನವಿದೆ. ಆ ಕಾರಣದಿಂದಾಗಿ ಅವರು ಕೆಲವು ಪ್ರಶ್ನೆಗಳಿಂದಲೇ ದೇಶೀ ಚಿಂತನಕ್ರಮಗಳನ್ನು ಎಚ್ಚರಿಸುವ ಪ್ರಯತ್ನವನ್ನು ಆರಂಭಿಸುತ್ತಾರೆ. ಇದುವರೆಗೆ ವಸಾಹತುಶಾಹಿಗಳಿಂದ ಪಡೆದ ನೋಟಕ್ರಮಗಳಲ್ಲೇ ಮುಂದುವರೆದರೆ, ಅಸಂಖ್ಯ ದೇಶೀ ಪರಿಭಾಷೆಗಳು, ನುಡಿಗಟ್ಟುಗಳು ನಂಬಿಕೆ, ಆಚರಣೆಗಳು ಹಂತ ಹಂತವಾಗಿ ಕಣ್ಮರೆಯಾಗುವ ಸಾಧ್ಯತೆಗಳಿರುವುದರಿಂದಾಗಿ; ಈ ಬಗೆಯ ದೇಶೀ ಮಾದರಿಗಳನ್ನು ಮರುರೂಪಿಸುವ ಜವಾಬ್ದಾರಿಯನ್ನು ತಾವು ಹೊರಬೇಕೆಂದು ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕ ಈ ರೀತಿಯ ನಿರ್ಧಾರಕ್ಕೆ ಪ್ರೇರೇಪಿಸುತ್ತಾರೆ.

"ನಾವು ಕೇಳಿಕೊಳ್ಳಬಹುದಾದ ಪ್ರಶ್ನೆಗಳೆಂದರೆ, ಯಾಕೆ ಒಬ್ಬ ಆಫ್ರಿಕನ್ ಲೇಖಕನಿಗೆ ತನ್ನ ತಾಯ ಭಾಷೆಯಿಂದ ಹೊತ್ತುಕೊಂಡು ಹೋಗಿ ಇತರರ ಭಾಷೆಯನ್ನು ಸಮೃದ್ಧಗೊಳಿಸುವ ಗೀಳು ಹತ್ತುತ್ತದೆ ? ಈ ಕೆಲಸಕ್ಕೆ ಯಾಕೆ ಲೇಖಕರು ಅಷ್ಟೊಂದು ರಿಸ್ಕ್ ತೆಗೆದುಕೊಳ್ಳುತ್ತಾರೆ ? ನಮ್ಮ ಭಾಷೆಗಳನ್ನು ಹೇಗೆ ಶ್ರೀಮಂತಗೊಳಿಸಿಕೊಳ್ಳಬೇಕು ಎಂದು ನಾವು ಯಾಕೆ ಕೇಳಿಕೊಳ್ಳಲಿಲ್ಲ ? ಬೇರೊಂದು ಕಾಲಕ್ಕೆ ದೇಶಕ್ಕೆ ಜನತೆಗೆ ಸೇರಿದ ಉನ್ನತ ಮಾನವೀಯ ಹಾಗೂ ಡೆಮಾಕ್ರಟಿಕ್ ಹೋರಾಟ ಪರಂಪರೆಗಳಿಂದ ಚೈತನ್ಯ ಪಡೆಯಲು ಏನು ಮಾಡಬೇಕೆಂದು ನಾವೇಕೆ ಕೇಳಿಕೊಳ್ಳಲಿಲ್ಲ ? ... ನಾವೇಕೆ ನಮ್ಮ ಭಾಷೆಗಳಲ್ಲಿ ದೊಡ್ಡ ಸಾಹಿತ್ಯಕ ಸಾಧನೆಯನ್ನು ಮಾಡಲಾಗಿಲ್ಲ ? ಅಪಾರ ಅನುಭವ, ಆಳವಾದ ಚಿಂತನೆ ಹಾಗೂ ತತ್ವಜ್ಞಾನಗಳನ್ನು ತನ್ನ ಮಾತೃ ಭಾಷೆಯ ಮೂಲಕವೇ ಪಡೆದುಕೊಂಡಿರುವ ಗೆಬ್ರಿಯಲ್ ಒಕಾರನು, ಯಾಕೆ ತನ್ನ ಇಜವಾ ಭಾಷೆಯಲ್ಲಿ ಅವನ್ನೆಲ್ಲ ಅಭಿವ್ಯಕ್ತಿ ಮಾಡಲಿಲ್ಲ ? ಈ ಕಠೋರ ಪ್ರಶ್ನೆಗಳನ್ನು ನಾವು ಎದುರಿಸಲಿಲ್ಲ. ಆಫ್ರಿಕನ್ ಜನತೆಯ ಹೋರಾಟಗಳಲ್ಲಿ ನಮ್ಮ ಹೊಣೆಯೇನೆಂಬ ಪ್ರಶ್ನೆಯನ್ನಂತೂ ಕೇಳಿಕೊಳ್ಳಲೇ ಇಲ್ಲ. ಇಲ್ಲ, ಈ ಯಾವ ಪ್ರಶ್ನೆಗಳನ್ನು ಕೇಳಿಕೊಳ್ಳಲಿಲ್ಲ"[13]

ಎನ್ನುವ ಗೂಗಿ ವಾ ಥಿಯಾಂಗೊರವರಿಗೆ, ಸ್ವತಃ ವಸಾಹತುಶಾಹಿಯ ಶಿಕ್ಷಣ ಕ್ರಮದಲ್ಲಿ ವಿದ್ಯಾಭ್ಯಾಸ ಮಾಡಿ, ಅಂತಿಮವಾಗಿ ವಸಾಹತುಶಾಹಿಯ ಅನೇಕ ಬಗೆಯ ಹಿಡಿತಗಳಿಂದ ಮುಕ್ತಿ ಪಡೆಯುವ ಕ್ರಮಗಳೆಡೆಗೆ ತುಡಿತವಿದೆ. ವಸಾಹತುಶಾಹಿಯ ವಿರೋಧದ ತನ್ನ ಚಿಂತನೆಯನ್ನು ಬೆಳೆಸಿಕೊಳ್ಳುವ ಪ್ರಯತ್ನವಾಗಿ, ತನ್ನ ಹೆಸರನ್ನು ಬದಲಾಯಿಸಿಕೊಂಡು, ತಾನು ಬಳಸುತ್ತಿದ್ದ ವಸಾಹತುಶಾಹಿ ಭಾಷೆಯ ಬದಲಿಗೆ ಗಿಕಯೂ

ಭಾಷೆಯಲ್ಲಿ ಬರೆಯುವ ನಿರ್ಧಾರಕ್ಕೆ ಬರುವಲ್ಲಿನ ಬೆಳವಣಿಗೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ವಸಾಹತುಗಳ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ವಸಾಹತುಶಾಹಿಗಳ ಆಡಳಿತ, ಶಿಕ್ಷಣಕ್ರಮ, ಭಾಷೆ, ಧರ್ಮ, ನೋಟಕ್ರಮಗಳನ್ನು ಮೀರುವ ಕ್ರಮಗಳಲ್ಲಿ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ವಸಾಹತುಶಾಹಿಯ ಹಿಡಿತಗಳಿಂದ ಭಾಷಿಕವಾಗಿ, ಅಭಿವ್ಯಕ್ತಿ ಕ್ರಮದಲ್ಲಿ, ನೋಟಕ್ರಮಗಳಲ್ಲಿ, ಚಿಂತನಕ್ರಮ ಮುಂತಾದ ನೆಲೆಗಳಲ್ಲಿನ ಪರಿವರ್ತನೆಯನ್ನು ನಿರ್ವಸಾಹತೀಕರಣ ಚಿಂತನೆಗಳಲ್ಲಿ ಪ್ರತಿಪಾದಿಸಲಾಗುತ್ತಿದೆ. ಈ ಬಗೆಯ ನಿರ್ವಸಾಹತೀಕರಣದ ಸಾಧ್ಯತೆಗಳನ್ನು ಆಫ್ರಿಕನ್ ಸಂದರ್ಭದಲ್ಲಿ ಮಂಡಿಸುವಾಗ, ವಸಾಹತುಕಾಲೀನ ಸಂದರ್ಭದಲ್ಲಿ – ವಸಾಹತುಶಾಹಿಗಳು ಮಾಡಿದ ನಿರ್ನಾಮಗಳನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡ ವಸಾಹತು ವಿರೋಧಿ ಸಂಕಥನಗಳಲ್ಲಿ ಇವು ಮುಖ್ಯವಾದವುಗಳು.

ಆಫ್ರಿಕನ್ನರನ್ನು ಕುರಿತ ವಸಾಹತುವಾದಿ ಸಂಕಥನಕ್ಕೆ ತಕ್ಕ ಪ್ರತಿಕ್ರಿಯೆ ನೀಡುವ ಪ್ರಯತ್ನದಲ್ಲಿ, ಅನೇಕ ಕಠೋರಾತ್ಮಕ ನಿಲುವು ತಾಳುವಾಗ, ದೇಶೀ ಭಾಷೆ, ಧರ್ಮ, ಆಚರಣೆ, ಸಂಸ್ಕೃತಿಗಳ ಕುರಿತು ಆಳವಾದ ಅಧ್ಯಯನದ ಪರಿಣಾಮವಾಗಿ ಈ ಬಗೆಯ ಚಿಂತನೆಗಳು ವ್ಯಕ್ತಗೊಂಡಿವೆ. ಅಲ್ಲದೆ, ವಸಾಹತುಶಾಹಿಯ ಪರಿಣಾಮವಾಗಿ, ದೇಶೀ ಮಾದರಿಗಳು ದಮನಗೊಂಡಿರುವುದನ್ನು, ಅವುಗಳಿಗೆ ಎದುರಾಗಿರುವ ಕಂಟಕಗಳನ್ನು ಮುಖ್ಯವಾಗಿ ಮಂಡಿಸುವ ಪ್ರಯತ್ನವಾಗಿದೆ.

ರಾಜೇಂದ್ರ ಚೆನ್ನಿಯವರ ಚರ್ಚೆಗಳು

'ದೇಶೀವಾದ' ಎಂಬ ಕೃತಿಯಲ್ಲಿ ರಾಜೇಂದ್ರ ಚೆನ್ನಿಯವರು ಪ್ರಾಸಂಗಿಕವಾಗಿ ನಿರ್ವಸಾಹತೀಕರಣದ ಕುರಿತು ಚರ್ಚಿಸಿದ್ದಾರೆ. ಅವರ ಪ್ರಕಾರ, "ವಸಾಹತುಶಾಹಿಯ ಆಳ್ವಿಕೆ ಹೊರಟುಹೋದ ಮೇಲೆ ದೇಶೀಯ ಸಂಸ್ಕೃತಿ ತನ್ನ ಸಾಂಸ್ಕೃತಿಕ ವ್ಯಕ್ತಿತ್ವದ ನಿಜವಾದ ಸ್ವರೂಪದ ಬಗ್ಗೆ ಕಳವಳ, ಕಸಿವಿಸಿ ಮತ್ತು ಸಂದಿಗ್ಧದ ಮನೋಭಾವನೆಯನ್ನು ತಾಳುವುದು ಸಹಜವೇ ಆಗಿದೆ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆಯುವ ಆಂದೋಲನದ ಸಾಂಸ್ಕೃತಿಕ ಪುನುರುಜ್ಜೀವನದ ಒಲವುಗಳಿಂದಾಗಿ ಸ್ವಲ್ಪ ಕಾಲದವರೆಗೆ ತೀಕ್ಷ್ಣವಾದ ಆತ್ಮವಿಮರ್ಶೆಯ ಅವಶ್ಯಕತೆ ಕಂಡುಬರುವುದಿಲ್ಲ. ಮೊಕಾಶಿಯವರ ಮಾತಿನಲ್ಲಿ ಹೇಳುವುದಾದರೆ ಏತದ್ದೇಶೀಯತೆ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಒಂದು ಒಡ್ಡಾಗಿ (filter)

ಕೆಲಸ ಮಾಡುವುದರಿಂದ ಪರಕೀಯ ಪ್ರಭಾವಗಳಿಂದ ಸಂಸ್ಕೃತಿಯ ಸ್ವಂತಿಕೆಯನ್ನು ಕಾಪಾಡುತ್ತದೆ. (1981, ಪುಟ. 12) ಆದರೆ ಸ್ವಾತಂತ್ರ್ಯದ ನಂತರ ಈ ಒಡ್ಡು ಕುಸಿಯುವುದರಿಂದ ಪರಕೀಯ ಪ್ರಭಾವಗಳನ್ನು ಅರಗಿಸಿಕೊಳ್ಳುವ ಗಟ್ಟಿಗತನ ಹೊರಟುಹೋಗಿ ಸಂದಿಗ್ಧದ ಸ್ಥಿತಿಯೊಂದು ಹುಟ್ಟಿಕೊಳ್ಳುತ್ತದೆ. ಇನ್ನೊಂದು ರೀತಿಯಲ್ಲಿ ನೋಡುವುದಾದರೆ ದೇಶೀಯ ಸಂಸ್ಕೃತಿ ಮತ್ತು ಸಾಹಿತ್ಯಗಳು ತಮ್ಮ ಸ್ವಂತಿಕೆಯ ಬಗ್ಗೆ ತೀವ್ರವಾದ ಕಾಳಜಿ ತೋರಿಸುವುದು ನಿರ್ವಸಾಹತೀಕರಣದ ಒಂದು ಅಂಶವಾಗಿದೆ."[14]

ಈ ಅಭಿಪ್ರಾಯದ ಪ್ರಕಾರ ನಿರ್ವಸಾಹತೀಕರಣವೆನ್ನುವುದು ವಸಾಹತುಶಾಹಿಗಳಿಂದ ಬಿಡುಗಡೆ ಹೊಂದಿದ ನಂತರದ ಪ್ರಕ್ರಿಯೆಯಾಗಿರುತ್ತದೆ. ಆದರೆ ನಿರ್ವಸಾಹತೀಕರಣವನ್ನು ವಸಾಹತೋತ್ತರದಲ್ಲಿ ಇದ್ದಕ್ಕಿದ್ದಂತೆ ಆರಂಭಿಸುವುದು ಸಾಧ್ಯವೇ? ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ. ರಾಷ್ಟ್ರೀಯತೆ, ಸ್ವಾತಂತ್ರ್ಯ ಚಳುವಳಿ, ಸ್ವದೇಶಿ ಚಳುವಳಿ, ಉಪ್ಪಿನ ಸತ್ಯಾಗ್ರಹ ಇತ್ಯಾದಿಗಳನ್ನು ಕಂಡಿರುವ ಭಾರತದ ಸ್ವಾತಂತ್ರ್ಯ ಚಳುವಳಿಗಳು ಈ ಬಗೆಯ ನಿರ್ವಸಾಹತೀಕರಣದ ಮೂಲ ಉದ್ದೇಶದಿಂದ ರೂಪುಗೊಡಿಂದ್ದವು. ವಸಾಹತುಶಾಹಿಯ ಆಡಳಿತದಿಂದ ಬಿಡುಗಡೆಯನ್ನು ಬಯಸಿ ಈ ಹೋರಾಟಗಳು ರೂಪುಗೊಂಡಿದ್ದರೂ ವಿಶಾಲಾರ್ಥದಲ್ಲಿ ವಸಾಹತುಶಾಹಿಗಳಿಂದ ಸಮಗ್ರವಾದ ಬಿಡುಗಡೆಯ ಹಂಬಲ ಹೊಂದಿದ್ದನ್ನು ಮನಗಾಣಬಹುದು.

ಜಿ. ಎನ್. ದೇವಿಯವರ ಚಿಂತನೆಗಳು

ಮೂಲತಃ ಇಂಗ್ಲಿಷ್ ಅಧ್ಯಾಪಕರಾದ ಜಿ. ಎನ್. ದೇವಿ After Amnesia ಎಂಬ ಕೃತಿಯಿಂದ ದೇಶೀವಾದದ ಚಿಂತನೆಯಲ್ಲಿ ಪ್ರಚಲಿತಗೊಂಡವರು. ಕೇಂದ್ರ ಸಾಹಿತ್ಯ ಅಕಾಡೆಮಿ 1995 ರಲ್ಲಿ ಕಾನ್ಪುರದಲ್ಲಿ Nativism ಕುರಿತ ವಿಚಾರ ಸಂಕಿರಣದ ಪ್ರಾಸ್ತಾವಿಕ ಭಾಷಣದ ಲೇಖನ ರೂಪವಾದ 'ದೇಶೀವಾದ'ವನ್ನು ತಾರಕೇಶ್ವರರವರು ಅನುವಾದಿಸಿದ್ದಾರೆ. ಅದರಲ್ಲಿ ಜಿ.ಎನ್. ದೇವಿಯವರು, ಪ್ರಸ್ತುತ ವಸಾಹತೋತ್ತರ ಸಂದರ್ಭದಲ್ಲಿ ಭಾರತೀಯ ಮನಸ್ಸುಗಳು ಎದುರಿಸುತ್ತಿರುವ ದ್ವಂದ್ವಗಳನ್ನು ವ್ಯಕ್ತಪಡಿಸಲು "ಇದು ಒಂದು ವ್ಯಕ್ತಿಗತ ಟಿಪ್ಪಣಿ. ಗಿರೀಶ್ ಕಾರ್ನಾಡರ ಪ್ರಸಿದ್ಧ ನಾಟಕ ಹಯವದನವನ್ನು ಆರಂಭದಲ್ಲೇ ಉಲ್ಲೇಖಿಸಲಿಚ್ಚಿಸುತ್ತೇನೆ. ಅಪರಿಪೂರ್ಣತೆ ಈ ನಾಟಕದ ವಸ್ತು. ಅರ್ಧ ವ್ಯಕ್ತಿ, ಅರ್ಧ ಕುದುರೆಯ ಪಾತ್ರವಾದ 'ಹಯವದನ'ವನ್ನು ಗಿರೀಶ್ ಕಾರ್ನಾಡರು ನಾಟಕದ ಆರಂಭದಲ್ಲೇ ಪರಿಚಯಿಸುತ್ತಾರೆ. ಸಮಕಾಲೀನ ಭಾರತದ ಬೌದ್ಧಿಕ ವಲಯದಲ್ಲಿ ವಿಮರ್ಶಕನಾಗಿ ದುಡಿಯುತ್ತಿರುವ ನನಗೆ, ನಾನೊಬ್ಬ ಬೌದ್ಧಿಕ ಹಯವದನ ಇರಬಹುದೇ

ಎಂಬ ಭಾವನೆ ಆಗಾಗ ಕಾಡುತ್ತದೆ. ನನ್ನ ದೇಹದ ಎಲ್ಲಾ ರಕ್ತಕಣಗಳೂ ಭಾರತೀಯ ಮಣ್ಣು ನೀರು ಗಾಳಿಯಿಂದ ಮಾಡಲ್ಪಟ್ಟಿದ್ದರೆ, ನನ್ನ ಮಿದುಳಿನಲ್ಲಿ ಸಂಗ್ರಹಿತವಾಗಿರುವ ಜ್ಞಾನ ಎಲ್ಲಿಂದಲೋ ಬಂದಂತೆ ಕಾಣುತ್ತದೆ"[15]

ಈ ದೃಷ್ಟಿಯಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳನ್ನು ಗಮನಿಸಿದರೆ, ಇದು ವಸಾಹತೋತ್ತರ ಭಾರತೀಯ ಮನಸ್ಸಿನಲ್ಲಿ ನೆಲೆಸಿರುವ, ವಸಾಹತುಶಾಹಿ ಆಳ್ವಿಕೆಯ ಅಳಿಸಲಾಗದ ಪ್ರಭಾವದ ಬಗೆಗಿನ ಆತಂಕವಾಗಿದೆ. ಜಾಗತೀಕರಣದ ನಂತರದಲ್ಲಿ ಇನ್ನೂ ಹೆಚ್ಚಾಗಿರುವ ಈ ಬಗೆಯ ಆತಂಕಗಳನ್ನು ಮುಖ್ಯವಾಗಿ ಪರಿಭಾವಿಸುವ ಕ್ರಮಗಳ ಹುಡುಕಾಟದ ಜೊತೆಗೆ ವಸಾಹತುಶಾಹಿಯಿಂದ ಬಿಡುಗಡೆಯ ಪ್ರಯತ್ನವು – ದೇಶದ ಸ್ವಾತಂತ್ರ್ಯ ಸಾಧನೆಯ ನಂತರದ ಆರು ದಶಕಗಳಲ್ಲಿ ಕೂಡ ಸಾಧನೆಯಾಗದೆ ಇನ್ನೂ ಹಳಹಳಿಕೆಯ ಸ್ವರೂಪದಲ್ಲಿರುವುದನ್ನು ಕಾಣಬಹುದು.

'ವಿಸ್ಮೃತಿ' ಎಂಬ ಪರಿಕಲ್ಪನೆಯ ಮೂಲಕ ಈ ಬಗೆಯ ಚರ್ಚೆಗಳನ್ನು ಮಂಡಿಸುವ ಪ್ರಯತ್ನ ನಡೆಸಿರುವ ಜಿ.ಎನ್. ದೇವಿಯವರು ಸಂಸ್ಕೃತದ ಪ್ರಭಾವ, ಆಚರಣೆ, ನಂಬಿಕೆಗಳು ಇತ್ಯಾದಿಗಳ ಬಗೆಗೆ ಭಾರತೀಯ ಮನಸ್ಸು ವಿಸ್ಮೃತಿಗೆ ಸಿಲುಕಿ ಇಬ್ಬಂದಿತನಕ್ಕೊಳಗಾಗಿರುವುದನ್ನು ಪ್ರತಿಪಾದಿಸುತ್ತಾ ನಾವು "ಸಂಪೂರ್ಣವಾಗಿ ಪಾಶ್ಚಾತ್ಯೀಕರಣದ ಹಾದಿಯನ್ನು ಒಪ್ಪಿಕೊಳ್ಳಬೇಕಾಗಿತ್ತೆಂದು ಕೆಲವೊಮ್ಮೆ ಅನಿಸುತ್ತದೆ. ಹಾಗೇನಾದರೂ ಆಗಿದ್ದರೆ ನಮ್ಮ ಸಾಂಸ್ಕೃತಿಕ ವ್ಯಕ್ತಿತ್ವ ಪರಿಪೂರ್ಣತೆ ಸಾಧಿಸಲು ಸಾಧ್ಯವಾಗಿರುತ್ತಿತ್ತು"[16] ಎಂಬ ಹಳಹಳಿಕೆಯಲ್ಲಿಯೂ ಸಮಾಧಾನವಾಗದ ಸ್ಥಿತಿಗೆ ತಲುಪುತ್ತಾರೆ.

ಈ ಬಗೆಯ ಆತಂಕಿತ, ಹಳಹಳಿಕೆಯ ಸ್ವರೂಪದ ಚಿಂತನೆಗಳ ಪೂರ್ವದಲ್ಲೇ ಜಿ.ಎನ್. ದೇವಿಯವರಿಗಿಂತ ಭಿನ್ನವಾಗಿ, ಎ.ಕೆ. ರಾಮಾನುಜನ್‌ರವರು Speaking of Siva ದ ಪ್ರಸ್ತಾವನೆಯಲ್ಲಿ ಹೀಗೆ ಹೇಳುತ್ತಾರೆ: "ಮಹಾಭಾರತದಂಥ ಸಂಸ್ಕೃತ ಮಹಾಕಾವ್ಯವು ತನ್ನ ವಿಶ್ವಕೋಶಾತ್ಮಕ ಪರಿಧಿಯಲ್ಲಿ ಬಹುತೇಕ ಜಾನಪದ ದ್ರವ್ಯಗಳನ್ನು ಒಳಗೊಂಡಿದ್ದು ಕತೆ, ನಂಬಿಕೆ, ಗಾದೆ ಮಾತುಗಳನ್ನು ಜನಪದ ಮೂಲಗಳಿಂದ ಸ್ಪಷ್ಟವಾಗಿ ಎತ್ತಿಕೊಂಡಿದೆ, ಅಲ್ಲದೆ ಅವುಗಳನ್ನು ನವೀಕರಿಸುತ್ತಾ, ಸಂಸ್ಕೃತೀಕರಿಸುತ್ತಾ ಸಂಸ್ಕೃತ ಭಾಷೆಯ ಕಲಾ ನೈಪುಣ್ಯದ ನಿತ್ಯ ನೂತನತೆಯನ್ನು ಮೆರೆದಿದೆ. ಆದರೆ, ಸುಸಂಬದ್ಧ ವಿಚಾರವೆಂದರೆ ಭಾರತದಂಥ ತೋಂಡಿ ಸಂಸ್ಕೃತಿಯಲ್ಲಿ ಸಂಸ್ಕೃತ ಮಹಾಭಾರತವೇ ಮೌಖಿಕವಾದ ಜಾನಪದ ಪರಂಪರೆಗಳೆಡೆಗೆ ಹಿಂದಿರುಗಿ ಬಂದಿದೆಯಲ್ಲದೆ,

ರೂಪಾಂತರಕ್ಕೊಳಗಾದ ಮೂಲಧಾತುಗಳನ್ನು 'ಕಿರಿಯ' ಪರಂಪರೆಗಳಿಗೆ ಕೊಡುಗೆಯಾಗಿ ನೀಡಿದ್ದು ಮರುಪ್ರಸಾರ ಮತ್ತು ಮರುದರ್ಶನಗಳಿಗೆ ಎಡೆಗೊಟ್ಟಿದೆ. 'ಅರ್ಥಾಂತರ'ಗಳ ಮಹಾಪ್ರಸ್ಥಾನದಲ್ಲಿ ಸಂಸ್ಕೃತದಿಂದ ಪ್ರಾದೇಶಿಕ ಭಾಷೆಗಳಿಗೆ 'ಅರ್ಥಾಂತರ'ಗೊಳ್ಳುತ್ತಾ, ಪ್ರಾದೇಶಿಕ ಕವಿಯೊಬ್ಬ ಅರ್ಕಗೊಳಿಸುವ ಸಮೃದ್ಧವಾದ ಸ್ಥಳೀಯ ಪರಂಪರೆಗಳಲ್ಲಿ ಸಾಗಿ ಬಂದಿದೆ. ಇಲ್ಲೆಲ್ಲ ಭಾರತ ವ್ಯಾಪ್ತಿ 'ಹಿರಿಮೆ'ಯನ್ನು ಪ್ರಾದೇಶಿಕ 'ಕಿರಿಮೆ'ಯೊಳಕ್ಕು ಪ್ರಾದೇಶಿಕ 'ಹಿರಿಮೆ'ಯನ್ನು ಪ್ರಾದೇಶಿಕ 'ಕಿರಿಯ' ಪರಂಪರೆಗಳ ಒಳಕ್ಕೂ ಸಂಯೋಜನೆ ಮಾಡಲಾಗಿದೆ. ಹೀಗೆ ಕೊಳು – ಕೊಡುಗೆಗಳ ಅನೇಕಾನೇಕ ವರ್ತುಲಗಳು ನಿರಂತರ ಚಲನೆಯಲ್ಲಿದೆ"[17]

ಇಲ್ಲಿ ಸಂಸ್ಕೃತ – ದೇಶೀ, ಜಾನಪದ ಕೊಡು – ಕೊಳುವಿಕೆಗಳ ಬಗೆಗೆ ಬರುವ ಚರ್ಚೆಯ ಇನ್ನೊಂದು ಮುಖವೆಂದರೆ Great Tradition - Little Tradition ಎನ್ನಲಾದ ಎರಡು ಪರಂಪರೆಗಳ ನಡುವೆ ಪರಸ್ಪರ ಕೊಡು – ಕೊಳುವಿಕೆಗಳಿರುವುದನ್ನು ಮುಖ್ಯವಾಗಿ ಪರಿಗಣಿಸಿರುವ ಪ್ರಯತ್ನ. ಇಂಗ್ಲಿಷ್ ಭಾಷೆಗೆ ವಚನಗಳನ್ನು ಅನುವಾದಿಸುವ ಸಂದರ್ಭದಲ್ಲಿ ವಚನಗಳನ್ನು ವಿಶ್ವಾತ್ಮಕ ದೃಷ್ಟಿಕೋನಕ್ಕೆ ಒಗ್ಗಿಸುವಲ್ಲಿ, ಈ ಬಗೆಯ ಮುಖ್ಯ ಚಿಂತನಧಾರೆಯೊಂದು ಪ್ರಕಟವಾಗಿದೆ. ವಸಾಹತುಶಾಹಿ ಆಳ್ವಿಕೆಯಿಂದ ಬಿಡುಗಡೆ ಹೊಂದಿದ ನಂತರ, ಅದೇ ವಸಾಹತುಶಾಹಿಗಳಿಗೆ, ದೇಶೀಯ ಕಾವ್ಯ ಪರಂಪರೆಯ ಅನನ್ಯತೆಯನ್ನು ಪ್ರತಿಪಾದಿಸುವ ಸಲುವಾಗಿ ಈ ಬಗೆಯ ಮುಖ್ಯ ಚಿಂತನಧಾರೆಯೊಂದು ರೂಪುಗೊಂಡಿದ್ದು, ವಸಾಹತುಗಳಲ್ಲಿರುವ ಅಸಂಖ್ಯ ತಾಳಿಕೆಯ ಗುಣಗಳಿಗೆ ಒಂದು ಉದಾಹರಣೆಯಾಗಿದೆ.

ಈ ಬಗೆಯ ದೇಶೀಯ ಮಾದರಿಗಳ ವಿಶ್ವಾತ್ಮಕಗೊಳ್ಳುವ ಅನೇಕ ಗುಣಗಳು ಇಂದಿಗೂ ಶೋಧಿತವಾಗಬೇಕಾಗಿದೆ. ಆಗ ಹಳಹಳಿಕೆಯ ಬದಲು, ಪರಿಪೂರ್ಣತೆಯ ಹುಡುಕಾಟದ ಬದಲು ನಿಜವಾದ ಬಿಡುಗಡೆಯ ದಾರಿ ಲಭಿಸಬಹುದೆನಿಸುತ್ತದೆ.

ರಹಮತ್ ತರೀಕೆರೆಯವರ ಚರ್ಚೆಗಳು

ರಹಮತ್ ತರೀಕೆರೆಯವರು, 'ಮರದೊಳಗಣ ಕಿಚ್ಚು' ಎಂಬ ಕೃತಿಯ 'ತೊಡಕು' ಎಂಬ ಭಾಗದಲ್ಲಿ ಮುಖ್ಯವಾಗಿ ಸಂಸ್ಕೃತೀಕರಣ, ಸುಧಾರಣಾವಾದ, ಸಮನ್ವಯವಾದ, ನಿರ್ವಸಾಹತೀಕರಣದ ದುಡುಕು ಇತ್ಯಾದಿ ವಿಭಾಗ ಕ್ರಮದಲ್ಲಿ ಸಂಸ್ಕೃತಿ–ಪ್ರತಿಸಂಸ್ಕೃತಿ ಹಾಗೂ ವಸಾಹತುಶಾಹಿಗಳು ಇವುಗಳ ಗ್ರಹಿಕೆಯ ಕ್ರಮದ ಮೇಲೆ ಬೀರಿದ

ಪರಿಣಾಮಗಳನ್ನು ವಿಶ್ಲೇಷಿಸಲು ನಿರ್ವಸಾಹತೀಕರಣದ ಬಗ್ಗೆ ಪ್ರಸ್ತಾಪಿಸುತ್ತಾರೆ. ರಹಮತ್ ತರೀಕೆರೆಯವರು 'ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ನಿರ್ವಸಾಹತೀಕರಣವಾದಿ ಘಟ್ಟದ ಬಗೆಗೆ ಹೀಗೆ ಚರ್ಚಿಸುತ್ತಾರೆ:

"ಕರ್ನಾಟಕದ ಚಿಂತನೆಯ ಇತಿಹಾಸವೆಂದರೆ, ವಿವಿಧ ಸಮುದಾಯಗಳು ಅಥವಾ ಗುಂಪುಗಳು ಎಚ್ಚೆತ್ತ ಘಟ್ಟಗಳು ನಿರಂತರವಾಗಿ ಬರುವುದು. ಅದರಲ್ಲಿ 60ರ ದಶಕದಲ್ಲಿ ಉಚ್ಚ ಜಾತಿಯ ಪ್ರಜ್ಞಾವಂತರಿಗೆ ಬಂದ ಎಚ್ಚರದ ಘಟ್ಟವೂ ಒಂದು. ಪಾಶ್ಚಿಮಾತ್ಯ ಪ್ರಭಾವಕ್ಕೆ ತನ್ನನ್ನು ಅತಿಯಾಗಿ ತೆರೆದುಕೊಂಡು, ಅದು ತಪ್ಪೆಂದು ಅನಿಸಿ, ಒಂದು ಬಗೆಯ ಜ್ಞಾನೋದಯದ ಮನಸ್ಥಿತಿಯಲ್ಲಿದ್ದ ಈ ವರ್ಗಕ್ಕೆ ಎರಡು ಸಂಗತಿಗಳಿಂದ ಬಿಡುಗಡೆ ಪಡೆಯಬೇಕೆನಿಸಿತು. ಒಂದು, ಸನಾತನವಾದಿಯಾದ ಬ್ರಾಹ್ಮಣವಾದಿಂದ, ಎರಡು ಅತಿಯಾಗಿ ಪಾಶ್ಚಾತ್ತೀಕರಣಗೊಳ್ಳುತ್ತಿದ್ದ ವಿಚಾರ ಕ್ರಮಗಳಿಂದ. ಇಂತಹ ಇಬ್ಬದಿಯ ಬಿಡುಗಡೆಗಾಗಿ ಏಕಕಾಲಕ್ಕೆ ಇದು ಬ್ರಾಹ್ಮಣ ಹಿಂದೂ ಹಾಗೂ ಯೂರೋಪು ಎರಡನ್ನೂ ವಿಮರ್ಶಿಸಬೇಕಾಯಿತು. ಸ್ಥಳೀಯ ಬದುಕಿನಲ್ಲಿ ಬೇರುಬಿಡಬೇಕಾಯಿತು"[18] ಎಂಬ ಅಭಿಪ್ರಾಯಕ್ಕೆ ಬಂದು, ಮುಂದೆ ಈ ನಿರ್ವಸಾಹತೀಕರಣದ ಚರ್ಚೆಯಲ್ಲಿರುವ ಆರಂಭಿಕ ಘಟ್ಟದಲ್ಲಿಯೆ ಎದುರಾದ ಒಳ ಮತ್ತು ಹೊರ ವಸಾಹತುಶಾಹಿಗಳೆರಡರಿಂದಲೂ ಬಿಡುಗಡೆಯ ಪ್ರಕ್ರಿಯೆಯೆ ನಿರ್ವಸಾಹತೀಕರಣ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಮುಂದಿನ ಹಂತದಲ್ಲಿ ಶೂದ್ರವಾದಿ, ದಲಿತವಾದಿ, ಎಡವಾದಿ, ಆಧುನಿಕೋತ್ತರವಾದಿ ಘಟ್ಟಗಳಲ್ಲಿ ಮುಂದುವರೆದ ಈ ಚಿಂತನೆಯನ್ನು ದಾಖಲಿಸುತ್ತಾರೆ.[19]

ನಟರಾಜ್ ಹುಳಿಯಾರ್‌ರವರ ಚಿಂತನೆಗಳು

'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' ಎಂಬ ಸಂಶೋಧನಾ ಕೃತಿಯಲ್ಲಿ ಅಧ್ಯಯನದ ತಾತ್ವಿಕ ಭಿತ್ತಿಯಾಗಿ ನಿರ್ವಸಾಹತೀಕರಣ ಪ್ರಕ್ರಿಯೆಯನ್ನು ಚರ್ಚಿಸುವ ನಟರಾಜ್ ಹುಳಿಯಾರ್‌ರವರು, ವಸಾಹತುವಾದೀ ಸಂಕಥನಗಳ ಮೂಲಕ ದೇಶೀ ಜೀವನ ಮಾದರಿಗಳನ್ನು ವಸಾಹತುಶಾಹಿಗಳ ಕಟ್ಟುವಿಕೆ ಹಾಗೂ ಅದಕ್ಕೆ ವಸಾಹತುಗಳು ಒಡ್ಡುವ ಪ್ರತಿರೋಧಗಳ ನೆಲೆಯಲ್ಲಿರುವ ಮುಖಾಮುಖಿಗಳನ್ನು ಪರಿಶೀಲಿಸುತ್ತಾ ನಿರ್ವಸಾಹತೀಕರಣದ ಸಾಧ್ಯತೆ, ಸವಾಲುಗಳೆರಡನ್ನೂ ಮಂಡಿಸುತ್ತಾರೆ.

ಕನ್ನಡದಲ್ಲಿ ನಡೆದಿರುವ ನಿರ್ವಸಾಹತೀಕರಣದ ಬಗೆಗೆ, ನಟರಾಜ್ ಹುಳಿಯಾರ್ ಅವರ ಅಭಿಪ್ರಾಯಗಳೆಂದರೆ : "ನಿರ್ವಸಾಹತೀಕರಣದ ಕಲ್ಪನೆ ಕುರಿತು ಆಫ್ರಿಕನ್ ಸಾಹಿತ್ಯ

ಹಾಯ್ದು ಬಂದಿರುವ ತೀವ್ರ ವಾಗ್ವಾದಗಳ ಘಟ್ಟಗಳನ್ನು ಕನ್ನಡ ಸಾಹಿತ್ಯ ಹಾಯ್ದು ಬಂದಿಲ್ಲವಾದರೂ ಸೃಜನಶೀಲ ಲೇಖಕರು ತಳೆಯುತ್ತಾ ಬಂದಿರುವ ನಿಲುವುಗಳಲ್ಲಿ ಹಾಗೂ ನಡೆಸುತ್ತಾ ಬಂದಿರುವ ಪ್ರಯೋಗಗಳಲ್ಲಿ ಈ ನಿರ್ವಸಾಹತೀಕರಣದ ಹಂಬಲ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಹಂತಗಳಲ್ಲಿ ಪ್ರಕಟವಾಗುತ್ತಾ ಬಂದಿದೆ. ಎಂ.ಎಸ್.ಪುಟ್ಟಣ್ಣನವರ ಆರಂಭದ ಕಾದಂಬರಿಗಳ ಕಥನ ತಂತ್ರದಿಂದ ಹಿಡಿದು ದೇವನೂರ ಮಹಾದೇವರ ದೇಶೀ ವಾಸ್ತವವಾದೀ ನೋಟದವರೆಗೂ, ಮಾಸ್ತಿಯಿಂದ ಕಂಬಾರರವರೆಗಿನ ತಾತ್ವಿಕ ಜಗತ್ತಿನವರೆಗೂ ಈ ನಿರ್ವಸಾಹತೀಕರಣದ ತುಡಿತ ಹೆಚ್ಚು ಅಬ್ಬರವಿಲ್ಲದೆ ತನ್ನ ಕೆಲಸ ಮಾಡುತ್ತಾ ಬಂದಿದೆ. ಶಂಕರ ಮೊಕಾಶಿ ಪುಣೇಕರ ಹಾಗೂ ಭವದ ನಂತರದ ಅನಂತಮೂರ್ತಿಯವರಲ್ಲಿ ಈ ನಿರ್ವಸಾಹತೀಕರಣದ ಹಂಬಲ ಹೆಚ್ಚು ಪ್ರಜ್ಞಾಪೂರ್ವಕವಾಗಿ ಕಾಣುತ್ತಾ ಬಂದಿದೆ"[19ಅ]

ಆಧುನಿಕೋತ್ತರ ಸಂದರ್ಭದಲ್ಲಿ ವಸಾಹತುವಾದಿಗಳು ಕಟ್ಟಿರುವ ಸಂಕಥನಗಳಿಗೆ ಮುಖಾಮುಖಿಯಾಗುವ ವಸಾಹತು ವಿರೋಧೀ ಸಿದ್ಧಾಂತಗಳ ಸ್ವರೂಪವು ನಿರ್ವಸಾಹತೀಕರಣದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. "'ನಾಗರಿಕತೆ,' 'ಅಭಿವೃದ್ಧಿ,' 'ಆಧುನಿಕತೆ', 'ಚರಿತ್ರೆ' 'ಸಂಸ್ಕೃತಿ ಪ್ರಸಾರ' 'ವಿಜ್ಞಾನ' ಎಂಬ ಹೊಸ ನೆಲೆಗಳು ರೂಪಿಸಿದ ಮಹಾಕಥನಗಳು ಅಥವಾ ಅಧಿಕಾರಸ್ಥ ಸಂಕಥನಗಳ ಮೂಲಕ ಆಧುನಿಕ ಪಶ್ಚಿಮವು 'ಅನಾಗರಿಕ,' 'ಹಿಂದುಳಿದ' ಹಾಗೂ 'ಸಾಂಪ್ರದಾಯಿಕ' ಸಮಾಜಗಳಾದ ವಸಾಹತುಗಳಲ್ಲಿ ತಾನು ರೂಪಿಸಿಕೊಂಡ ಸ್ವ-ಪ್ರತಿಬಿಂಬದ ಸ್ವರೂಪವನ್ನು ಈವರೆಗೆ ಚರ್ಚಿಸಲಾದ ಆಫ್ರಿಕನ್ ಹಾಗೂ ಭಾರತೀಯ ವಸಾಹತು ವಿರೋಧೀ ಸಿದ್ಧಾಂತಗಳು ಹೇಳುತ್ತವೆ. ಇಂಥ ತನ್ನ ಸ್ವ-ಪ್ರತಿರೂಪವನ್ನು ಸೃಷ್ಟಿಸಿಕೊಂಡ ವಸಾಹತುವಾದೀ ಸಂಸ್ಕೃತಿ ತನ್ನ ಆಕ್ರಮಣಕ್ಕೊಳಗಾದ ಸಂಸ್ಕೃತಿಗಳಲ್ಲಿ ಗುರುತಿಸುವ ಸಾಧನೆಗಳೇನಾದರೂ ಇದ್ದರೆ, ಅವು ಕಲೆ, ಧರ್ಮ, ಜಾನಪದೀಯ ಜ್ಞಾನದಂತ ಕ್ಷೇತ್ರಗಳಲ್ಲಿ ಅಥವಾ ಆ ಸಂಸ್ಕೃತಿಗಳ ಕೆಲವು 'ವಿಲಕ್ಷಣ' ಅಂಶಗಳಲ್ಲಿ ಮಾತ್ರ. ಆದರೆ ಆಧುನಿಕ ಜಗತ್ತಿನಲ್ಲಿ ಗೆಲ್ಲುವ, ಉಳಿಯುವ ಗುಣಗಳಾಗಲೀ, ಶ್ರೇಷ್ಠ ಗುಣಗಳಾಗಲೀ ಇರುವುದು ತನ್ನಲ್ಲಿ ಮಾತ್ರ ಎಂಬುದು ಅದರ ದೃಢ ನಂಬಿಕೆ."[20] ಈ ಬಗೆಯಲ್ಲಿ ವಸಾಹತುವಾದುವು ವಸಾಹತುಗಳನ್ನು ದಮನ ಮಾಡಲು ಆಕ್ರಮಣಕಾರಿಯಾಗಿ ವ್ಯವಸ್ಥಿತ ರೂಪಣೆಗಳನ್ನು ಹತಾರಗಳಾಗಿ ಬಳಸುವ ಸಮಯದಲ್ಲಿ ಅನೇಕ ಹೇರಿಕೆಯ ಕ್ರಮಗಳನ್ನು ದೇಶೀ ಜೀವನ ಪದ್ಧತಿ, ಲೋಕಗ್ರಹಿಕೆ, ನೋಟಕ್ರಮಗಳ ಮೇಲೆ ಬಲವಂತವಾಗಿ, ಕೆಲವೊಮ್ಮೆ ಸಮ್ಮತಿ ಪಡೆದು ಒಪ್ಪಿಸಲಾಗುತ್ತದೆ ಎಂಬುದನ್ನು ನಟರಾಜ್ ಹುಳಿಯಾರ್ ಅವರು ಪ್ರತಿಪಾದಿಸುತ್ತಾರೆ.

ಈ ಬಗೆಯ ವಿರಾಟ್ ಕಥನಗಳು ಆಧುನಿಕೋತ್ತರ ಸಂದರ್ಭದಲ್ಲಿ ಮತ್ತಷ್ಟು ವ್ಯವಸ್ಥಿತವಾಗಿ ಬಳಕೆಯಾಗುತ್ತಿರುವ ಸಂದರ್ಭದಲ್ಲಿ ವಸಾಹತುಶಾಹಿಗಳ ಈ ಬಗೆಯ ಪ್ರಯತ್ನಗಳನ್ನು ಮುದುವರೆಸುತ್ತಿರುವ ನವವಸಾಹತುಶಾಹಿಗಳ ಕ್ರಮಗಳನ್ನು ಅರಿಯಲು ಈ ಚಿಂತನೆಗಳು ಉಪಯುಕ್ತವೆನಿಸುತ್ತವೆ.

ಸಾಂಸ್ಕೃತಿಕ ರಾಜಕಾರಣದ ಭಾಗವಾಗಿರುವ ವಸಾಹತುವಾದಿ ಸಂಕಥನವನ್ನು ನಿರಚಿಸಿಕೊಳ್ಳದೆ, ನಿರ್ವಸಾಹತೀಕರಣದ ಚರ್ಚೆಗಳು ಮುಂದೆ ಸಾಗಲು ಅನೇಕ ಅಡೆತಡೆಗಳು ಎದುರಾಗುವುದರಿಂದ, ಈ ಅನೇಕ ಬಗೆಯ ವಸಾಹತುವಾದಿ ರೂಪಣೆಗಳನ್ನು ಪ್ರಶ್ನಿಸುವ ದೇಶೀ ಮಾದರಿಗಳ ಬಹುಮುಖತೆಯನ್ನು ಏಕರೂಪೀಕರಣಗೊಳಿಸುವ ವಸಾಹತುಶಾಹಿಗಳು ಏಕತೆ, ರಾಷ್ಟ್ರೀಯತೆಯ ಹೆಸರಿನಲ್ಲಿ ಒಡೆದು ಆಳುವ, ಆ ಮೂಲಕ ತಾವು ನಿರಂತರವಾಗಿ ಮುಂದುವರೆಯುವ ಸಾಧ್ಯತೆಗಳತ್ತ ಆಲೋಚಿಸುತ್ತಿದ್ದರು. ತಾವು ಆಳುವವರು, ವಸಾಹತುಗಳು ಆಳಿಸಿಕೊಳ್ಳಬೇಕಾದವರೆಂದು ಸಂಕಥನವನ್ನು ಕಟ್ಟಿ, ವಸಾಹತುಗಳನ್ನು ದಮನ ಮಾಡುವ ಆಕ್ರಮಣಕಾರಿ ಸಿದ್ಧಾಂತವನ್ನು ಹುಟ್ಟುಹಾಕಿದರು.

ವಸಾಹತುಶಾಹಿಗಳ ಈ ಬಗೆಯ ಏಕರೂಪೀಕರಣದ ಬಗ್ಗೆ ನಟರಾಜ್ ಹುಳಿಯಾರ್‌ರವರು ಅದು ಸೃಷ್ಟಿಸುವ ಹಿಂಸೆಯ ಮಾದರಿಗಳ ಪರಿಶೀಲನೆಯನ್ನು ನಡೆಸುತ್ತಾ ಈ ಅಭಿಪ್ರಾಯನ್ನು ವ್ಯಕ್ತಪಡಿಸುತ್ತಾರೆ. "ಇಂಥ ಯಜಮಾನಿಕೆಯ ಧೋರಣೆಯಿಂದ ಹೊರಟು ದೇಶೀ ಸಂಸ್ಕೃತಿಗಳ ದೈವೀ ನೆಲೆಗಳನ್ನು, ಬಹುರೂಪಿ ಗುಣವನ್ನೂ, ನ್ಯಾಯ ಬದ್ಧತೆಯನ್ನು ನಾಶಮಾಡಿ ಒಂದೇ ರೂಪದ ಯಾಂತ್ರಿಕ ಸಮಾಜವನ್ನೂ, ಆಧುನಿಕ ಹಿಂಸೆಗಳ ನೆಲೆಗಳನ್ನು ಸೃಷ್ಟಿಸುವ ವಸಾಹತು ಅನುಭವವನ್ನು ಮೂಲತಃ ಹಿಂಸೆಯ ಅನುಭವವನ್ನಾಗಿಯೇ ಈ ವರೆಗೆ ಚರ್ಚಿಸಲಾದ ವಸಾಹತು ವಿರೋಧಿ ಸಿದ್ಧಾಂತಗಳು ಗ್ರಹಿಸುತ್ತವೆ"[21]

ಆದುದರಿಂದ ಆಧುನಿಕ ವಸಾಹತುವಾದವನ್ನು ಚರ್ಚಿಸುವಾಗ ಈ ವಸಾಹತು ವಿರೋಧೀ ಸಿದ್ಧಾಂತಗಳ ಪ್ರಧಾನ ಧ್ವನಿ ಪಶ್ಚಿಮದ ವಿರೋಧಿಯಾಗುವುದು ಸಹಜವೆಂದು ನಟರಾಜ್ ಹುಳಿಯಾರ್‌ರವರು ಅಭಿಪ್ರಾಯ ವ್ಯಕ್ತಪಡಿಸುತ್ತಾ : "ಇದಕ್ಕೆ ತದ್ವಿರುದ್ಧವಾಗಿ ದೇಶೀ ಪರಂಪರೆಗಳ ಮಹತ್ವವನ್ನು ಪ್ರತಿಪಾದಿಸುವ ಭಾರತದ ನಿರ್ವಸಾಹತೀಕರಣದ ಚಿಂತಕರಾದ ಬಿಖುಪರೇಖ್, ಅಶೀಶ್ ನಂದಿ, ಗೌರಿ ವಿಶ್ವನಾಥನ್ ಮೊದಲಾದವರಿಗೆ ಭಾರತೀಯ ಚಿಂತನೆ ಎನ್ನುವುದು ಮುಖ್ಯವಾಗಿ ಗ್ರಾಂಥಿಕ ಭಾರತದಲ್ಲಿ ಕಾಣುತ್ತದೆಯೇ

ಹೊರತು, ಜಾನಪದ ಕತೆ, ಕಾವ್ಯ, ದೇಶೀ ಮಹಾಕಾವ್ಯಗಳು, ಗಾದೆಗಳ ಜೀವಂತ ಭಾರತ ಅಷ್ಟು ಮುಖ್ಯವಾಗಿ ಕಾಣುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಈ ಚಿಂತಕರು ಅನಾಧುನಿಕ ಭಾರತವನ್ನು ಆಗಾಗ್ಗೆ ಪ್ರಸ್ತಾಪಿಸಿದರೂ, ಒಟ್ಟಾರೆಯಾಗಿ ಅನಾಧುನಿಕ ಭಾರತವಿನ್ನೂ ಈ ಸಿದ್ಧಾಂತಗಳಲ್ಲಿ ಕೇವಲ ಪರಿಕಲ್ಪನೆಯಾಗೆ ಉಳಿದಿದೆ. ಅನಾಧುನಿಕ ಭಾರತದ ಅವೈದಿಕ ಚಿಂತನೆಗಳನ್ನು ಡಿ. ಆರ್. ನಾಗರಾಜ್ ಅವರು ಸಂಪಾದಿಸಿರುವ ಅಕ್ಷರ ಚಿಂತನ ಮಾಲೆಯ ಕೆಲವು ಪುಸ್ತಕಗಳು ಮಂಡಿಸಲೆತ್ನಿಸಿವೆ."[22]

ನಟರಾಜ್ ಹುಳಿಯಾರ್‌ರವರು ಭಾರತೀಯ ನಿರ್ವಸಾಹತೀಕರಣದ ಪ್ರಕ್ರಿಯೆಯಲ್ಲಿ ಅವೈದಿಕ ಚಿಂತನೆಯ ಪ್ರಸ್ತುತತೆ ಮುಖ್ಯವೆಂಬುದನ್ನು ಪ್ರತಿಪಾದಿಸುತ್ತಾ, ಆಧುನಿಕೋತ್ತರ ಸಂದರ್ಭದಲ್ಲಿ ಆಧುನಿಕ ಪೂರ್ವದ ಅಥೆಂಟಿಸಿಟಿಯ ಪ್ರಶ್ನೆಗಳನ್ನು ಉತ್ತರಿಸುವ ಬಗೆ ಹೇಗೆ ಎಂಬ ಪ್ರಶ್ನೆಯೊಂದನ್ನು ನಮ್ಮ ಮುಂದಿರಿಸುತ್ತಾರೆ. ಈ ಪ್ರಶ್ನೆಯು ನಿರ್ವಸಾಹತೀಕರಣದ ಸಂದರ್ಭದಲ್ಲಿ ಅನಿವಾರ್ಯವಾದುದಾಗಿದೆ. ಏಕೆಂದರೆ ನಿರ್ವಸಾಹತೀಕರಣದ ಪ್ರಕ್ರಿಯೆಯಲ್ಲಿ ವಸಾಹತುಶಾಹಿಯ ದಮನ ಹಾಗೂ ದೇಶೀ ವಸಾಹತುಶಾಹಿಗಳಿಬ್ಬರಿಂದಲೂ ಬಿಡುಗಡೆ ಹೊಂದುವುದು ನಿಜವಾದ ನಿರ್ವಸಾಹತೀಕರಣವಾಗುತ್ತದೆಯೇ ಹೊರತು, ಪಶ್ಚಿಮದಿಂದ ಬಿಡುಗಡೆ ಹೊಂದುವುದಷ್ಟೇ ಅಲ್ಲ. ಅದನ್ನು ನಟರಾಜ್ ಹುಳಿಯಾರ್ ಅವರೇ ಸ್ಪಷ್ಟಪಡಿಸಲು : "ವಸಾಹತುವಾದೀ ನೋಟಕ್ರಮ ಪೂರ್ವವನ್ನೂ, ಪಶ್ಚಿಮವನ್ನೂ ಬಿಡದೆ ಕಬಳಿಸುತ್ತಿರುವಾಗ, ಆಧುನಿಕ ಪೂರ್ವ ನೋಟಕ್ರಮಗಳ ಪ್ರತಿಪಾದನೆಯನ್ನು ಕುರಿತಂತೆ ಈ ಸಿದ್ಧಾಂತಗಳ ನಿಲುವು ನ್ಯಾಯಬದ್ಧವೆಂಬಂತೆ ಕಾಣತೊಡಗುತ್ತದೆ. ಆದರೆ ಇಲ್ಲೊಂದು ಮುಖ್ಯ ಮಿತಿಯಿದೆ. ಅದೇನೆಂದರೆ, ದೇಶೀ ಸಮಾಜಗಳ ಪಾರಂಪರಿಕ ಹಿಂಸೆಗಳನ್ನು ಅಚೀಬೆ, ಷೋಯಿಂಕಾ, ಕುವೆಂಪು, ತೇಜಸ್ವಿ, ಅನಂತಮೂರ್ತಿ, ಲಂಕೇಶ್, ಮಹಾದೇವ ಮೊದಲಾದ ಲೇಖಕರ ಸಾಹಿತ್ಯ ಕೃತಿಗಳು ಗ್ರಹಿಸಿದಂತೆ ಈ ಸಿದ್ಧಾಂತಗಳು ಗ್ರಹಿಸುವುದಿಲ್ಲ"[23] ಎನ್ನುತ್ತಾ, ಈ ಬಗೆಯ ಗ್ರಹಿಕೆಗೆ ಫುಲೆ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಪೆರಿಯಾರ್‌ರವರ ಚಿಂತನೆಗಳಿಂದ ಪ್ರೇರಣೆ ಪಡೆದ ನಿರ್ವಸಾಹತೀಕರಣದ ಚಿಂತನೆಗಳು ಪಶ್ಚಿಮದ ಚಿಂತನೆಗಳಿಗಿಂತ ಭಿನ್ನವಾಗುವ ಸಾಧ್ಯತೆಗಳನ್ನು ತಮ್ಮ ಚರ್ಚೆಯಲ್ಲಿ ಬಳಸುತ್ತಾರೆ.

ಭಾಷಿಕ ನಿರ್ವಸಾಹತೀಕರಣದ ಚಿಂತನೆಗಳು

ಡಿ.ಎನ್.ಶಂಕರಬಟ್‌ರವರು ಕಾಲಾನುಕ್ರಮದಲ್ಲಿ ಬೆಳೆಸಿದ ಭಾಷಿಕ ನಿರ್ವಸಾಹತೀಕರಣದ ಸಾಧ್ಯತೆಗಳ ಶೋಧಗಳು ಮುಖ್ಯವಾದವು. ಅವರ ಕೃತಿಗಳಾದ

'ಕನ್ನಡ ನುಡಿ ನಡೆದು ಬಂದ ದಾರಿ' (೨೦೦೭), 'ಕನ್ನಡ ಬರಹವನ್ನು ಸರಿಪಡಿಸೋಣ!' (೨೦೦೫), 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' (೨೦೦೬), 'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?' (೨೦೦೫), 'ಕನ್ನಡ ಪದಗಳ ಒಳರಚನೆ' (೧೯೯೯), 'ಕನ್ನಡದ ಸರ್ವನಾಮಗಳು' (೨೦೦೩), 'ಬಾಶೆಯ ಬಗೆಗೆ ನೀವೇನು ಬಲ್ಲಿರಿ?' (೨೦೦೨), 'ಕನ್ನಡ ವಾಕ್ಯಗಳ ಒಳರಚನೆ' (೨೦೦೬), 'ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು' (೨೦೦೮) ಗಳಲ್ಲಿ ಕನ್ನಡ ಭಾಷೆಯಲ್ಲಿ ಸಂಸ್ಕೃತದ ವ್ಯಾಕರಣ, ಪದಸಂಪತ್ತು, ಮಹಾಪ್ರಾಣಗಳು, ಭಾಷಿಕ ರಚನೆ ಮೊದಲಾದುವುಗಳಲ್ಲಿ ಇಂದಿಗೂ ಮುಂದುವರೆದಿರುವ ಸಂಸ್ಕೃತದ ಪ್ರಭಾವವನ್ನು ಪ್ರಶ್ನಿಸುತ್ತಾ, ಅದರ ಬದಲಿಗೆ ಕನ್ನಡದ ಸಾಧಿತ ರೂಪಗಳನ್ನು ಪದ, ವಾಕ್ಯ, ಪದ ಸಮುಚ್ಚಯಗಳನ್ನು ಬಳಸುವ ಪ್ರಯೋಗವೊಂದನ್ನು ಮಂಡಿಸುತ್ತಿದ್ದಾರೆ.

ಕನ್ನಡವು ಎದುರಿಸುತ್ತಿರುವ ಆತಂಕಗಳತ್ತ ಗಮನ ಸೆಳೆಯುವ ಶಂಕರಬಟ್ಟರು "ಕನ್ನಡ ಬರಹ ಇವತ್ತು ಒಂದು ಸಂಧಿ ಕಾಲವನ್ನು ಎದುರಿಸುತ್ತಿದೆ. ಕರ್ನಾಟಕದ ನಗರಗಳಲ್ಲಿ ವಾಸಿಸುವ ಮೇಲ್ವರ್ಗದವರ ಮಕ್ಕಳಿಗೆಲ್ಲ ಈಗಾಗಲೇ ಅದು ಅನವಶ್ಯಕವಾಗಿದೆ. ಬರಹದ ಮೂಲಕ ಎಂತಹ ಪ್ರಯೋಜನಗಳನ್ನೆಲ್ಲ ಪಡೆಯಲು ಸಾಧ್ಯವೋ ಅವನ್ನೆಲ್ಲ ಇಂಗ್ಲಿಷ್ ಬರಹದ ಮೂಲಕವೇನೆ ಅವರು ಈಗ ಪಡೆಯಬಲ್ಲವರಾಗಿದ್ದಾರೆ"[24] ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪ್ರಸ್ತುತ ನಗರದ ಯಾವ ವರ್ಗದವರಿಗೂ ಕನ್ನಡವನ್ನು ಹೊರತು ಪಡಿಸಿಯೇ ಜೀವಿಸುವ ಅನೇಕ ಅವಕಾಶಗಳನ್ನು ಕಲ್ಪಿಸಬಲ್ಲ ಆಧುನಿಕತೆಯ, ಉದ್ಯೋಗಾವಕಾಶದ ಅನೇಕ ಸಾಧ್ಯತೆಗಳ ಹೆಚ್ಚಳವಾಗಿರುವುದರಿಂದ, ಇಂದು, ಬೆಂಗಳೂರಿನಲ್ಲಿ ಕನ್ನಡ ಭಾಷೆಯು ಅನಿವಾರ್ಯವೆನಿಸುವ ವಾತಾವರಣವೇ ಇಲ್ಲವಾಗಿದೆ. ಈ ಬಗೆಯ ಬೆಳವಣಿಗೆಗಳು ಭಾಷೆಯ ಬಗೆಗೆ ದೂರಗಾಮಿಯಾಗಿ ಅನೇಕ ಕೆಟ್ಟ ಪರಿಣಾಮಗಳನ್ನು ಬೀರುತ್ತವಾದ್ದರಿಂದ, ಭಾಷೆಯನ್ನು ಸಾರ್ವತ್ರಿಕಗೊಳಿಸುವ ಸಲುವಾಗಿ ಅನೇಕ ಕ್ರಮಗಳನ್ನು, ಆವಿಷ್ಕಾರಗಳನ್ನು ಮಂಡಿಸುವ ಶಂಕರಬಟ್ಟರು:

"ನಮ್ಮ ಸಮಾಜದ ಉಳಿದ ಮಕ್ಕಳೂ ಇದೇ ದಾರಿಯನ್ನು ಹಿಡಿದಲ್ಲಿ ಕ್ರಮೇಣ ಕನ್ನಡ ಬರಹಕ್ಕೆ ಸಂಸ್ಕೃತ ಬರಹದ ಅವಸ್ಥೆಯೇ ಬಂದೀತು"[25] ಎಂಬ ಆತಂಕವನ್ನು ವ್ಯಕ್ತಪಡಿಸುತ್ತಾರೆ. "ಈ ಸಂಧಿ ಕಾಲದಲ್ಲಿ ನಮ್ಮ ಸಮಾಜ ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಎಂಬುದರ ಮೇಲೆ ಕನ್ನಡ ಬರಹದ ಅಳಿವು ಇಲ್ಲವೇ ಉಳಿವು ಅವಲಂಬಿಸಿದೆ ಎಂದು ನನಗೆ ತೋರುತ್ತದೆ"[26] ಎನ್ನುತ್ತಾ, ಕನ್ನಡವನ್ನು ಆಧುನಿಕ

ಸಂದರ್ಭದಲ್ಲಿ ಜನೋಪಯೋಗಿ ಭಾಷೆಯಾಗಿ ಬೆಳೆಸುವ ಅನೇಕ ಕ್ರಮಗಳನ್ನು ಮುಂದಿಡುತ್ತಾರೆ.

ಜ್ಞಾನದ ಪ್ರಜಾಪ್ರಭುತ್ವೀಕರಣದ ಒಂದು ಸಾಧ್ಯತೆಯಾಗಿ ಬರಹವನ್ನು ಎಲ್ಲರ ಸ್ವತ್ತಾಗಿಸುವುದರ ಬಗ್ಗೆ ಅವರು, "ಕನ್ನಡ ಬರಹ ಮೇಲ್ವರ್ಗದವರ ಸೊತ್ತಾಗಿ ಮಾತ್ರವೇ ಉಳಿಯದೆ ಎಲ್ಲರ ಸೊತ್ತಾಗಬೇಕು ಮತ್ತು ಕನ್ನಡ ಬರಹದ ಬಳಕೆಯ ಮೂಲಕ ಇವತ್ತು ಮೇಲ್ವರ್ಗದವರು ಮಾತ್ರವೇ ಪಡೆಯುತ್ತಿರುವ ಹಲವು ರೀತಿಯ ಪ್ರಯೋಜನಗಳನ್ನು ಎಲ್ಲಾ ವರ್ಗದ ಕನ್ನಡಿಗರೂ ಸಮಾನವಾಗಿ ಪಡೆಯುವ ಹಾಗಾಗಬೇಕು ಎಂಬ ಕಳಕಳಿಯಿಂದ ಈ ಪುಸ್ತಕವನ್ನು ಬರೆಯಲು ಹೊರಟಿದ್ದೇನೆ"[27] ಎನ್ನುತ್ತಾರೆ.

ಶಂಕರಬಟ್ಟರ ಈ ವಿಚಾರಗಳು, ಭಾಷೆಯ ಬಳಕೆ, ಪ್ರಯೋಗದಲ್ಲಿರುವ ಸಾಮಾಜಿಕ ಅಂತಸ್ತಿಗೆ ಸಂಬಂಧಿಸಿದಂತೆ ಬಳಕೆಯಲ್ಲಾಗುತ್ತಿರುವ ವ್ಯತ್ಯಾಸಗಳ ಪರಿಣಾಮವಾಗಿ, ಭಾಷೆಯ ಬಳಕೆಗೆ ಹಿಂಜರಿಯುವ ಪ್ರವೃತ್ತಿಯನ್ನು ಗಮನದಲ್ಲಿಟ್ಟುಕೊಂಡದ್ದಾಗಿದೆ. ಅಲ್ಲದೆ ಈ ಕಾರಣಗಳಿಂದಾಗಿ ಸಾರ್ವಜನಿಕವಾಗಿ ಭಾಷೆಯನ್ನು ಸಂವಹನ, ಭಾಷಣಗಳಿಗೂ ಬಳಸದಿರುವ ಅನೇಕ ಸಮಸ್ಯೆಗಳನ್ನು ಪರಿಶೀಲಿಸುತ್ತಾರೆ. ಅವರು ಕನ್ನಡ ಭಾಷೆಯು ಸಂಸ್ಕೃತವನ್ನು ಅನವಶ್ಯಕವಾಗಿ ಅನುಕರಿಸುತ್ತಾ ಕನ್ನಡ ಭಾಷೆಯು ಜನರಿಂದ ದೂರವಾಗುತ್ತಿರುವುದಕ್ಕೆ ಎರಡು ಕಾರಣಗಳನ್ನು ನೀಡುತ್ತಾರೆ. 1. ಕನ್ನಡದಲ್ಲಿ ಕನ್ನಡದ ವರ್ಣಮಾಲೆಗಳ ಜೊತೆಗೆ ಸಂಸ್ಕೃತ ವರ್ಣ ಮಾಲೆಗಳನ್ನು ಬಳಸುತ್ತಿರುವುದು, 2. ಅವಶ್ಯಕತೆ ಇದ್ದರೂ, ಇಲ್ಲದಿದ್ದರೂ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುತ್ತಿರುವುದು. ಈ ಎರಡು ಕಾರಣಗಳಿಂದಾಗಿ ಕನ್ನಡ ಭಾಷೆಯು ಸಾರ್ವತ್ರಿಕಗೊಳ್ಳದೆ ಮಿತಿಗೊಳಗಾಗುತ್ತಿದೆ.

ಈ ಸಮಸ್ಯೆಗಳಿಗೆ ಅವರು ನೀಡುವ ಪರಿಹಾರೋಪಾಯಗಳೆಂದರೆ, ಮಹಾಪ್ರಾಣಾಕ್ಷರಗಳಾದ ಖ, ಛ, ಠ, ಥ, ಫ, ಮತ್ತು ಘ, ಝ, ಢ, ಧ, ಭ ಗಳ ಬಳಕೆಯನ್ನು ಬಿಡುವುದು ಹಾಗೂ ಸಂಸ್ಕೃತ ಪದಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡುವುದು.[28] ಈ ಬಗೆಯ ಭಾಷಿಕ ಚಿಂತನೆಗಳಲ್ಲಿ ಕನ್ನಡ ಭಾಷೆಯ ಸ್ವಂತಿಕೆಯ ಪ್ರತಿಪಾದನೆಯಲ್ಲದೆ, ಭಾಷೆಯನ್ನು ಬಳಸುವ, ಕಲಿಸುವಲ್ಲಿ ಇರುವ ಸುಲಭೋಪಾಯಗಳೆಡೆಗೆ ಅವರ ಗಮನವಿದೆ. ಈ ಬಗೆಯ ಪ್ರಯತ್ನದಿಂದ ಕನ್ನಡವನ್ನು ಬರೆಯುವ ಮತ್ತು ಉಚ್ಚರಿಸುವ ಕ್ರಮಗಳೆರಡು ಒಂದಾಗುವುದಲ್ಲದೆ, ಕಲಿಕೆಯು ಕೂಡ ಸರಳವಾಗುತ್ತದೆ.

ಸಂಸ್ಕೃತದ ಪದಗಳನ್ನು ಯಥಾವತ್ತಾಗಿ ಬಳಸುತ್ತಿರುವುದರಿಂದ ಭಾಷೆಯ ಬಳಕೆಯಲ್ಲೇ ಉಂಟಾಗಿರುವ ಸಾಮಾಜಿಕ ಸ್ತರಗಳ ಪರಿಣಾಮವಾಗಿ, ಉಂಟಾಗುತ್ತಿರುವ ಸಾಮಾಜಿಕ ಅಸಮಾನತೆಯ ಪ್ರಶ್ನೆಗಳನ್ನು ಒಳಗೊಂಡಿರುವ ಡಿ. ಎನ್. ಶಂಕರ ಬಟ್ಟರ ಈ ಚರ್ಚೆಗಳು, ಭಾಷಿಕವಾಗಿ, ಕನ್ನಡಕ್ಕಿರುವ ಅಭಿವ್ಯಕ್ತಿ ಸಾಧ್ಯತೆಯ ಶೋಧಗಳಲ್ಲಿ ಮುಖ್ಯವಾದುವುಗಳಾಗಿವೆ.

ನಿರ್ವಸಾಹತೀಕರಣದ ಚರ್ಚೆಯ ಸಂದರ್ಭದಲ್ಲಿ ಸಂಸ್ಕೃತದ ಯಜಮಾನಿಕೆಯಿಂದ ಬಿಡಿಸಿಕೊಳ್ಳಬೇಕಾದ ಈ ಬಗೆಯ ಪ್ರಯತ್ನಗಳನ್ನು ಮಂಡಿಸಿದ ಕೆಲವೇ ಕೆಲವರಲ್ಲಿ ಶಂಕರ ಬಟ್ಟರು ಒಬ್ಬರು. ನಿಜವಾದ ನಿರ್ವಸಾಹತೀಕರಣದ ಸಾಧ್ಯತೆಗಳಲ್ಲಿ ಭಾಷಿಕ ನಿರ್ವಸಾಹತೀಕರಣವೂ ಅವಶ್ಯಕವಾಗಿರುವುದರಿಂದ ಹಾಗೂ ನಮ್ಮ ಎಲ್ಲ ಲೋಕ ಗ್ರಹಿಕೆ, ಚಿಂತನಕ್ರಮಗಳ ಮೇಲೆ ಹೆಚ್ಚಿನ ಪ್ರಭಾವ ಬೀರಬಲ್ಲ ಭಾಷಿಕ ಚಿಂತನೆಗಳಿಂದ ನಿರ್ವಸಾಹತೀಕರಣದ ಚಿಂತನೆಗಳು ಹೆಚ್ಚು ಪ್ರಖರಗೊಳ್ಳಬಲ್ಲವು.

ಉಲ್ಲೇಖಗಳು

1. ಉದ್ಧೃತ, ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, 2004, ಪು. 31.

2. Consise Oxford English Dictinoary, Oxford University Press, 1st Indian Edition, 2009, p.372

3. wordnetweb.princeton.edu/perl/webwn
4. en.wikipedia.org/wiki/Decolonization
5. wordnetweb.princeton.edu/perl/webwn
6. en.wiktionary.org/wiki/decolonize
7. www.socialpolicy.ca/d.htm
8. teacherweb.ftl.pinecrest.edu/snyderd/MWH/AP/definitions/APdefinitions4.htm
9. globalsociology.pbworks.com/Glossary-and-Sources-(Global-Stratification)

9a. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, 2004, ಪು. 9, 10.

10. ಸಂ: ಎಂ. ವಿ. ಸೀತಾರಾಮಯ್ಯ, ಶ್ರೀ ನೃಪತುಂಗದೇವಾನುಮತಮಪ್ಪ ಶ್ರೀ ವಿಜಯಕೃತ ಕವಿರಾಜಮಾರ್ಗಂ, ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು 1994, ಪ್ರಥಮ ಪರಿಚ್ಛೇದದ 51 ರಿಂದ 61 ರವರೆಗಿನ ಪದ್ಯ ಭಾಗಗಳಲ್ಲಿ ಕನ್ನಡ ಸಂಸ್ಕೃತದ ಬಳಕೆಯ ಬಗೆಗೆ ಇರುವ ಸಾಧ್ಯಾಸಾಧ್ಯತೆಗಳ ಬಗೆಗೆ ಶ್ರೀ ವಿಜಯನು ಚರ್ಚಿಸಿದ್ದಾನೆ.
11. ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ, ಹಿಂದ್ ಸ್ವರಾಜ್ಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, 2008, ಹಿಂದ್ ಸ್ವರಾಜ್ಯದ ಸಾರಾಂಶವನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ.

12. ಮೂ: ಗೂಗಿ ವಾ ಥಿಯಾಂಗೊ, ಅ: ರಹಮತ್ ತರೀಕೆರೆ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, 1996, ಪು. 18.

13. ಅದೇ, ಪು. 18, 19.

14. ರಾಜೇಂದ್ರ ಚೆನ್ನಿ, ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ದ್ವಿ ಮು: 1999, ಪು. 58.

15. ಮೂ: ಜಿ.ಎನ್. ದೇವಿ, ಅ: ತಾರಕೇಶ್ವರ್, ಸಂ: ರಹಮತ್ ತರೀಕೆರೆ, ಕನ್ನಡ ಅಧ್ಯಯನ (ಗಾಳಿ ಸಂಚಿಕೆ) ಸಂಪುಟ 5, ಸಂಚಿಕೆ 9 (ಜನವರಿ, ಫೆಬ್ರವರಿ, ಮಾರ್ಚ್–1999) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಪು. 95.

16. ಅದೇ,

17. ಮೂ: ಎ.ಕೆ. ರಾಮನುಜನ್, ಅ: ಚಂದ್ರಶೇಖರ ನಂಗಲಿ, ರಹಮತ್ ತರೀಕೆರೆ, ಕನ್ನಡ ಅಧ್ಯಯನ, ಚಳಿ ಸಂಚಿಕೆ, ಸಂಪುಟ 7, ಸಂಚಿಕೆ 2, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ 2001, ಪು. 66, 67.

18. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ದ್ವಿ ಮು. 2008, ಪು. 31.

19. ಅದೇ, ಪು. 32–37 ರಲ್ಲಿ ಈ ಚರ್ಚೆಗಳು ಇವೆ.

19ಅ. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, 2004, ಪು. 306

20. ಉಧೃತ, ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, 2004, ಪು. 22.

21. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, 2004, ಪು. 22.

22. ಅದೇ ಪುಟ. 23.

23. ಅದೇ,

24. ಡಿ.ಎನ್. ಶಂಕರ ಭಟ್, ಕನ್ನಡ ಬರಹವನ್ನು ಸರಿಪಡಿಸೋಣ!, ಭಾಷಾ ಪ್ರಕಾಶನ, ಮೈಸೂರು, 2005, ಪು. 6.
25. ಅದೇ,
26. ಅದೇ,
27. ಅದೇ, ಪು. 17.
28. ಅದೇ, ಪು. 95.

ಅಧ್ಯಾಯ : 3

ಡಿ.ಆರ್.ನಾಗರಾಜ್‌ರವರ ನಿರ್ವಸಾಹತೀಕರಣದ ಚಿಂತನೆಗಳು

ಡಿ.ಆರ್.ನಾಗರಾಜ್ ಅವರ ಕೃತಿಗಳು : ಒಂದು ಪ್ರವೇಶ

'ಅಮೃತ ಮತ್ತು ಗರುಡ', 'ಶಕ್ತಿ ಶಾರದೆಯ ಮೇಳ', 'ಸಾಹಿತ್ಯ ಕಥನ', 'ಉರಿ ಚಮ್ಮಾಳಿಗೆ', 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಹಾಗೂ 'ಸಂಸ್ಕೃತಿ ಕಥನ'ಗಳು ಸಂಶೋಧನೆ ಹಾಗೂ ವಿಮರ್ಶಾ ಕೃತಿಗಳಾದರೆ, ವಸಂತ ಸ್ಮೃತಿ ಅನುವಾದಿತ ಕೃತಿ, 'ಏಕಾಂಗಿ ಮತ್ತು ಇತರ ಕಥೆಗಳು' ಡಿ.ಆರ್.ನಾಗರಾಜ್‌ರವರ ಕಥಾಸಂಕಲನ.

ಸಾಹಿತ್ಯದ ಮೂಲಕವೇ ಲೋಕವನ್ನು ನೋಡುವ ಕ್ರಮವೊಂದು ಅವರ ಕೃತಿಗಳಲ್ಲಿ ಅಂತರ್ಜಲದಂತೆ ಪ್ರವಹಿಸಿರುವುದನ್ನು ಕಾಣಬಹುದು. ಸಾಹಿತ್ಯ, ತತ್ವಜ್ಞಾನ, ಸಂಸ್ಕೃತಿ, ಮೀಮಾಂಸೆ, ವಿಮರ್ಶೆ, ವೈದಿಕ – ಅವೈದಿಕ ಧರ್ಮ, ಜನಪರ ಚಳುವಳಿಗಳಲ್ಲಿದ್ದ ಅವರ ಅಪಾರ ಆಸಕ್ತಿಯ ಪರಿಣಾಮವಾಗಿ ಅವರ ಕೃತಿಗಳು ಬಹುಮುಖಿ ಆಯಾಮಗಳನ್ನು ಪಡೆದಂತೆಯೆ, ಅನ್ಯ ಜ್ಞಾನಶಿಸ್ತುಗಳನ್ನು ಅಳವಡಿಸಿಕೊಂಡು ಒಂದರೊಡನೆ ಮತ್ತೊಂದನ್ನು ಮುಖಾಮುಖಿಯಾಗಿಸಿ ಸಂವಾದ ರೂಪದ, ರೂಪಕಾತ್ಮಕ ಅಭಿವ್ಯಕ್ತಿಯಲ್ಲಿ ಸಾಂಸ್ಕೃತಿಕ ವಾಗ್ವಾದಗಳನ್ನು ಸೃಷ್ಟಿಸಿರುವುದು ಅವರ ಕೃತಿಗಳ ವೈಶಿಷ್ಟ್ಯತೆ.

ಮನು ಚಕ್ರವರ್ತಿಯವರ ಪ್ರಕಾರ, "ಡಿ.ಆರ್. ರ ಪ್ರಥಮ ಹಂತವು ಒಂದು ರೀತಿಯ ಸಾಮಾಜಿಕ ನ್ಯಾಯದ ಕಲ್ಪನೆಯ ಮೂಲದಿಂದ ರೂಪಿತವಾದದ್ದು ಎನ್ನುವುದು; ಈ ಹಂತವನ್ನು ನಾನು ಅಮೃತ ಮತ್ತು ಗರುಡದ ಮೂಲಕ ಗುರುತಿಸುತ್ತೇನೆ. ನ್ಯಾಯ ಮತ್ತು ಸಮಾನತೆಯ ಪರಿಕಲ್ಪನೆಗಳ ಮೂಲಕ ಸಿದ್ಧವಾದ ನೆಲೆಗಟ್ಟುಗಳೇ ಬಹುಮುಖ್ಯವಾಗಿ ಸಾಹಿತ್ಯ – ಸಂಸ್ಕೃತಿಗಳ ವ್ಯಾಖ್ಯಾನಗಳನ್ನು ನಿರ್ಧರಿಸುತ್ತಿದ್ದ ಘಟ್ಟ ಇದು. ಆದ್ದರಿಂದಲೇ ಈ ಹಂತದಲ್ಲಿ ಲುಕಾಕ್ಸ್, ಅಲ್ಥೂಸರ್ ಮತ್ತು ವಿಶೇಷವಾಗಿ ಫ್ರಾಂಕ್ ಫರ್ಟ್ ಸ್ಕೂಲ್‌ನ ನಿಲುವುಗಳು ಡಿ.ಆರ್.ರ ಯೋಚನಾ ಲಹರಿಯನ್ನು ರೂಪಿಸಿದವು."[1]

ಅವರ ಪ್ರಥಮ ಕೃತಿಯಲ್ಲೆ ಭಿನ್ನ ಆಸಕ್ತಿಗಳು ವ್ಯಕ್ತವಾಗಿವೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ಕಾದಂಬರಿ, ಕತೆ, ಜಾನಪದ, ರಂಗಭೂಮಿ ಹಾಗೂ ತತ್ವಜ್ಞಾನದ ಬಗೆಗಿನ ವೈವಿಧ್ಯಮಯ ವಿಮರ್ಶಾ ಲೇಖನಗಳು ಈ ಕೃತಿಯಲ್ಲಿವೆ.

ಕನ್ನಡದ ನವೋದಯ ಹಾಗೂ ನವ್ಯ ಸಂದರ್ಭದ ಪ್ರಮುಖ ಕವಿಗಳ ಕೃತಿಗಳನ್ನಾಧರಿಸಿ ನಡೆಸಿದ ಸಂಶೋಧನಾ ಕೃತಿಯಾದ 'ಶಕ್ತಿ ಶಾರದೆಯ ಮೇಳ'ವು ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಮಹತ್ವದ ಕೃತಿ. ಭೂಮಿ, ಕಾಲ, ಕಾಮ, ಸಮಾಜಗಳನ್ನು ಕೇಂದ್ರವಾಗಿಟ್ಟುಕೊಂಡ ಪರಿಕಲ್ಪನಾತ್ಮಕ ಅಧ್ಯಯನದ ಮಾದರಿಯೊಂದು ಈ ಕೃತಿಯಿಂದ ಕನ್ನಡದಲ್ಲಿ ರೂಪುಗೊಂಡಿತು. ಈ ಕೃತಿಯ ಬಗ್ಗೆ ಮನು ಚಕ್ರವರ್ತಿಯವರ ಅಭಿಪ್ರಾಯವೆಂದರೆ, "'ಶಕ್ತಿ ಶಾರದೆಯ ಮೇಳ' ಪಠ್ಯವು 'ಅಮೃತ ಮತ್ತು ಗರುಡ'ದ ಅನೇಕ ತಾತ್ವಿಕ ನಿಲುವುಗಳನ್ನು ಬಿಟ್ಟುಕೊಡುತ್ತದೆ ಮತ್ತು ಪಠ್ಯಗಳು ಮೂಲತಃ ಸಾಂಸ್ಕೃತಿಕ ಹೋರಾಟಗಳ ಸಂಕೇತಗಳೇ ಎನ್ನುವ ನಂಬಿಕೆಯನ್ನು ಪ್ರತಿನಿಧಿಸುತ್ತದೆ. ಈ ಕಾರಣದಿಂದಲೇ ಡಿ.ಆರ್. ಇಲ್ಲಿ ಕಲ್ಚರಲ್ ಮೋಟಿಫ್‌ಗಳನ್ನು ಪ್ರಧಾನವಾಗಿ ಬಳಸಿಕೊಂಡಿರುವುದು ಕಾಣಸಿಗುತ್ತದೆ. ಸಾಹಿತ್ಯ ವಿಮರ್ಶೆಯು ಆತ್ಯಂತಿಕವಾಗಿ ಸಾಂಸ್ಕೃತಿಕ ವಿಮರ್ಶೆಯೂ ಹೌದು ಎನ್ನುವುದನ್ನು ತೋರಿಸುವ ಪ್ರಯತ್ನದ ಪ್ರತಿನಿಧಿ 'ಶಕ್ತಿ ಶಾರದೆಯ ಮೇಳ.'" [2]

'ಶಕ್ತಿ ಶಾರದೆಯ ಮೇಳ' ಕೃತಿಯ ವಿಶೇಷವಿರುವುದು, ನವೋದಯ ಹಾಗೂ ನವ್ಯಕವಿಗಳ ಕವಿತೆಗಳನ್ನು ನಾಲ್ಕು ಪರಿಕಲ್ಪನಾತ್ಮಕ ಅಧ್ಯಯನದ ಮೂಲಕ, ಈ ದೇಶೀ ಕಾವ್ಯದ ಮಾದರಿಗಳಿಗಿರುವ ಸಾಧ್ಯತೆಯನ್ನು ಸಂಶೋಧಿಸಿದ್ದರಲ್ಲಿ. ನವೋದಯ ಕಾವ್ಯವು, ರೊಮ್ಯಾಂಟಿಕ್ ಕಾವ್ಯದ ನೇರ ಅನುಕರಣೆಯಲ್ಲ ಎಂಬ ಅಂಶವು ಈ ಅಧ್ಯಯನದ ಮುಖ್ಯ ಒಳನೋಟವಾಗಿದೆ.

ಜಿ.ಎಸ್.ಆಮೂರರ ಪ್ರಕಾರ, "ಮಾರ್ಕ್ಸಿಸ್ಟ್ ವಿಮರ್ಶೆಯ ವ್ಯಾಖ್ಯಾನ ಕ್ಷಿತಿಜಗಳೆಂದು ಜೇಮ್ಸನ್ ಗುರುತಿಸುವ ರಾಜಕೀಯ ಹಾಗೂ ಸಾಮಾಜಿಕ ಚರಿತ್ರೆ ಮತ್ತು ವರ್ಗ ಸಂಘರ್ಷದ ವಾಸ್ತವದ ಚೌಕಟ್ಟಿನಲ್ಲಿಯೇ ನಾಗರಾಜ್ ತಮ್ಮ ಸಾಂಸ್ಕೃತಿಕ ವಿಮರ್ಶೆಯನ್ನು ಪ್ರಾರಂಭಿಸಿದರು. ಈ ವಿಮರ್ಶೆಯನ್ನು ಅದರ ಶುದ್ಧರೂಪದಲ್ಲಿ ನಾವು ಕಾಣುವುದು 'ಅಮೃತ ಮತ್ತು ಗರುಡ' (೧೯೮೩)ದ ಲೇಖನಗಳಲ್ಲಾದರೂ ಶಕ್ತಿ – ಶಾರದೆಯ ಮೇಳ (೧೯೮೭)ದಲ್ಲಿಯೂ ಅದರ ಮುಂದುವರಿಕೆಯ ಸ್ಪಷ್ಟ ಲಕ್ಷಣಗಳಿವೆ." [3]

'ಸಾಹಿತ್ಯ ಕಥನ'ವು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲೆ ಮುಖ್ಯವಾದ ಕೃತಿ. ಜಾಗತೀಕರಣದ ಮೂಲಕ ನವವಸಾಹತುಶಾಹಿಗಳ ದಾಳಿಗಳು ಆರಂಭವಾದ ಘಟ್ಟದಲ್ಲಿ, ಪ್ರಭುತ್ವಗಳು ಅದೃಶ್ಯವಾಗಿಯೆ ನಿಯಂತ್ರಣದ ದಾರಿಗಳನ್ನು ಕಂಡುಕೊಂಡ ಸಂದರ್ಭದಲ್ಲಿ, ಪ್ರಭುತ್ವದ ಅಸಂಖ್ಯ ಹುನ್ನಾರಗಳನ್ನು ವಿಮರ್ಶಿಸುತ್ತಲೆ, ಸಾಂಸ್ಕೃತಿಕ ವಿಶಿಷ್ಟತೆ, ದೇಶೀ

ಜೀವನ ಮಾದರಿಗಳ ವಿಶಿಷ್ಟತೆ ಹಾಗೂ ಅವು ಉಳಿದುಕೊಳ್ಳಬೇಕಾದ ಅಗತ್ಯಗಳನ್ನು ಮಂಡಿಸುವ ಕೃತಿಯಿದು.

'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' ಕೃತಿಯು ದೇಶೀ ಕಾವ್ಯವೊಂದು ರೂಪಕಗಳ ಮೂಲಕವೆ ಇತರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ರಚನೆಗಳನ್ನು ಮುಖಾಮುಖಿಯಾಗುತ್ತಿರುವುದನ್ನು ಮಂಡಿಸುತ್ತದೆ. ಅಂತೆಯೇ ದೇಶೀಕಾವ್ಯದಿಂದಲೆ ಕಾವ್ಯಮೀಮಾಂಸೆಯ ಪರಿಕರಗಳನ್ನು ಸೃಷ್ಟಿಸಿಕೊಳ್ಳುವ ಒಂದು ಮಾದರಿಯನ್ನು ನಿರ್ಮಿಸುತ್ತದೆ. ರಾಜೇಂದ್ರ ಚೆನ್ನಿಯವರು ಈ ಕೃತಿಯ ವಿಶಿಷ್ಟತೆಯ ಬಗ್ಗೆ ಹೀಗೆ ಹೇಳುತ್ತಾರೆ; "ಡಿ.ಆರ್.ನಾಗರಾಜರ ದೇಶೀವಾದೀ ಚಿಂತನೆಯ ಅತ್ಯಂತ ಪ್ರಬುದ್ಧವಾದ ಕೊನೆಯ ಪುಸ್ತಕದಿಂದ ಸಾಬೀತಾಗುವುದೆಂದರೆ ದೇಶೀವಾದಿ ಚಿಂತನೆಯ ಮಾದರಿಯೆನ್ನುವುದಿಲ್ಲ, ಸಿದ್ಧ ಚೌಕಟ್ಟಿನ ಮಾದರಿಗಳಿಲ್ಲ."[4]

ಒಂದು ದೃಷ್ಟಿಯಲ್ಲಿ ಈ ಕೃತಿಯು ಸಿದ್ಧ ಚೌಕಟ್ಟನ್ನು ಮೀರಿ ನಡೆಸಿದ ಅನ್ವೇಷಣೆಯಾಗಿದೆ. ಸಾಂಸ್ಕೃತಿಕ ಸಂದರ್ಭದಲ್ಲಿ ಚಾರಿತ್ರಿಕ ವ್ಯಕ್ತಿಗಳು ಕಾಲವನ್ನು ಮೀರಿ ಜನಜೀವನದಲ್ಲಿ ಮರುರೂಪಗೊಳ್ಳುವುದನ್ನು ಅಲ್ಲಮ ಮಂಟೇಸ್ವಾಮಿಯ ಕಥಾನಕಗಳ ಸಂಬಂಧಗಳನ್ನು ಮಂಡಿಸುವ ಈ ಪುಸ್ತಕ ಜಾನಪದ ಕಾವ್ಯದ ಆಶಯಗಳನ್ನು ಚರ್ಚೆಗೊಳಪಡಿಸುತ್ತದೆ.

ಯು.ಆರ್.ಅನಂತಮೂರ್ತಿಯವರ ಪ್ರಕಾರ : "ಡಿ.ಆರ್.ನಾಗರಾಜರ ಬರವಣಿಗೆಯಲ್ಲಿ ಇದೊಂದು ಪ್ರವರ್ತಕ ಗುಣ ಪಡೆದುಕೊಂಡ ಆಚಾರ್ಯ ಕೃತಿ ಎನ್ನಬಹುದು. ಅಲ್ಲಮನನ್ನು ಅವನ ಕಾಲದಲ್ಲಿಟ್ಟು ನೋಡುವಂತೆಯೇ ನನ್ನ ಕಾಲದ ದೃಷ್ಟಿಯಿಂದಲೂ ವಿಶ್ಲೇಷಿಸುವ ನಾಗರಾಜರ ಪ್ರತಿಭೆ ಅಸಾಮಾನ್ಯ ಶಕ್ತಿಯುಳ್ಳದ್ದು... ಕನ್ನಡದ ಒಂದು ಮನಸ್ಸು ಐರೋಪ್ಯ ಪ್ರಣೀತವಾದ ಆಧುನಿಕತೆಯನ್ನು ಅಲ್ಲಮನ ಮೂಲಕ ಮೀರಿ ನಮ್ಮ ಪ್ರಸ್ತುತ ಸಾಂಸ್ಕೃತಿಕ ಸಂದರ್ಭಕ್ಕೆ ಚೈತನ್ಯಪೂರ್ಣವಾಗಿ ಎದುರಾಗುವ ಪ್ರಕ್ರಿಯೆಯನ್ನು ಪ್ರತಿನಿಧಿಸುವ ಈ ಕೃತಿ ಕನ್ನಡ ಸಾರಸ್ವತ ಲೋಕದಲ್ಲಿ ಗಂಭೀರವಾದ ಚರ್ಚೆಗೆ ಅರ್ಹವಾಗಿದೆ."[5]

'ದಿ ಫ್ಲೇಮಿಂಗ್ ಫೀಟ್' ಕೃತಿಯು ಕರ್ನಾಟಕದ ದಲಿತ ಚಳುವಳಿಯ ಅಧ್ಯಯನದ ಇಂಗ್ಲಿಷ್ ಕೃತಿಯಾಗಿದ್ದು, ಇದನ್ನು ಎಂ.ಎಸ್.ಆಶಾದೇವಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಗಾಂಧಿ ಹಾಗೂ ಅಂಬೇಡ್ಕರ್‌ರವರನ್ನು ವೈರುಧ್ಯಗಳಂತೆ ಚಿತ್ರಿಸುತ್ತಿರುವ ಸಂದರ್ಭದಲ್ಲಿ ಈ ಎರಡೂ ಮಾದರಿಗಳ ಅಗತ್ಯವನ್ನು ಈ ಕೃತಿಯಲ್ಲಿ ಕಾಣಬಹುದು.

ಎಂ.ಎಸ್.ಆಶಾದೇವಿಯವರ ಪ್ರಕಾರ : "ಇವರಿಬ್ಬರ ತೌಲನಿಕ ಅಧ್ಯಯನ ನಮಗೆ ಹೊಸದಲ್ಲ. ಅಧ್ಯಯನ ವಿಧಾನ ಮತ್ತು ಅದರಿಂದ ಆಗಬಹುದಾದ ಒಳನೋಟಗಳ ಕಾರಣಕ್ಕಾಗಿ ನಮಗೆ ಡಿ.ಆರ್.ಎನ್.ರ ಈ ಕೃತಿ ಮುಖ್ಯ. ಈ ಇಬ್ಬರು ಯುಗಪುರುಷರ ವಿಚಾರಗಳು ಪರಸ್ಪರ ತಳಕು ಹಾಕಿಕೊಂಡಿರಬಹುದಾದ, ಪೂರಕವಾಗಿರಬಹುದಾದ ಸಾಧ್ಯತೆಗಳನ್ನು ಡಿ.ಆರ್.ಹುಡುಕುತ್ತಾ ಹೋಗುತ್ತಾರೆ. ಪರಸ್ಪರರನ್ನು ವಿರೋಧಿಸುವ ನೆಲೆಯಲ್ಲಿಯೇ ಅವರಿಬ್ಬರೂ ತಮ್ಮನ್ನು ತಾವು ಇನ್ನೂ ಹೆಚ್ಚು ಸ್ಪಷ್ಟ ಮಡಿಕೊಂಡರು ಎನ್ನುವ ನಂಬಿಕೆಯಿಂದ ಡಿ.ಆರ್.ತಮ್ಮ ಪ್ರಣಾಳಿಕೆಯನ್ನು ರೂಪಿಸಿಕೊಂಡಿದ್ದಾರೆ."[6]

ಈ ಕೃತಿ ಅಂಬೇಡ್ಕರ್ ನಂತರದಲ್ಲಿ ದಲಿತ ಚಳುವಳಿ ಪಡೆಯಬೇಕಾದ ರೂಪಗಳ ಬಗ್ಗೆ ಮುಖ್ಯವಾದ ಚರ್ಚೆಯನ್ನು ಬೆಳೆಸುತ್ತದೆ. ದಲಿತ ಚಳವಳಿಯನ್ನು ಆಧುನಿಕ ಸಂದರ್ಭಕ್ಕೆ ಸಜ್ಜುಗೊಳಿಸುವ ಸಾಧ್ಯತೆಗಳೆಡೆಗೆ ಗಮನವಿರುವುದು ಇದರ ವೈಶಿಷ್ಟ್ಯ.

'ಸಂಸ್ಕೃತಿ ಕಥನ' ಕೃತಿಯು ಅವರು ಸಾಂದರ್ಭಿಕವಾಗಿ ದೈನಿಕ, ಸಾಪ್ತಾಹಿಕ, ಮಾಸಿಕ, ತ್ರೈಮಾಸಿಕಗಳಲ್ಲಿ ಬರೆದ ಲೇಖನಗಳು, ಸಂದರ್ಶನಗಳು, ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವಿಮರ್ಶೆಗಳನ್ನು ಒಳಗೊಂಡಿದೆ. ಈ ಕೃತಿಯು ಅವೈದಿಕ ದರ್ಶನಗಳಿಂದ, ದೇಶೀ ತಂತ್ರಜ್ಞಾನದವರೆಗೆ, ಜಾಗತೀಕರಣದಿಂದ ಬಿಡುಗಡೆಯ ಸಾಧ್ಯತೆಗಳೆಡೆಗೆ ಸಾಮಾಜಿಕ, ಸಾಹಿತ್ಯಕ, ಆರ್ಥಿಕ, ಧಾರ್ಮಿಕ, ಭಾಷಿಕ, ಶೈಕ್ಷಣಿಕ, ಸಾಂಸ್ಕೃತಿಕ ಚರ್ಚೆಗಳನ್ನೊಳಗೊಂಡಿದೆ.

ಡಿ.ಆರ್.ನಾಗರಾಜ್ ಅವರ ಒಟ್ಟು ಕೃತಿಗಳ ಸ್ವರೂಪವನ್ನು ಗಮನಿಸಿದರೆ, ವಸಾಹತುಶಾಹಿಯ ಆಳವಾದ ಗ್ರಹಿಕೆ, ಅದು ರೂಪಿಸಿಕೊಂಡ ದಮನಗಳ ಮಾದರಿಗಳ ವಿಶ್ಲೇಷಣೆ, ವೈದಿಕ-ಅವೈದಿಕ ದರ್ಶನಗಳ ಚಾರಿತ್ರಿಕ ಬೆಳವಣಿಗೆ ಹಾಗೂ ಅವುಗಳಲ್ಲಿರುವ ಸಂಬಂಧಾಂತರಗಳು, ಸಂಸ್ಕೃತಿಗಳು – ಧರ್ಮಗಳ ಸಂಬಂಧಾಂತರಗಳು ಹಾಗೂ ಅವುಗಳ ಬಹುಮುಖೀ ಧಾರೆಗಳು, ದೇಶೀ ಜೀವನ ಕ್ರಮಗಳ ವೈವಿಧ್ಯತೆ ಮತ್ತು ಅವುಗಳ ಇತಿಮಿತಿಗಳು ಮತ್ತು ಸಾಂಸ್ಕೃತಿಕ ರಾಜಕಾರಣದ ಸ್ವರೂಪಗಳನ್ನು ಆಳವಾಗಿ ಗ್ರಹಿಸಿ ಅಂತಿಮವಾಗಿ ನಿರ್ವಸಾಹತೀಕರಣದತ್ತ ಚಲಿಸುವ ತುಡಿತ ಕಾಣುತ್ತದೆ.

ಡಿ.ಆರ್.ನಾಗರಾಜ್‌ರವರ ನಿರ್ವಸಾಹತೀಕರಣದ ಚಿಂತನೆಗಳು

ಡಿ.ಆರ್.ನಾಗರಾಜ್‌ರವರು ಸಮಕಾಲೀನ ಸಂದರ್ಭದಲ್ಲಿ ನಿಂತು ಸಂಸ್ಕೃತಿಗಳು ಹಾಗೂ ಚರಿತ್ರೆಯ ಚಕ್ರೀಯ ಚಲನೆಯನ್ನು ಗ್ರಹಿಸಲು ಅವಶ್ಯಕವಾದ ಅನೇಕ

ಪರಿಕಲ್ಪನೆಗಳನ್ನು, ಅನ್ಯ ಜ್ಞಾಶಿಸ್ತುಗಳನ್ನು ಬಳಸಿಕೊಳ್ಳುತ್ತಾರೆ. ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಃಶಾಸ್ತ್ರ, ಸಾಹಿತ್ಯಕ, ಸಾಮಾಜಿಕ, ಭಾಷಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಶಿಸ್ತುಗಳಿಂದ ಪಡೆದು ಅವುಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸುವ ಮೂಲಕ ಸಮಕಾಲೀನ ಸಮಸ್ಯೆಗಳಿಗೆ ಅರ್ಥಪೂರ್ಣವಾದ ಮುಖಾಮುಖಿಯಾಗಿಸುವ ಪ್ರಯತ್ನವನ್ನು ಅವರ ಕೃತಿಗಳಲ್ಲಿ ಕಾಣಬಹುದು.

ವಸಾಹತೋತ್ತರ ಸಂದರ್ಭದಲ್ಲಿ ವಸಾಹತುಶಾಹಿ ಕಾಲದ ಸಾಂಸ್ಕೃತಿಕ ಯಾಜಮಾನ್ಯಕ್ಕೆ ಸಿಲುಕಿ ದೇಶೀ ಸಮುದಾಯಗಳು ತಮ್ಮ ಬಹುಮುಖತೆಯನ್ನು ಕಳೆದುಕೊಳ್ಳುವಂತೆ ವಸಾಹತುಶಾಹಿಯು ಅನೇಕ ಸಾಂದರ್ಭಿಕ ಒತ್ತಡಗಳನ್ನು ಹೇರುವ ಮೂಲಕ ಆರಂಭವಾದ ಈ ಏಕರೂಪೀಕರಣವನ್ನು ಪ್ರಶ್ನಿಸುವುದು ಡಿ.ಆರ್.ನಾಗರಾಜ್‌ರವರ ಮುಖ್ಯ ಕ್ರಮ. ಇದಕ್ಕೆ ಪೂರಕವಾಗಿ 'ಅಕ್ಷರ ಚಿಂತನಮಾಲೆ'ಗೆ ಸಂಪಾದಿಸಿದ ಅನೇಕ ಕೃತಿಗಳಿಗೆ ಅವರು ಬರೆದ ಹಿನ್ನುಡಿಗಳು ಈ ಬಗೆಯ ಸಾಂಸ್ಕೃತಿಕ ಏಕರೂಪೀಕರಣವನ್ನು ನಿರಾಕರಿಸಿ ದೇಶೀ ಸಮುದಾಯಗಳಲ್ಲಿರುವ ಬಹುತ್ವವನ್ನು ಪ್ರತಿಪಾದಿಸುತ್ತಲೆ ಅವುಗಳಲ್ಲಿರುವ ಆಂತರಿಕ ಚೈತನ್ಯವನ್ನು ಮಂಡಿಸುತ್ತವೆ.

ಡಿ.ಆರ್.ನಾಗರಾಜ್‌ರವರ ನಿರ್ವಸಾಹತೀಕರಣದ ಚಿಂತನೆಗಳು ಅವರ ಕೃತಿಯಲ್ಲಿ ವ್ಯಕ್ತವಾಗಿರುವುದರ ವ್ಯವಸ್ಥಿತ ಅಧ್ಯಯನಕ್ಕಾಗಿ,

1. ಸಾಹಿತ್ಯಕ ನಿರ್ವಸಾಹತೀಕರಣದ ಚಿಂತನೆಗಳು

2. ಕಾವ್ಯಮೀಮಾಂಸೆಯಲ್ಲಿನ ನಿರ್ವಸಾಹತೀಕರಣದ ಚಿಂತನೆಗಳು

3. ಸಂಸ್ಕೃತಿ ಹಾಗೂ ಧರ್ಮಗಳ ಬಹುಮುಖಿ ಸ್ವರೂಪ – ನಿರ್ವಸಾಹತೀಕರಣ

4. ರಾಜಕೀಯ ಹಾಗೂ ಬೌದ್ಧಿಕ ನಿರ್ವಸಾಹತೀಕರಣದ ಚಿಂತನೆಗಳು

ಹೀಗೆ ವಿಂಗಡಿಸಿಕೊಳ್ಳಲಾಗಿದೆ. ಈ ವಿಭಾಗ ಕ್ರಮಗಳು ಭಿನ್ನವೆಂದು ಹೇಳಲಾಗದಿದ್ದರೂ, ಅಧ್ಯಯನದ ಅನುಕೂಲಕ್ಕಾಗಿ ಈ ವಿಭಾಗ ಕ್ರಮವನ್ನು ಅನುಸರಿಸಬಹುದು.

ಸಾಹಿತ್ಯ ವಿಮರ್ಶೆಯು ಸಂಸ್ಕೃತಿ ವಿಮರ್ಶೆಯಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು, ಅನ್ಯ ಜ್ಞಾನಶಿಸ್ತುಗಳೊಡನೆ ಬಳಸಿಕೊಳ್ಳುವುದು ಅವಶ್ಯಕವಾಗಿದೆ.

ಡಿ.ಆರ್.ನಾಗರಾಜ್‌ರವರು ಜಾನಪದ–ಶಿಷ್ಟ, ಗಂಭೀರ–ಜನಪ್ರಿಯ ಎಂಬ ವಿಂಗಡಣೆಯನ್ನು ಒಪ್ಪದೆ, ಎಲ್ಲವುಗಳ ಅಧ್ಯಯನಕ್ಕೂ ಸಮಾನವಾದ ಒತ್ತನ್ನು ನೀಡಿದ್ದನ್ನು ಅವರ ಕೃತಿಗಳಲ್ಲಿ ಕಾಣಬಹುದು.

ಆಧುನಿಕಪೂರ್ವ ಕಾಲದಿಂದಲೂ ಪ್ರಜ್ಞಾವಂತರು ಪ್ರಭುತ್ವದ ಹೇರುವಿಕೆಯನ್ನು ಮೀರುವ ಸಾಧ್ಯತೆಗಳ ಹುಡುಕಾಟದಲ್ಲಿರುವುದನ್ನು ಅವರ ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾಗಿರುವ ಸಾಂದರ್ಭಿಕ ನಿಲುವುಗಳಿಂದ ಕಂಡುಕೊಳ್ಳುವ ಅನೇಕ ಪ್ರಯತ್ನಗಳು ಕನ್ನಡ ಸಂದರ್ಭದಲ್ಲಿ ನಡೆದಿವೆ. ಈ ಹೇರಿಕೆಯನ್ನು ಮೀರುವ ಒಂದು ಮುಖ್ಯ ಪ್ರಯತ್ನವಾಗಿಯೆ ಡಿ.ಆರ್.ನಾಗರಾಜ್‌ರವರ ಕೃತಿಗಳನ್ನು ಪರಿಭಾವಿಸಬಹುದು. ಈ ದಿಸೆಯಲ್ಲಿ ಅವರ ಕೃತಿಗಳು ಒಂದು ಬಗೆಯಲ್ಲಿ ಪ್ರಭುತ್ವವು ನಿರ್ಮಿಸಬಯಸುವ ಏಕಾಕಾರೀ ಜೀವನಕ್ರಮ, ಧರ್ಮ, ಭಾಷೆ, ಸಂಸ್ಕೃತಿಗಳ ಬದಲು ಬಹುಮುಖತೆಯನ್ನು ಅದರ ಎದುರು ಮಂಡಿಸುತ್ತವೆ. ವಸಾಹತುಶಾಹಿ ಪ್ರಭುತ್ವವನ್ನೂ ಒಳಗೊಂಡು ಆಧುನಿಕ ಪೂರ್ವ, ಆಧುನಿಕ ಹಾಗೂ ಆಧುನಿಕೋತ್ತರ ಪ್ರಭುತ್ವಗಳಿಗೆ ಬೇಕಾದುದು ಏಕಾಕಾರಿ ಸಂಸ್ಕೃತಿಯೆ ಹೊರತು ಬಹುಮುಖಿ ಸಂಸ್ಕೃತಿಯಲ್ಲ. ಅದು ಅನೇಕ ಕಾರಣಗಳಿಂದಾಗಿ ಈ ಬಗೆಯ ಏಕಾಕಾರಿ ಜೀವನಕ್ರಮವನ್ನು ಮಂಡಿಸಬಯಸುತ್ತದೆ. ಪ್ರಭುತ್ವ ಹಾಗೂ ಜನವರ್ಗಗಳು ಎಂದಿಗಾದರೂ ವೈರುಧ್ಯಗಳಂತೆಯೇ ವರ್ತಿಸುತ್ತವೆ.

ತನ್ನ ಸುಗಮ ಆಡಳಿತದ ಅನುಕೂಲಕ್ಕಾಗಿ ಏಕ ಭಾಷೆ, ಧರ್ಮ, ಸಂಸ್ಕೃತಿಗಳನ್ನು ಬೆಂಬಲಿಸಿ – ಆ ಮೂಲಕ ಪ್ರಜೆಗಳ ಮೇಲೆ ಅದನ್ನು ಹೇರುವ ಪ್ರಯತ್ನ ನಡೆಸುವ, ಪ್ರಭುತ್ವದ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದ್ದರೂ, ಅದನ್ನು ಪ್ರತಿರೋಧಿಸುವ ಕ್ರಮಗಳನ್ನು ಪ್ರಜೆಗಳು ಕಂಡುಕೊಳ್ಳುತ್ತಿರುತ್ತಾರೆ. ಈ ಹಂತವು ತೀವ್ರ ಸಂಘರ್ಷದ ಸ್ವರೂಪವನ್ನೆ ತಳೆಯಬೇಕೆಂದೇನೂ ಇಲ್ಲ. ಕೆಲವೊಮ್ಮೆ ಮಾತ್ರ ಈ ಬಗೆಯ ಸಂಘರ್ಷಗಳು ಎದುರಾದಾಗ ಪ್ರಭುತ್ವವು ದಮನ ಕ್ರಮಗಳಿಂದ ಆ ಪ್ರಯತ್ನಗಳನ್ನು ಹತ್ತಿಕ್ಕುವುದರಿಂದ, ಅದಕ್ಕೆ ಪರ್ಯಾಯವಾಗಿ ದೇಶೀ ಜೀವನ ಪದ್ಧತಿಗಳಲ್ಲೇ ಅಸಂಖ್ಯ ಪ್ರತಿಭಟನೆಯ ಮಾದರಿಗಳು ಹುಟ್ಟಿಕೊಳ್ಳುತ್ತವೆ. ಆದರೆ ಪ್ರಭುತ್ವವು ಪ್ರತಿಭಟನೆಗಳು ಘಟಿಸಿಯೇ ಇಲ್ಲವೆನ್ನುವಂತೆ ಅವುಗಳನ್ನು ಉಪೇಕ್ಷಿಸುತ್ತದೆ ಅಥವಾ ಸಮನ್ವಯತೆಯನ್ನು ಪ್ರತಿಪಾದಿಸುವ ಪ್ರಯತ್ನಗಳನ್ನು ನಡೆಸುವ ಮೂಲಕ ಅನೇಕ ಹುನ್ನಾರಗಳನ್ನು ನಡೆಸುತ್ತಿರುತ್ತದೆ. ಈ ಹುನ್ನಾರಗಳನ್ನು ಬುಕ್ಕನ ಶ್ರವಣಬೆಳಗೊಳದ ಶಾಸನದಿಂದ

ಆರಂಭಿಸಿ, ಇಂದು ಕೂಡ ಆಧುನಿಕ ಪ್ರಭುತ್ವಗಳು ಮಂಡಿಸುತ್ತಿರುವ 'ವೈವಿಧ್ಯತೆಯಲ್ಲಿ ಏಕತೆ' ಹಾಗೂ 'ಸಮನ್ವಯತೆ'ಯ ಕಥನಗಳ ಮೂಲಕ ಕಂಡುಕೊಳ್ಳಬಹುದು.

ಆಧುನಿಕಪೂರ್ವ, ಆಧುನಿಕ ಹಾಗೂ ಆಧುನಿಕೋತ್ತರ ಸಂದರ್ಭದಲ್ಲಿ ಆಳ್ವಿಕೆಯ ಸಿದ್ಧಾಂತಗಳು ಕಾಲಾನುಕ್ರಮದಲ್ಲಿ ನಿರಂತರವಾಗಿ ತಮ್ಮ ಹಿಡಿತವನ್ನು ಪ್ರಬಲಗೊಳಿಸುತ್ತಿರುವ ಅಸಂಖ್ಯ ಕ್ರಮಗಳಿಂದಾಗಿ, ಅವುಗಳನ್ನು ಎದುರಿಸಲು ಅನೇಕ ಬಗೆಯ ಉಪಕ್ರಮಗಳ ಶೋಧನೆ ಅನಿವಾರ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರಾಚೀನ ಕಾಲದಿಂದಲೂ ದೇಶೀ ಜೀವನ ಪದ್ಧತಿಗಳಲ್ಲಿಯೆ ಅಡಗಿರುವ ಪ್ರತಿರೋಧದ ಅನೇಕ ಮಾದರಿಗಳ ಶೋಧವು ನಿರ್ವಸಾಹತೀಕರಣ ಪ್ರಕ್ರಿಯೆಯಲ್ಲಿ ಅಗತ್ಯವೆಂಬುದನ್ನು ಡಿ.ಆರ್.ನಾಗರಾಜ್‌ರವರ ಚಿಂತನೆಗಳಲ್ಲಿ ಕಾಣಬಹುದು. ಈ ಪರಿಣಾಮವಾಗಿ ದೇಶೀ ನೋಟಕ್ರಮ, ಚಿಂತನಶೀಲತೆ, ಜೀವನಕ್ರಮಗಳ ಶೋಧದ ಅನಿವಾರ್ಯತೆಗಳು ಅವರು ಸಂಪಾದಿಸಿದ 'ಅಕ್ಷರ ಚಿಂತನ ಮಾಲೆ'ಯ ಕೃತಿಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ಈ ಚಿಂತನ ಮಾಲೆಯ ಪ್ರಣಾಳಿಕೆ ಹಾಗೂ ಅವರ ವ್ಯಾಖ್ಯಾನಾತ್ಮಕ ಹಿನ್ನುಡಿಗಳಲ್ಲಿ ಪ್ರತಿಪಾದಿಸಿದ್ದಾರೆ.

'ಅಕ್ಷರ ಚಿಂತನ ಮಾಲೆ'ಗೆ ಬರೆದ ಪ್ರಣಾಳಿಕೆಯಲ್ಲಿ ಅವರು ಹೀಗೆನ್ನುತ್ತಾರೆ: "ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ. ಅದರಲ್ಲೂ ತಾನು ಚಿಂತಿಸುತ್ತಿದ್ದ, ಪ್ರತಿಕ್ರಿಯಿಸುತ್ತಿದ್ದ, ಭಾವಿಸುತ್ತಿದ್ದ ಕ್ರಮಗಳು ಮರೆತು ಹೋಗುವುದು ದೊಡ್ಡ ದುರಂತವೇ ಸರಿ. ವಸಾಹತುಶಾಹಿ ನಂತರದ ಭಾರತೀಯ ಸಮಾಜಕ್ಕೆ ಈ ರೀತಿಯ ವಿಸ್ಮೃತಿ ಈಗ ಆವರಿಸಿಬಿಟ್ಟಿದೆ. ನಮ್ಮ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ ವೈಚಾರಿಕ ರಚನೆಗಳು ಮರೆತುಹೋಗುವುದರಿಂದ ಈಗ ಲಭ್ಯವಿರುವ ಚಿಂತನಕ್ರಮಗಳು ಪೂರ್ಣವಾಗಿ ಪಶ್ಚಿಮಮುಖಿಯಾಗಿಬಿಟ್ಟಿವೆ. ನಮ್ಮನ್ನು ಕಾಡುತ್ತಿರುವ ಬಿಕ್ಕಟ್ಟುಗಳನ್ನು ಅವುಗಳ ಮೂಲಕ ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. 'ಅಕ್ಷರ ಚಿಂತನ'ದ ಪ್ರಮುಖ ಗುರಿ ಈ ವೈಚಾರಿಕ ವಿಸ್ಮೃತಿಯನ್ನು ದಾಟುವುದೇ ಆಗಿದೆ"[7]

ಈ ಅಭಿಪ್ರಾಯದಲ್ಲಿ, ವಸಾಹತೋತ್ತರದಲ್ಲಿ ಸಮಾಜಗಳಿಗೆ ಆವರಿಸುವ ವಿಸ್ಮೃತಿಯ ಕಾರಣದಿಂದಾಗಿ, ಈ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ ವೈಚಾರಿಕ ರಚನೆಗಳು ವಸಾಹತುಶಾಹಿಯ ಆಡಳಿತದ ಕಾರಣಗಳಿಂದಾಗಿ ಮರೆತುಹೋಗುವುದರ ಮೂಲಕ, ಏಕಮುಖಿಯಾಗುತ್ತಿರುವ, ಆ ಮೂಲಕ ಎಲ್ಲವೂ ಪಶ್ಚಿಮಮುಖಿಯಾಗಿ ನಮ್ಮನ್ನು ಕಾಡುತ್ತಿರುವ ಬಿಕ್ಕಟ್ಟುಗಳ ಘಟ್ಟವೂ ಇದೆ. ಈ

ಪಶ್ಚಿಮಮುಖಿ ಚಿಂತನಕ್ರಮಗಳಿಂದ ಈ ದೇಶೀ ಚಿಂತನಕ್ರಮಗಳನ್ನು ಕೂಡ ಬರಬರುತ್ತಾ ಸಮಗ್ರವಾಗಿ ಗ್ರಹಿಸಲು ಸಾಧ್ಯವಾಗದಿರುವುದೇ ಈ ವಿಸ್ಮೃತಿ. ಆದ್ದರಿಂದ ಅಕ್ಷರ ಚಿಂತನ ಮಾಲೆಯು ಈ ವಿಸ್ಮೃತಿಯನ್ನು ದಾಟುವ ಪ್ರಯತ್ನವೆನ್ನುತ್ತಾರೆ.

ಮುಂದುವರೆದು ಡಿ.ಆರ್.ನಾಗರಾಜ್ ಹೀಗೆ ಬರೆಯುತ್ತಾರೆ: "ಕನ್ನಡಿಗಳೋ, ದೀಪಗಳೋ ಆಗದ ಚಿಂತನೆಗಳು ನಿರುಪಯುಕ್ತ. ಈಗ ನಮ್ಮನ್ನು ಕಿತ್ತು ತಿನ್ನುತ್ತಿರುವ ಹಲವಾರು ಸಮಸ್ಯೆಗಳನ್ನು ಎದುರಿಸಲು ಉಪಯುಕ್ತವಾಗುವಂತಹ ಪರ್ಯಾಯ ಚಿಂತನಕ್ರಮಗಳನ್ನು 'ಅಕ್ಷರ ಚಿಂತನ' ವಿಮರ್ಶಾತ್ಮಕವಾಗಿ ಮಂಡಿಸುತ್ತದೆ. ಈಗ ಪ್ರತಿಷ್ಠಿತವಾಗಿರುವ, ಅಧಿಕಾರಸ್ಥವಾಗಿರುವ, ಬಲಿಷ್ಠವಾಗಿರುವ ಚಿಂತನಕ್ರಮಗಳಿಗಿಂತ ಬೇರೆಯದನ್ನು ಹುಡುಕುವ ಈ ಪುಸ್ತಕಮಾಲೆ, ಈಗ ಪಶ್ಚಿಮದಲ್ಲೂ ಭಿನ್ನಮತೀಯವಾಗಿರುವಂಥದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ವ್ಯಕ್ತಿಗಳು, ಚಳುವಳಿಗಳು, ಆಲೋಚನಾ ಪ್ರಸ್ಥಾನಗಳು, ಬಿಡಿಕೃತಿಗಳು ಹಾಗೂ ಅನುವಾದಗಳು, ಸ್ವತಂತ್ರ ಕೃತಿಗಳು, ವ್ಯಾಖ್ಯಾನಗಳು – ಹೀಗೆ ವಿವಿಧ ಹರಹಿನಲ್ಲಿ ಈ ಪುಸ್ತಕ ಮಾಲೆ ಬರಲಿದೆ. ಕನ್ನಡದ ಮೂಲಕವೇ ಸಮಸ್ತ ವಿಶ್ವವನ್ನು ಕಂಡುಕೊಳ್ಳುವ ಮಹತ್ವಾಕಾಂಕ್ಷೀ ಪ್ರಯತ್ನ ಇದು"[8]

ಈ ಭಾಗದಲ್ಲಿ ಮುಖ್ಯವಾಗಿ ಅವರು ಮಂಡಿಸುತ್ತಿರುವುದು ಇದುವರೆಗೆ ಅನುಪಯುಕ್ತವೆಂದು ಅಲಕ್ಷ್ಯಕ್ಕೊಳಗಾಗಿದ್ದ ದೇಶೀ ಚಿಂತನಕ್ರಮಗಳನ್ನು. ಸಾಂಸ್ಕೃತಿಕ ರಾಜಕಾರಣದ ಕಾರಣಕ್ಕೆ ಹಿನ್ನೆಲೆಗೆ ತಳ್ಳಲ್ಪಟ್ಟಿರುವ ಪಠ್ಯಗಳನ್ನು ಪ್ರಸ್ತುತಗೊಳಿಸುವ ಹಾಗೂ ಇದುವರೆಗೆ ಬಲಹೀನವೆಂಬಂತೆ ಇರುವ ಚಿಂತನಕ್ರಮಗಳನ್ನು ಮುನ್ನೆಲೆಗೆ ತರುವ ಮೂಲಕ· ಈಗಿರುವ ಏಕರೂಪೀಕರಣವನ್ನು ಬಹುಮುಖಿಯಾಗಿಸುವ, ಇವುಗಳ ಮೂಲಕ ಲೋಕಗ್ರಹಿಕೆ, ಚಿಂತನಕ್ರಮ, ಪ್ರತಿಕ್ರಿಯೆ ಪರಿಭಾವಿಸುವ ಅಸಂಖ್ಯ ಕ್ರಮಗಳ ಶೋಧನೆಯ ಪ್ರಯತ್ನವಿದು. ಅಡಿಗರು, "ಇನ್ನಾದರೂ ಪೂರ್ವಮೀಮಾಂಸೆ ಕರ್ಮಕಾಂಡವನು ಬಗೆಯಬೇಕು" ಎಂದದ್ದು ಈ ಅರ್ಥದಲ್ಲೇ ಎನಿಸುತ್ತದೆ.

ಈ ಬಗೆಯ ಶೋಧದ ಹಾಗೂ ಪ್ರಸ್ತುತತೆಯ ಬಗ್ಗೆ 'ಸಾಹಿತ್ಯ ಕಥನ'ದಲ್ಲಿನ ನಟರಾಜ್ ಹುಳಿಯಾರ್‌ರವರು ನಡೆಸಿರುವ ಸಂದರ್ಶನವೊಂದರಲ್ಲಿ 'ವಿಸ್ಮೃತಿ'ಯ ಪರಿಕಲ್ಪನೆಯನ್ನು ಡಿ.ಆರ್.ನಾಗರಾಜ್ ಹೀಗೆ ವಿವರಿಸಿದ್ದಾರೆ: "ಒಂದು ಸಾಂಸ್ಕೃತಿಕ ದಂಗೆಗೆ ಆ ಸಂಸ್ಕೃತಿಯ ಪ್ರಾಚೀನ ಸಂಸ್ಕೃತಿಗಳಿಂದಲೇ ಶಕ್ತಿ ಬರದೇ ಇದ್ರೆ ಅದಕ್ಕೆ ಹೆಚ್ಚು ವ್ಯಾಪಕತೆ ಇರಲ್ಲ. ಆದರೆ ವಸಾಹತುಶಾಹಿ ತಂದ ವಿಸ್ಮೃತಿಯ ಸ್ವರೂಪ ಏನಂದ್ರೆ

ಬ್ರಾಹ್ಮಣೇತರ ಜಾತಿಗಳಿಗೆ, ಅವೈದಿಕ ಜನಾಂಗಗಳಿಗೆ ದೀರ್ಘ ಸಾಂಸ್ಕೃತಿಕ ಸ್ಮೃತಿ ಇಲ್ಲ ಎಂಬ ಭಾವನೆಯನ್ನು ಪ್ರತಿಷ್ಠಾಪಿಸುವುದು. ಆದ್ದರಿಂದ ಅವೈದಿಕ ಜೀವನದರ್ಶನಗಳ ಸಾಂಸ್ಕೃತಿಕ ಸ್ಮೃತಿಯನ್ನು ಗಳಿಸಿಕೊಳ್ಳೋದು, ಆಧುನಿಕ ಮೌಲ್ಯಗಳಿಂದ ಪರಿಷ್ಕರಿಸೋದು ವಿಸ್ಮೃತಿ ಕಲ್ಪನೆಯ ಗುರಿ. ಯಾಕೇಂದ್ರೆ ಆಧುನೀಕರಣ ಪ್ರಕ್ರಿಯೆ ವೈದಿಕ ಜೀವನಕ್ರಮಗಳಿಗೆ ಸವಲತ್ತನ್ನು ನೀಡಿ ಬಿಟ್ಟಿದೆ. ಆಧುನಿಕ ಪ್ರಭುತ್ವದ ಸಂದರ್ಭದಲ್ಲಿ ವಸಾಹತುವಾದ ಕೆಳಜಾತಿಗಳ ಬಿಡುಗಡೆಯ ಮಾರ್ಗದಂತೆ ಕಂಡಿದ್ದರೂ ನಿಜವಾದ ಲೌಕಿಕಾಧಿಕಾರವನ್ನು, ಪ್ರಬಲ ಶಕ್ತಿಯನ್ನು ಮೇಲುಜಾತಿಗಳಿಗೆ, ಬ್ರಾಹ್ಮಣ ಶಕ್ತಿಗಳಿಗೆ ನೀಡಿದೆ. ಆದ್ದರಿಂದಲೇ ಅವೈದಿಕ ಜೀವನಕ್ರಮಗಳ ಸಾಂಸ್ಕೃತಿಕ ಶಕ್ತಿ ಮತ್ತು ಸಾಂಸ್ಕೃತಿಕ ಅಧಿಕಾರದ ಕುರಿತು ವಿಸ್ಮೃತಿಯ ಪರಿಕಲ್ಪನೆಯಲ್ಲಿ ವಿಶೇಷ ಒತ್ತು ಇದೆ"[9]

ಈ ದೃಷ್ಟಿಯಿಂದ ವಸಾಹತುಶಾಹಿ ಸಂದರ್ಭದಲ್ಲಿ ಯಜಮಾನಿಕೆಯ ಸ್ವರೂಪದಲ್ಲಿದ್ದ ವಸಾಹತುವಾದಿ ಆಡಳಿತ, ಧರ್ಮ, ಭಾಷೆ, ಸಾಂಸ್ಕೃತಿಕ ಹೇರಿಕೆಯ ಪರಿಣಾಮಗಳಿಂದಾಗಿ ಈ ಬಗೆಯ ದೇಶೀ ಮಾದರಿಗಳ ನಿರಾಕರಣೆಯನ್ನು ವಸಾಹತೋತ್ತರ ಸಂದರ್ಭದಲ್ಲಿ ವೈದಿಕ ನೋಟಕ್ರಮಗಳು ಮುಂದುವರೆಸುತ್ತಿರುವುದರ ಪರಿಣಾಮವನ್ನು ಗ್ರಹಿಸುವ ಹಾಗೂ ಅದರಿಂದ ಬಿಡುಗಡೆಯ ಪರಿಕ್ರಮಗಳ ಹುಡುಕಾಟದ ಅಗತ್ಯವನ್ನು ಹುಡುಕುವ ಮಾರ್ಗವಾಗಿ 'ವಿಸ್ಮೃತಿ' ಪರಿಕಲ್ಪನೆಯನ್ನು ಡಿ.ಆರ್.ನಾಗರಾಜ್ ವ್ಯಾಖ್ಯಾನಿಸುತ್ತಾರೆ.

ಸಾಹಿತ್ಯ, ಕಲೆ, ಸಂಸ್ಕೃತಿ, ಧರ್ಮ, ಶಿಕ್ಷಣ, ಆಡಳಿತಕ್ರಮ, ಲೋಕಗ್ರಹಿಕೆ, ನೋಟಕ್ರಮ ಹಾಗೂ ಮೌಲ್ಯಗಳಲ್ಲಿ ವ್ಯಕ್ತವಾಗುತ್ತಿರುವ ವಸಾಹತುಶಾಹಿ ಧೋರಣೆಗಳಿಂದ ಬಿಡುಗಡೆ ಹೊಂದುವ ಪ್ರಕ್ರಿಯೆಯೇ ನಿರ್ವಸಾಹತೀಕರಣ. ವಸಾಹತುಶಾಹಿಯ ಆಡಳಿತದ ನಂತರವೂ ದೇಶೀ ಜೀವನದ ಪ್ರಜ್ಞೆಯನ್ನು ಆಕ್ರಮಿಸಿಕೊಳ್ಳುವ ವಸಾಹತುಶಾಹಿ ರಚನೆಗಳು, ಆಳವಾಗಿ ನೆಲೆಸಿರುತ್ತವೆ. ವಸಾಹತುಶಾಹಿ ಆಡಳಿತದ ಪರಿಣಾಮವಾಗಿ, ಅದು ರೂಪಿಸಿದ ಶಿಕ್ಷಣಕ್ರಮ, ಆರ್ಥಿಕ, ರಾಜಕೀಯ ನೀತಿಗಳು, ಕೈಗಾರಿಕೆ, ತಂತ್ರಜ್ಞಾನ, ವಿಜ್ಞಾನದ ಮಾದರಿಗಳನ್ನು ವಸಾಹತುಗಳು ಅಳವಡಿಸಿಕೊಂಡ ಪರಿಣಾಮವಿದು.

ಪರಾಧೀನವಾದ ರಾಷ್ಟ್ರಗಳಿಗೆ ಸಾಂದರ್ಭಿಕವಾಗಿ ಈ ಕ್ರಮಗಳ ಆಯ್ಕೆ ಅಥವಾ ವಿರೋಧದ ಸಾಧ್ಯತೆ ಇರುವುದಿಲ್ಲ. ಆದರೆ, ವಸಾಹತೋತ್ತರ ಸಂದರ್ಭದಲ್ಲಿ ವಸಾಹತುಶಾಹಿ ಮಾದರಿಗಳಿಗೆ ಪರ್ಯಾಯಗಳನ್ನು ಕಂಡುಕೊಳ್ಳುವ ಸಾಧ್ಯತೆ ಇರುತ್ತದೆ. ಆದರೆ, ಅದು ಅಷ್ಟು ಸರಳವಾಗಿರುವುದಿಲ್ಲ. ಈಗಾಗಲೇ ಒಂದು ಮಾದರಿಗೆ ಸಾಕಷ್ಟು

ದೀರ್ಘಕಾಲದಿಂದ ಒಗ್ಗಿ ಹೋಗಿರುವುದರಿಂದ ಈ ಕ್ರಮಗಳನ್ನು ಮೀರಲು ಅನೇಕ ಅಡ್ಡಿಗಳು ಎದುರಾಗುತ್ತವೆ.

ಇಂತಹ ಸಂದರ್ಭದಲ್ಲಿ ನಿರ್ವಸಾಹತೀಕರಣದ ಚಿಂತನೆಗಳನ್ನು ಮಂಡಿಸುವುದು ಸವಾಲಿನ ಕೆಲಸವಾಗುತ್ತದೆ. ಆದರೆ, ಅದು ದೇಶೀ ಸಮುದಾಯಗಳ ನಿಜವಾದ ನಿರ್ವಸಾಹತೀಕರಣಕ್ಕೆ ಅವಶ್ಯಕವಾಗಿರುತ್ತದೆ. ವಸಾಹತುಶಾಹಿಯ ದೈಹಿಕ ನಿರ್ಗಮನದಿಂದಷ್ಟೆ ವಸಾಹತುಶಾಹಿಯಿಂದ ಮುಕ್ತವೆಂದು ಭಾವಿಸಲಾಗದು.

ಈ ಹಂತದಲ್ಲಿ ಸಾಂಸ್ಕೃತಿಕ ಚಿಂತನೆಗಳಿಂದ ನಿರ್ವಸಾಹತೀಕರಣದ ಚಿಂತನೆಗಳು ರೂಪುಗೊಳ್ಳುತ್ತವೆ. ವಸಾಹತೋತ್ತರದಲ್ಲೂ ವಸಾಹತು ಮಾದರಿಗಳೇ ಮುಂದುವರೆಯುತ್ತಿರುವುದರಿಂದಾಗಿ ಬೌದ್ಧಿಕ ವಲಯದಲ್ಲಿ ನಿರ್ವಸಾಹತೀಕರಣದ ರೂಪುರೇಷೆಗಳು ಸಿದ್ಧವಾಗಲಾರಂಭಿಸುತ್ತವೆ. ಭಾರತದ ನಿರ್ವಸಾಹತೀಕರಣದ ಪ್ರಕ್ರಿಯೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲೇ ಅನೇಕ ರೂಪಗಳಲ್ಲಿ ವ್ಯಕ್ತವಾಗಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಸಾಹಿತ್ಯಕ ನಿರ್ವಸಾಹತೀಕರಣದ ಚಿಂತನೆಗಳು

ನಿರ್ವಸಾಹತೀಕರಣ ಎಲ್ಲ ಬಗೆಯ ಹಿಡಿತಗಳಿಂದ ಬಿಡುಗಡೆಯ ಉದ್ದೇಶ ಹೊಂದಿರುವುದರಿಂದ ಸಾಹಿತ್ಯ, ಕಲೆ, ಸಂಸ್ಕೃತಿ, ಧರ್ಮ, ಆಡಳಿತ, ಶಿಕ್ಷಣ ಕ್ರಮಗಳು, ಆಧುನಿಕ ಮೌಲ್ಯಗಳನ್ನು ಮರುಶೋಧಿಸುವ ಕೆಲಸ ನಡೆಯುತ್ತದೆ. ವಸಾಹತೀಕರಣದಿಂದ ಬಿಡುಗಡೆಯ ಈ ಪ್ರಕ್ರಿಯೆಯನ್ನು ಡಿ.ಆರ್.ನಾಗರಾಜ್‌ರವರ ಚಿಂತನೆಗಳ ಮೂಲಕ ನೋಡುವ ಪ್ರಯತ್ನವಿದು.

"ನಿರ್ದಿಷ್ಟ ಸಾಂಸ್ಕೃತಿಕ ದೇಶ – ಕಾಲಗಳಲ್ಲಿ ಸೃಷ್ಟಿಯಾದ ಕೃತಿ ಸಮೂಹವನ್ನು ಅದರ ಕ್ಷೇತ್ರದಲ್ಲೇ ಹುಟ್ಟಿದ ಗ್ರಹಿಕೆಯ ಕ್ರಮಗಳನ್ನು ಬಳಸಿ ಅರ್ಥೈಸುವ ವಿಧಾನದ ಉಪಯುಕ್ತತೆಯ ಪ್ರಶ್ನೆ ಇದು. ಒಗಟು ಬಿಡಿಸಿ ಸ್ಪಷ್ಟವಾಗಿ ಹೇಳಬೇಕು ಎಂದರೆ: ಬೌದ್ಧಿಕ ನಿರ್ವಸಾಹತೀಕರಣದ ಸ್ವರೂಪವನ್ನು ತಿಳಿಯುವ ಪ್ರಕ್ರಿಯೆ ಇದು"[10] ಎಂದು ಡಿ.ಆರ್.ನಾಗರಾಜ್ ರವರು 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಯಲ್ಲಿ ಶೈವ ಕಾವ್ಯ ಮೀಮಾಂಸೆಯ ನೆಲೆಗಳನ್ನು ಅಲ್ಲಮ ಪ್ರಭುವಿನ ವಚನಗಳ ಮೂಲಕ ಶೋಧಿಸುವ ಸಂದರ್ಭದಲ್ಲಿ ಹೇಳುತ್ತಾರೆ.

ಈ ವಿಷಯವನ್ನು ಡಿ.ಆರ್.ನಾಗರಾಜ್ ಅವರೇ ಹೀಗೆ ಸ್ಪಷ್ಟಪಡಿಸುತ್ತಾರೆ: "ನಾನು ಈ ಪ್ರಶ್ನೆ ಎತ್ತಿದ್ದು ಒಟ್ಟಾರೆಯಾಗಿ ಭಾರತದ ಸಾಂಸ್ಕೃತಿಕ, ಸಾಹಿತ್ಯಕ, ಚಾರಿತ್ರಿಕ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಅಧ್ಯಯನಗಳ ಹಿನ್ನೆಲೆಯಲ್ಲಿ. ವಿಮರ್ಶಾತ್ಮಕ ದೇಸಿವಾದದ ನೆಲೆಗಳನ್ನು ವಿಸ್ತರಿಸುವ, ಅವನ್ನೆ ವಿಶ್ವಾತ್ಮಕ ವಿಧಾನಗಳನ್ನಾಗಿ ಉಳಿದವಕ್ಕೆ ಮುಖಾಮುಖಿಯಾಗಿಸುವ ಒಂದು ಮಹತ್ವಾಕಾಂಕ್ಷಿ ಸಂಕಲ್ಪದ ಚಿಕ್ಕ ಅಭಿವ್ಯಕ್ತಿ ಈ ಪ್ರಯತ್ನ ಎಂದರೂ ನಡೆದೀತು. ಉದಾಹರಣೆಗೆ, ಭಾರತದ ಚಾರಿತ್ರಿಕ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವ ಕಳೆದ ೧೦೦ ವರ್ಷಗಳ ಪ್ರಯತ್ನಗಳೆಲ್ಲ ಬಹುಮಟ್ಟಿಗೆ ಪಶ್ಚಿಮದಿಂದ ರೂಪುಗೊಂಡವು. ಉದಾರವಾದಿ - ಪಾಸಿಟಿವಿಸ್ಟ್ ಅಧ್ಯಯನ ಕ್ರಮಗಳಿರಲಿ, ಮಾರ್ಕ್ಸ್‌ವಾದಿ, ಸಬಾಲ್ಟರ್ನ್ ಅಧ್ಯಯನ ವಿಧಾನಗಳೂ ಕೂಡಾ ಈ ಬಗೆಯವೇ"[11] ಎನ್ನುತಾರೆ.

ಪ್ರಸ್ತುತ ಸಂದರ್ಭದಲ್ಲಿ ಕೂಡ ಮುಂದುವರೆದಿರುವ ಪಶ್ಚಿಮದ ನೋಟಕ್ರಮಗಳನ್ನು ಸಾಹಿತ್ಯ, ವಿಮರ್ಶೆ, ಬೌದ್ಧಿಕತೆ, ಮೀಮಾಂಸೆಗಳಲ್ಲಿ ಮೀರುವ ಪ್ರಯತ್ನವೇ ಈ ಚಿಂತನೆಗಳಲ್ಲಿ ಮುಖ್ಯ ಧೋರಣೆಯಾಗಿರುವುದನ್ನು ಗಮನಿಸಬಹುದು. ವಸಾಹತೋತ್ತರದಲ್ಲೂ ಪಶ್ಚಿಮದ ಮಾದರಿಗಳು ಪ್ರಸ್ತುತವಲ್ಲವೆಂಬುದು ಇಲ್ಲಿನ ಒಂದು ಮುಖ್ಯಧಾರೆಯಾಗಿದೆ. "ಕಳೆದ ೨೦-೨೫ ವರ್ಷಗಳಿಂದ ಪೋಸ್ಟ್-ಮಾಡರ್ನಿಸ್ಟರು ಮತ್ತು ಎಡ್ವರ್ಡ್ ಸೈದ್ ಪ್ರಣೀತ ಸಾಂಸ್ಕೃತಿಕ ಅಧ್ಯಯನಗಳು ಶೋಧಿಸಿರುವ ಮುಖ್ಯ ಸತ್ಯ ಇದೇ. ಉದಾಹರಣೆಗೆ, ಭಾರತದ ಜಾತಿ ಮತ್ತು ಧರ್ಮಗಳ ಬಗೆಗೆ ಕಳೆದ ೧೫೦ ವರ್ಷಗಳಿಂದ ನಡೆದಿರುವ ಅಧ್ಯಯನ ಚರ್ಚೆಗಳು ಹೀಗೆ ಪಶ್ಚಿಮದ ಬೌದ್ಧಿಕ, ಶೈಕ್ಷಣಿಕ ಅನುಭವಗಳಿಂದ ನಿಯಂತ್ರಿತವಾಗಿದೆ ಎಂಬ ಅಂಶ ಈಗಾಗಲೇ ಸಾಬೀತಾಗಿದೆ"[12] ಎನ್ನುತ್ತಾರೆ ಡಿ.ಆರ್.ನಾಗರಾಜ್. ಸಂಸ್ಕೃತಿ ಅಧ್ಯಯನ ಮತ್ತು ಮಾನವಿಕಗಳಲ್ಲಿ ಇಂದಿಗೂ ಬಳಸುತ್ತಿರುವ ಅಧ್ಯಯನ ವಿಧಾನಗಳು ಪಶ್ಚಿಮದಿಂದ ರೂಪಿಸಲ್ಪಟ್ಟಿರುವುದರಿಂದ ಈ ಅಧ್ಯಯನ ವಿಧಾನಗಳು, ಪರಿಕರ ಮತ್ತು ಮಾನದಂಡಗಳಲ್ಲಿ ಪಶ್ಚಿಮದ ನೆಲದ ಗುಣಗಳಿವೆಯಾದ್ದರಿಂದ, ಈ ಬಗೆಯ ನಿರ್ವಸಾಹತೀಕರಣದ ಸಾಧ್ಯತೆಗಳ ಶೋಧವನ್ನು ಡಿ.ಆರ್.ನಾಗರಾಜ್ ಪ್ರತಿಪಾದಿಸುತ್ತಾರೆ.

ನಿರ್ವಸಾಹತೀಕರಣದ ಈ ಪ್ರಕ್ರಿಯೆ ಅವರಿಗೆ ಪಶ್ಚಿಮದ ಆಡಳಿತದಿಂದಷ್ಟೇ ಬಿಡುಗಡೆ ಪಡೆಯುವುದಲ್ಲ, ಅದರ ಚಿಂತನಕ್ರಮಗಳಿಂದಲೂ ಬಿಡುಗಡೆಯನ್ನು ಪಡೆಯುವುದು.

'ಉರ್ದು ಸಾಹಿತ್ಯದ ಸ್ವರೂಪ' ಎಂಬ ಲೇಖನದಲ್ಲಿ "ಪಾಶ್ಚಾತ್ಯ ಪರಂಪರೆಗಳ ಪ್ರಶ್ನೆ ಬಂದಾಗ ಮಾತ್ರ ಉರ್ದು ಸಾಹಿತ್ಯ ಹೆಚ್ಚು ಸಂಕೀರ್ಣವಾದ, ವರ್ಣರಂಜಿತವಾದ ಪ್ರತಿಕ್ರಿಯೆಗಳನ್ನು ಪ್ರಕಟಿಸಿದೆ. ಪಾಶ್ಚಾತ್ಯ ಪ್ರಭಾವದ ಪ್ರವಾಹಕ್ಕೆ ಅನೇಕ ಸಾಹಿತ್ಯ ಸಂಸ್ಕೃತಿಯ ನದಿಗಳು ತಮ್ಮ ಗತಿಗಳನ್ನೇ ಬದಲಿಸಿಬಿಟ್ಟವು. ಆದರೆ, ಉರ್ದು ಮಾತ್ರ ಹಠ ಹಿಡಿದು ತನ್ನ ಮೂಲ ರೂಪ, ಗ್ರಹಿಕೆಯ ಕ್ರಮಗಳನ್ನು ಕಾಪಾಡಲು ಪ್ರಯತ್ನಪಟ್ಟದ್ದು ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ತುಂಬ ಮುಖ್ಯ ಸಂಗತಿ. ಪಶ್ಚಿಮದ ಆಕರ್ಷಣೆ ಅಲ್ಲಿ ಎಷ್ಟು ತೀವ್ರವಾಗಿದೆಯೋ ಅಷ್ಟೇ ಅದರ ಬಗ್ಗೆ ಗಾಢ ವಿರೋಧವೂ ಇದೆ. ಸಾಹಿತ್ಯ ಮತ್ತು ವಸಾಹತೀಕರಣದ ಸಮಸ್ಯೆಯನ್ನು ಉರ್ದು ಸಾಹಿತ್ಯದ ಸಂದರ್ಭದಲ್ಲಿ ಕೊಂಚ ಬೇರೆಯೇ ಆದ ರೀತಿಯಲ್ಲಿ ನೋಡಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಪಶ್ಚಿಮದ ಪ್ರಕಾರಗಳು ಉರ್ದುವಿನಲ್ಲೂ ಬೆಳೆದು ಬಂದ ರೀತಿಗಳು ಆಳವಾದ ಅಭ್ಯಾಸಕ್ಕೆ ಅರ್ಹ. ಕಾರಣ, ಆ ಪ್ರಕ್ರಿಯೆ ಒಟ್ಟು ಭಾರತೀಯ ಅಥವಾ ಪೌರ್ವಾತ್ಯ ಸಾಹಿತ್ಯಕ್ಕೂ ಅನ್ವಯವಾಗುವಂಥದ್ದು"[13] ಎಂಬ ಡಿ.ಆರ್.ನಾಗರಾಜ್‌ರವರ ಅಭಿಪ್ರಾಯದಲ್ಲಿ, 'ಪಾಶ್ಚಾತ್ಯ ಪ್ರಭಾವದ ಪ್ರವಾಹಕ್ಕೆ ಅನೇಕ ಸಂಸ್ಕೃತಿಯ ನದಿಗಳು ತಮ್ಮ ಗತಿಗಳನ್ನೆ ಬದಲಿಸಿ' ಬಿಡದೆ ಹಠ ಹಿಡಿದು ತನ್ನ ಮೂಲ ರೂಪ, ಗ್ರಹಿಕೆಯ ಕ್ರಮಗಳನ್ನು ಕಾಪಾಡುವ ಪ್ರಯತ್ನದ ಭಾಗವಾಗಿ ಉರ್ದು ಸಾಹಿತ್ಯದ ಒಂದು ಮಾದರಿಯನ್ನು ಮುಖ್ಯವಾಗಿ ಪರಿಗಣಿಸಲಾಗಿದೆ.

ಪಾಶ್ಚಾತ್ಯ ಪ್ರಭಾವವನ್ನು ಅನೇಕ ಸಾಹಿತ್ಯ ಸಂಸ್ಕೃತಿಗಳು ಪರಿಭಾವಿಸಿ, ಅದರೊಡನೆ ನಿರಾಕರಣೆ, ಒಪ್ಪಿತ ಇನ್ನಿತರ ಅನೇಕ ಮಾರ್ಗಗಳ ಮೂಲಕ ಅನುಸಂಧಾನ ನಡೆಸಲೇ ಬೇಕಾದ ಅನಿವಾರ್ಯತೆಯನ್ನು ಉರ್ದು ಸಾಹಿತ್ಯವು ಭಿನ್ನ ಕ್ರಮದಲ್ಲಿ ಎದುರಾಗಿ, ತನ್ನ ಅಸ್ತಿತ್ವವನ್ನು ಪ್ರತಿಪಾದಿಸುವ ಕ್ರಮವು – ಸಾಹಿತ್ಯ ಸಂಸ್ಕೃತಿಗಳಲ್ಲಿ ಅಂತಸ್ಥವಾಗಿರುವ ನಿರ್ವಸಾಹತೀಕರಣದ ಕ್ರಮಗಳನ್ನು ಶೋಧಿಸಿಕೊಳ್ಳುವುದಷ್ಟೇ ಅಲ್ಲದೆ, ಪಾಶ್ಚಾತ್ಯ ಪ್ರಭಾವಗಳೊಡನೆ ಅರ್ಥಪೂರ್ಣವಾದ ಸಂವಾದಕ್ಕೆಳೆಸುವುದನ್ನು ಕಾಣಬಹುದು.

ವಸಾಹತು ಪೂರ್ವದ ಅನುಸಂಧಾನದ ಸಾಧ್ಯತೆಗಳಿಗಿಂತ ವಿಸ್ತರವಾದ ಅವಕಾಶವೊಂದು, ವಸಾಹತುಶಾಹಿ ಕಾಲದಲ್ಲಿ ಎದುರಾದಾಗ ಅದರೊಡನೆ ಈ ಬಗೆಯಲ್ಲಿ ಸಂವಾದಿಸುವ ಸಾಧ್ಯತೆಗಳು ಅವಶ್ಯಕವೆನ್ನುವುದನ್ನು ಮಂಡಿಸುತ್ತಾ, ಅದರೊಳಗೆ ಭಿನ್ನಧಾರೆಯೊಂದನ್ನು ಉಳಿಸಿಕೊಳ್ಳುವ ಪ್ರಯತ್ನವು ಮುಖ್ಯವೆಂಬ ಅಭಿಪ್ರಾಯವನ್ನು ಡಿ.ಆರ್.ನಾಗರಾಜ್ ಹೀಗೆ ವ್ಯಕ್ತ ಪಡಿಸುತ್ತಾರೆ: "ವಸಾಹತುಶಾಹಿ ಅನುಭವಕ್ಕೆ ಮುಂಚೆ ನಮ್ಮ ಕಾವ್ಯ ಪರಂಪರೆಯ ಆಂತರಿಕ ಜಗತ್ತು ಬಹುಮುಖೀ ಸ್ತರಗಳದ್ದು. ಆಂತರಿಕ

ಸ್ವಯಂಪೂರ್ಣತೆ, ಭಿನ್ನ ನಂಬಿಕೆಯ ಗ್ರಹಿಕೆಯ ಪರಂಪರೆಗಳು ಒಟ್ಟಾರೆಯಾಗಿದ್ದ ಸ್ಥಿತಿ ಅದು. ಸಿದ್ಧಾಂತದ ಹಂತದಲ್ಲಿ ವೈದಿಕ, ವೀರಶೈವ, ಜೈನ ಧಾರೆಗಳು ತಾತ್ವಿಕವಾಗಿ 'ಅನ್ಯತನವನ್ನು' ಸಂದೇಹಿಸುತ್ತಿದ್ದೂ, ಸಾಹಿತ್ಯದ ಹಂತದಲ್ಲಿ ಸಂಕರವನ್ನು ತಪ್ಪಿಸಿಕೊಳ್ಳಲಾಗದ ಸ್ಥಿತಿಯಲ್ಲೇ ತಮ್ಮ ಸೃಜನಶೀಲತೆಯನ್ನು ಕಂಡುಕೊಳ್ಳುತ್ತಿದ್ದವು"[14]

ಈ ಬಗೆಯ ಅನುಸಂಧಾನದಲ್ಲೂ ಇರಬೇಕಾದ ಆಳವಾದ ಸಾಂಸ್ಕೃತಿಕ ಎಚ್ಚರದ ಅಗತ್ಯತೆಯೆಡೆಗೆ ಸದಾ ಎಚ್ಚರದ ಸ್ಥಿತಿಯಲ್ಲಿರಬೇಕೆಂಬುದು ಈ ದಿಸೆಯಲ್ಲಿ ಡಿ.ಆರ್.ನಾಗರಾಜ್ ಅವರ ಗ್ರಹಿಕೆ.

ಸಾಹಿತ್ಯದ ಪ್ರಕಾರ, ಶೈಲಿ, ಛಂದಸ್ಸು, ವಸ್ತು ವಿನ್ಯಾಸ, ತಂತ್ರ, ಬಂಧ, ಅಭಿವ್ಯಕ್ತಿ ಕ್ರಮ ಇತ್ಯಾದಿಗಳಲ್ಲೆಲ್ಲ ದೇಶೀ ಸಾಹಿತ್ಯ ಕೃತಿಗಳಿಗೆ ತನ್ನದೆ ಆದ ಸ್ವಂತಿಕೆಗಳನ್ನು ಉಳಿಸಿಕೊಳ್ಳಲು ಅನ್ಯ ಸಾಹಿತ್ಯದ ಅನುಸಂಧಾನಗಳು ನೆರವಾಗಬೇಕು; ಆದರೆ ಸಂಪೂರ್ಣವಾಗಿ ದೇಶೀ ಸಾಹಿತ್ಯದ ಮಾದರಿಗಳು ಹೈಜಾಕ್ ಆಗಬಾರದೆಂಬುದು ಮುಖ್ಯ. ಪಶ್ಚಿಮದ ಆಕ್ರಮಣಾತ್ಮಕ ಮಾದರಿಗಳಿಂದ ಬಿಡುಗಡೆಯ ಸಾಧ್ಯತೆಗಳಿರುವುದು ಈ ಬಗೆಯ ಸಾಹಿತ್ಯ ಸಂಸ್ಕೃತಿಗಳು ಸಾಂಸ್ಕೃತಿಕವಾಗಿ ಪಶ್ಚಿಮವನ್ನು ವಿರೋಧಿಸುವುದರಲ್ಲೇ. ಆ ಕಾರಣದಿಂದಾಗಿ ನಿರ್ವಸಾಹತೀಕರಣದ ಪ್ರಕ್ರಿಯೆಯಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುವ ಸಾಧ್ಯತೆಗಳಿರುವುದು ಈ ಬಗೆಯ ಸಾಹಿತ್ಯಕ ಆಕೃತಿಗಳಲ್ಲಿ.

ಈ ಬಗೆಯ ಪ್ರೇರಣೆಗಳನ್ನು ಪಡೆಯದೆ, ಸ್ವಯಂ ಸ್ಫೂರ್ತಿ, ಸ್ವಯಂ ಪ್ರಭೆಯುಳ್ಳ ಸಾಹಿತ್ಯಕೃತಿಗಳ ಅಸ್ತಿತ್ವವು ಕೂಡ ಸಾಧ್ಯವಿರಲಾರದು. ಹೋಮರನ ಕಾವ್ಯದಿಂದ ಇಂದಿನವರೆಗಿನ ಪಾಶ್ಚಾತ್ಯ, ಪಾಶ್ಚಿಮಾತ್ಯ ಸಾಹಿತ್ಯಗಳೆಲ್ಲವು ಪರಸ್ಪರ ಆದಾನ-ಪ್ರದಾನಗಳಿಂದಲೇ ರೂಪುಗೊಂಡಿರುವಂತವು. ಜಾನಪದವು ಈ ಬಗೆಯ ಪ್ರದಾನಗಳಲ್ಲಿ ಆದಿಮರೂಪಿಯಾದದ್ದು. ಆ ನಂತರದ ಸ್ಥಾನದಲ್ಲಿ ಆಯಾ ದೇಶೀಯ ವಿಚಾರಧಾರೆ, ಚಿಂತನೆ, ಕೃತಿಗಳೊಡನೆ ಆಯಾ ಕಾಲದ ಕೃತಿಗಳು ಹುಟ್ಟುವ ಸಂದರ್ಭದಲ್ಲಿ ಅನುಸಂಧಾನವನ್ನು ನಡೆಸುವುದು ಅನಿವಾರ್ಯವಾಗಿರುತ್ತದೆ.

ಡಿ.ಆರ್.ನಾಗರಾಜ್‌ರವರ ಪ್ರಕಾರ, "ಭಾರತೀಯ ಸಾಹಿತ್ಯ ಎನ್ನುವುದು ಒಂದು ಏಕಾಂತದಲ್ಲಿ ಹುಟ್ಟಿರುವುದಲ್ಲ; ಬದಲಾಗಿ ಅದು ಅನೇಕ ಪರಿವರ್ತನೆಗಳಲ್ಲಿ ಹುಟ್ಟಿಕೊಂಡಿರುವಂಥದು. ಕನ್ನಡದಲ್ಲಿ ಬೇರೆ ಪ್ರಾಂತೀಯ ಭಾಷೆಗಳಲ್ಲಿ ಅಥವಾ ಸಂಸ್ಕೃತಿಯಲ್ಲಿ ರಚಿತವಾದ ಒಂದು ನಿರ್ದಿಷ್ಟ ರೀತಿಯ ಸಾಹಿತ್ಯವನ್ನು ಹೊರತುಪಡಿಸಿ ಹೇಳುವುದಾದರೆ, ಒಂದು ಭಾಷಿಕ ಏಕಾಂತತೆಯಲ್ಲಿ ಸೃಷ್ಟಿಗೊಂಡ ಕೃತಿಗಳು ನಮ್ಮಲ್ಲಿಲ್ಲ.

ಅಂದರೆ, ನಾವೀಗ ಕನ್ನಡದ್ದು ಎಂದು ಯಾವುದನ್ನು ಕರೆಯುತ್ತೇವೆಯೋ ಅದು ಕೇವಲ ಕನ್ನಡ ಸಾಹಿತ್ಯದ್ದು ಮಾತ್ರವಾಗಿರಲಾರದು. ಅದು ತನ್ನ ಮೂಲವಸ್ತುವನ್ನು ಬೇರೆ ಬೇರೆ ಕಡೆಗಳಿಂದ ಪಡೆದುಕೊಂಡಿರುತ್ತದೆ"[15]

ಹೀಗೆ ಪಡೆದುಕೊಂಡ ವಸ್ತುವನ್ನು ತನ್ನ ಸಂವೇದನೆಗೆ ಒಗ್ಗಿಸುವಲ್ಲಿಯೆ ಆಯಾ ದೇಶೀ ಸಾಹಿತ್ಯಕ ಸಾಧನೆಯ ಮಹತ್ವವಿರುವುದು. ಇದು ಪಶ್ಚಿಮದ ಅಥವಾ ದೇಶೀ ಮಾದರಿಗಳ ನಕಲಾಗದೆ, ಸ್ವತಂತ್ರ ಕೃತಿಯೆಂಬಂತೆ ರೂಪುಗೊಳ್ಳುವುದನ್ನು ಕನ್ನಡ ಸಾಹಿತ್ಯದ ಅನೇಕ ಕೃತಿಗಳು ಸಾಬೀತು ಮಾಡಿವೆ. ಕವಿ ರಾಜ ಮಾರ್ಗ, ವಿಕ್ರಮಾರ್ಜುನ ವಿಜಯ, ಸಾಹಸ ಭೀಮ ವಿಜಯ ಇಂತಹ ಪ್ರಯತ್ನಗಳಿಗೆ ಕೆಲವು ಉದಾಹರಣೆಗಳು.

ಶಿಷ್ಟ – ಜಾನಪದ ಎಂಬ ವಿಂಗಡಣೆಯನ್ನು ಒಪ್ಪದ ಡಿ.ಆರ್.ನಾಗರಾಜ್‌ರವರು, ದೇಶೀ ಸೃಜನಶೀಲ ಅಭಿವ್ಯಕ್ತಿ ಮಾದರಿಗಳಲ್ಲಿ ಜಾನಪದವನ್ನು ಮುಖ್ಯವಾಗಿ ಪರಿಭಾವಿಸಬೇಕೆಂಬ ಅಭಿಪ್ರಾಯ ಹೊಂದಿದ್ದರು. 'ಸಾಹಿತ್ಯ ಕಥನ' ಹಾಗೂ 'ಸಂಸ್ಕೃತಿ ಕಥನ' ಕೃತಿಗಳಲ್ಲಿನ ಕೆಲವು ಲೇಖನಗಳಲ್ಲಿ ಈ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದರೆ, ಅದರ ಮುಂದುವರೆದ ಭಾಗವಾಗಿ 'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ'ಯಲ್ಲಿ 'ಮಂಟೇಸ್ವಾಮಿ' ಹಾಗೂ 'ಅಲ್ಲಮ ಪ್ರಭು'ವಿಗಿರುವ ಕಥಾನಕಗಳನ್ನು ಬೆಸೆಯುವ ಪ್ರಯತ್ನ ನಡೆಸಿದರು.

ಡಿ.ಆರ್.ನಾಗರಾಜ್ ಅವರ ಪ್ರಕಾರ, "ಭಾರತದಲ್ಲಿ ಜಾನಪದವೆಂದರೆ ವಸ್ತುವಲ್ಲ. ಬದಲಾಗಿ ವಸ್ತುವನ್ನು ನೋಡುವ, ನಿರ್ವಹಿಸುವ ಒಂದು ನಿಲುವು"[16] ಆಗಿರುವುದರಿಂದ ಈ ಬಗೆಯ ಶಿಷ್ಟ – ಜಾನಪದ ಎಂಬ ವಿಂಗಡಣೆ ಅನವಶ್ಯಕವೆನ್ನುವುದು ಅವರ ನಿಲುವು. ಕನ್ನಡ ವಿಶ್ವವಿದ್ಯಾಲಯವು 'ಬುಡಕಟ್ಟು ಅಧ್ಯಯನ ಮಾಲೆ' ಹೆಸರಿನಲ್ಲಿ ಪ್ರಕಟಿಸಿದ ಜನಪದ ಮಹಾಕಾವ್ಯಗಳ ಬಗೆಗೆ "ಈ ಕಾವ್ಯವನ್ನು ಅಧ್ಯಯನ ಮಾಡುವ ವೈಧಾನಿಕ ಸಮಸ್ಯೆಗಳ ಬಗ್ಗೆ ಮಾತ್ನಾಡೋದಾದ್ರೆ, ಯಾಕೋ ನನಗೆ ಈ ಬುಡಕಟ್ಟು ಸಾಹಿತ್ಯ, ಬುಡಕಟ್ಟು ಯೋಜನೆ ಇದರ ಬಗೆಗೇನೆ ಆಳವಾದ ಮುಜುಗರ ಇದೆ"[17] ಎನ್ನುತ್ತಾರೆ.

ಏಕೆಂದರೆ ಈ ಬಗೆಯ ಅಧ್ಯಯನ ಮಾದರಿಗಳನ್ನು ರೂಪಿಸಿರುವುದು ಜಾಗತಿಕ ಇತಿಹಾಸದ ಹಿನ್ನೆಲೆಯಲ್ಲಿ. ಆದರೆ ಹೀಗೆ ಮುಖ್ಯವಾದ ಸಾಹಿತ್ಯಕ ಮಾರ್ಗವೊಂದನ್ನು ಅದರ ಎಲ್ಲ ಸಂಬಂಧಗಳಿಂದ ಹೊರತಾಗಿಸಿ, ಅನ್ಯವಾಗಿಸುವ ಅಧ್ಯಯನ ಕ್ರಮದ

ಬದಲಿಗೆ ಅದನ್ನು ಶಿಷ್ಟ ಎನ್ನಲಾದ ಸಾಹಿತ್ಯದ ಜೊತೆಗೆ ಅಧ್ಯಯನ ಮಾಡುವುದರಿಂದ, ದೇಶೀ ಸಾಹಿತ್ಯ ಪ್ರಕಾರಗಳಿಗೂ ಒಂದು ಬಗೆಯ ಕೊಂಡಿಯಾಗಿ, ಸಾಹಿತ್ಯಕ ಅಧ್ಯಯನವು ಅರ್ಥಪೂರ್ಣವಾಗುತ್ತದೆಂಬ ನಿಲುವು ಅವರದು. ಈ ಬಗೆಯ ಪಶ್ಚಿಮಮುಖೀ ಧೋರಣೆಯ ಬದಲಿಗೆ ಒಟ್ಟು ಕಾವ್ಯ ಪರಂಪರೆಯ ಜೊತೆಗೆ ಈ ಕಾವ್ಯಗಳನ್ನು ಒಳಗೊಳ್ಳುವುದು ಡಿ.ಆರ್.ನಾಗರಾಜ್‌ರವರಿಗೆ ಮುಖ್ಯವಾಗುತ್ತದೆ.

ಕಾವ್ಯಮೀಮಾಂಸೆಯಲ್ಲಿ ನಿರ್ವಸಾಹತೀಕರಣದ ಚಿಂತನೆಗಳು

ಕಾವ್ಯಮೀಮಾಂಸೆಯ ಅನೇಕ ಪರಿಕರಗಳು, ಪರಿಭಾಷೆಗಳು ರೂಪುಗೊಂಡಿರುವುದು ತತ್ವಶಾಸ್ತ್ರ, ಧಾರ್ಮಿಕ ಗ್ರಂಥಗಳಿಂದ. ಪ್ಲೇಟೋ, ಅರಿಸ್ಟಾಟಲ್, ಭರತ, ಅಭಿನವ ಗುಪ್ತ, ನಾಗಾರ್ಜುನ ಮೊದಲಾದವರ ಚಿಂತನೆಗಳಿಗೂ ಕಾವ್ಯಮೀಮಾಂಸೆಗೂ ಇರುವ ಸಂಬಂಧದಲ್ಲಿ ಇದು ಸ್ಪಷ್ಟವಾಗಿದೆ.

ಭಾರತೀಯಕಾವ್ಯ ಮೀಮಾಂಸೆಯ ಸಂದರ್ಭದಲ್ಲಿ ಉಂಟಾಗಿರುವ ಒಳ ವಸಾಹತುಶಾಹಿ ಧೋರಣೆಯ ಕಡೆಗೆ ಗಮನ ಸೆಳೆಯುವ ಡಿ.ಆರ್.ನಾಗರಾಜ್‌ರವರು, ವೈದಿಕ – ಅವೈದಿಕ ಚಿಂತನೆಗಳಲ್ಲಿನ ಭಿನ್ನತೆಯನ್ನು ರಸ ಸಿದ್ಧಾಂತದ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. 'ಬ್ರಹ್ಮಾನಂದ ಸಹೋದರ' ಎಂಬ ವೈದಿಕ ಕಟ್ಟುವಿಕೆಗಳ ಬಗೆಗೆ ಮುಖ್ಯವಾದ ಪ್ರಶ್ನೆಯ ಮೂಲಕ ಎದುರಾಗುತ್ತಾರೆ. "ರಸ ಸಿದ್ಧಾಂತವನ್ನು ಒಪ್ಪಲು ಬೌದ್ಧದರ್ಶನಕ್ಕೆ ಅನೇಕ ಕಷ್ಟಗಳಿವೆ. ಬ್ರಹ್ಮ ಅಥವಾ ಆತ್ಯಂತಿಕ ವಾಸ್ತವದ ಇತ್ಯಾತ್ಮಕ ಆಯಾಮದ ಮೇಲೆ ಮಾತ್ರ ಅಲ್ಲಿ ಒತ್ತಿದ್ದು, ಅದರ ಬಹುಮುಖೀ ಆಯಾಮದ ಮೇಲೆ ಒತ್ತು ತುಂಬ ಎಂದರೆ ತುಂಬ ಕಡಿಮೆ ಇದೆ. ಆತ್ಮವಾದೀ ರಸಪ್ರಸ್ಥಾನ ಅದನ್ನು ಬ್ರಹ್ಮಾನಂದದ ಜತೆಗೆ ಹೊಂದಿಸಿ ಹೇಳಿದ್ದು ಈ ದೃಷ್ಟಿಯಿಂದ ವಿಶೇಷ ಚರ್ಚೆಗೆ ಅರ್ಹ."[18]

ಈ ಬಗೆಯಲ್ಲಿ ಏಕಮುಖಿಯಾದಾಗ ರಸ ಪ್ರಸ್ಥಾನದ ಮಿತಿಗಳನ್ನು ಡಿ.ಆರ್.ನಾಗರಾಜ್‌ರವರು ಮುಂದೆ ಚರ್ಚಿಸುತ್ತಾ, "ಆಬ್ಸಲ್ಯೂಟ್ ಆದದ್ದು ವ್ಯಕ್ತವಾಗುವುದು ಏಕರಸದ ಸರಳ ಸ್ಥಿತಿಯಲ್ಲಿ ಅಲ್ಲ. ಶೂನ್ಯ ಅಥವಾ ನಿರ್ವಾಣದ ಸ್ಥಿತಿಯಲ್ಲಿ ರಸಗಳು ಬೆರೆಯುತ್ತವೆ. ಅನೇಕ ಭಾವಸ್ಥಿತಿಗಳು ಒಟ್ಟಿಗೇ ಹುಟ್ಟುತ್ತವೆ. ಅದರಲ್ಲೂ ಆಧುನಿಕ ಜಗತ್ತಿನ ಸಾಹಿತ್ಯ – ಕಾಲಾನುಭವದ ದೃಷ್ಟಿಯಿಂದಲೂ ಏಕ ರಸದ ಅಂತಿಮ ಸರಳ ಸ್ಥಿತಿ ಅಷ್ಟು ಉಪಯುಕ್ತ ವ್ಯಾಖ್ಯೆ ಅಲ್ಲ. ಎಲಿಯಟ್‌ನ 'ವೇಸ್ಟ್ ಲ್ಯಾಂಡ್'ಅನ್ನು ಏಕರಸದ ಸರಳ ಸ್ಥಿತಿಯಿಂದ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಹಾಗೆಯೇ ಅಡಿಗರ

'ಕೂಪಮಂಡೂಕ'ವನ್ನು, 'ಶ್ರೀರಾಮನವಮಿಯ ದಿವಸ'ವನ್ನು ಏಕರಸದ ಸರಳ ಸ್ಥಿತಿಯಿಂದ ವ್ಯಾಖ್ಯಾನಿಸಿದರೆ ಸಿಕ್ಕುವುದು ಜೊಳ್ಳು ಮತ್ತು ಜೊಂಡು. ಆತ್ಮವಾದೀ ದರ್ಶನದ ಸರಳಾನ್ವಯದಿಂದ ರಸಸಿದ್ಧಾಂತದ ಮುಖ್ಯ ಮಜಲುಗಳು ರೂಪುಗೊಂಡಿವೆ ಎನ್ನುವುದು ತಿಳಿದರೆ, ಅದರ ಆಧುನಿಕ ಉಪಯುಕ್ತತೆಯ ಸೀಮಿತತೆಯೂ ಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ಜೈನ ದರ್ಶನದ ಅನೇಕಾಂತವಾದ ಮತ್ತು ಮಾಧ್ಯಮಿಕರ ಶೂನ್ಯತಾ ಅಥವಾ ಪ್ರತೀತ್ಯ ಸಮುತ್ಪಾದ ನೆಲೆಗಳಿಂದ ಹೊರಟರೆ ಬೇರೆಯೇ ಆದ ಕಾವ್ಯಮೀಮಾಂಸೆಗೆ ತಲುಪಲು ಸಾಧ್ಯ"[19]

ಏಕೆಂದರೆ ಆಧುನಿಕಪೂರ್ವ ಸಂದರ್ಭದಲ್ಲಿ ನಿರ್ದಿಷ್ಟ ತಾತ್ವಿಕತೆಯಿಂದ ಹುಟ್ಟಿದ ಮೀಮಾಂಸೆಯ ಪರಿಕಲ್ಪನೆಗಳೂ ಅನೇಕ ಕಾರಣಗಳಿಂದ ಸೀಮಿತ. ಆಧುನಿಕ ಸಂದರ್ಭದಲ್ಲಿನ ಕೃತಿಗಳಿಗೆ ಅವುಗಳನ್ನು ಅನ್ವಯಿಸಿ ನೋಡುವಾಗ, ಕೃತಿಕಾರರ ಭಿನ್ನ ಅನುಸಂಧಾನಗಳ ನೆಲೆಯಿಂದ ಕೂಡ ಈ ಪರಿಕರಗಳು ಸೀಮಿತವಾಗುತ್ತವೆ. ಅದರಲ್ಲೂ ಎಲಿಯಟ್, ಅಡಿಗರಂತಹ ಕವಿಗಳ ಕೃತಿಗಳು ರೂಪುಗೊಳ್ಳುವುದು ಪ್ರಪಂಚದ ಭಿನ್ನ ಬಗೆಯ ಪರಿಕರಗಳಿಂದ. ಇವುಗಳನ್ನು ಪರಿಭಾವಿಸುವಾಗ, ನಿರ್ದಿಷ್ಟ ಪರಿಭಾಷೆಗಳು ಅಷ್ಟು ಉಪಯುಕ್ತವಾಗಲಾರವು.

ಡಿ.ಆರ್.ನಾಗರಾಜ್‌ರವರ ಪ್ರಕಾರ, ಭಾರತೀಯ ಅವೈದಿಕ ದರ್ಶನಗಳ ನೋಟಕ್ರಮಗಳು ವೈದಿಕ ದರ್ಶನಗಳಿಗೆ ಸಂವಾದ ರೂಪದಲ್ಲಿ ಜನಿಸಿರುವುದರಿಂದಾಗಿ ಹಾಗೂ ಈ ಭಿನ್ನಧಾರೆಗಳು ಈ ಲೋಕವನ್ನು ಪರಿಭಾವಿಸುವ ಕ್ರಮಗಳು ಭಿನ್ನವಾದಂತೆ, ಪರಿಕರಗಳು, ಪರಿಭಾಷೆಗಳು ಭಿನ್ನವಾಗುತ್ತವೆ. ಅವರು, "ಬೆಡಗು ಅಥವಾ 'ಉಲಟ್ ಭಾಸಿ'ಯಲ್ಲಿ ವಾಸ್ತವದ ಯಾವ ಪ್ರತಿನಿಧೀಕರಣಗಳೂ ಬೆರೆತು ಸಮರಸವಾಗುವುದಿಲ್ಲ. ಇದನ್ನು ಕೂಡಾ ರಸವ್ಯವಸ್ಥೆಯ ಒಂದು ಚೌಕಟ್ಟಿನೊಳಗೆ ಸಿಲುಕಿಸಿ ಖಂಡಿತಾ ವಿವರಿಸಲು ಸಾಧ್ಯವಿದೆಯಾದರೂ ಅದು ಒಂದು ಕೃತಕ ಪ್ರಯತ್ನ ಮಾತ್ರವಾಗುತ್ತದೆ"[20] ಎನ್ನುತ್ತಾರೆ.

ಅಷ್ಟೇ ಅಲ್ಲದೆ, "ಇಲ್ಲಿ ನನ್ನ ಗಮನವಿರುವುದು ಭಾರತೀಯ ಕಾವ್ಯಮೀಮಾಂಸೆಯ ಆಳದಲ್ಲಿ ನಿಯಂತ್ರಕಗಳಾಗಿ ಹರಿಯುತ್ತಿರುವ ಆತ್ಮವಾದೀ ದರ್ಶನಗಳ ಕೆಲವು ನಿರ್ಣಾಯಕ ಪರಿಕಲ್ಪನೆಗಳ ಬಗೆಗೆ. 'ಬ್ರಹ್ಮ' ಪರಿಕಲ್ಪನೆಯ ನಾಗಬಂಧಗಳು ಎಲ್ಲ ಕಡೆಗೂ ಹಬ್ಬಿವೆ. ಕಾವ್ಯಮೀಮಾಂಸೆಯ ಜಾಲಗಳನ್ನು ಹೆಣೆದಿವೆ. ನಿರ್ವಾಣ ಪರಿಕಲ್ಪನೆಯಿಂದ ಹೊರಟರೆ ಕಡೆಯ ಪಕ್ಷ ಆ ವಿಕಲ್ಪಗಳಿಂದ ಬಿಡುಗಡೆ ಪಡೆಯಲು ಸಾಧ್ಯ. ಆಗ ಸಾಹಿತ್ಯದ ಸ್ವರೂಪದ ಬಗೆಗೆ ಹೆಚ್ಚು ಬಹುಮುಖಿಯಾದ ಕ್ರಮಗಳನ್ನು ಸೃಷ್ಟಿಸಲು ಸಾಧ್ಯ. ಭಾರತೀಯ

ಕಾವ್ಯಮೀಮಾಂಸೆಗೆ ಹೆಚ್ಚು ಆಳವಾಗಿ ಹತ್ತಿಕೊಂಡಿರುವ ತಾತ್ವಿಕ ಉಪಾಧಿಗಳಿಂದ ಬಿಡುಗಡೆ ಮಾಡಲಾದರೂ ಮಾಧ್ಯಮಿಕ ಪ್ರಾಸಂಗಿಕ ದೃಷ್ಟಿಕೋನ ಅನಿವಾರ್ಯ"[21] ಎನ್ನುವ ಡಿ.ಆರ್.ನಾಗರಾಜ್‌ರವರ ಅಭಿಪ್ರಾಯದಲ್ಲಿ, ಇದುವರೆಗೆ ಭಾರತೀಯ ಕಾವ್ಯಮೀಮಾಂಸೆಯನ್ನು ಅನ್ವಯಿಸುವ ಕ್ರಮಗಳಿಗಿಂತ ಭಿನ್ನವಾದ ಸಾಹಿತ್ಯ ಕೃತಿಗಳ ಕಾರಣವಷ್ಟೆ ಅಲ್ಲದೆ, ಭಾರತೀಯ ಕಾವ್ಯಮೀಮಾಂಸೆಯ ಸಂದರ್ಭದಲ್ಲೆ ವ್ಯಕ್ತವಾಗಿರುವ ಅವೈದಿಕ ಕಾವ್ಯಮೀಮಾಂಸೆಯ ಪರಿಭಾಷೆಗಳನ್ನು ಮುನ್ನೆಲೆಗೆ ತರುವ ಪ್ರಯತ್ನವನ್ನು ಕಾಣಬಹುದು.

ಕೆ.ಕೃಷ್ಣಮೂರ್ತಿಯವರು ಹಾಗೂ ಭಾರತೀಯ ಕಾವ್ಯಮೀಮಾಂಸಕರ ಗ್ರಹಿಕೆಗಳ ಮೂಲಕ ಈ ವಿಷಯವನ್ನು ಮತ್ತಷ್ಟು ಸ್ಪಷ್ಟಪಡಿಸುವ ಡಿ.ಆರ್.ನಾಗರಾಜ್‌ರವರು, "ಜಾತಿ, ವರ್ಣ, ವಿದ್ರೋಹ, ಅನುಭಾವ, ಸಂಸ್ಕೃತಿಯೊಂದರ ಆಂತರಿಕ ವೈಷಮ್ಯ ಇವ್ಯಾವವೂ ಅವರ ಸಂವೇದನೆಯನ್ನು ಕಾಡಲಿಲ್ಲ. ಆದರೆ, ಇವೆಲ್ಲ ಇಂದು ನಮಗೆ ಅತಿಮುಖ್ಯ ವಸ್ತುಗಳು"[22] ಎನ್ನುತ್ತಾರೆ. ಏಕೆಂದರೆ, ಭಾರತೀಯ ಸಂದರ್ಭದಲ್ಲಿ ಜಾತಿ, ವರ್ಣಗಳು ಅಡೆತಡೆಗಳಾಗಿ, ನಿಯಂತ್ರಕಗಳಾಗಿ, ಬೌದ್ಧಿಕ ಒಡೆತನವನ್ನು ಸಾಧಿಸುವ ಕ್ರಮಗಳಿಂದಾಗಿ ತೊಡಕನ್ನುಂಟು ಮಾಡುತ್ತಿದ್ದ ಕಾರಣದಿಂದಾಗಿ 'ಅನ್ಯ'ರಿಗೆ ಅಲ್ಲಿ ಪ್ರವೇಶವಿರಲಿಲ್ಲ.

ಸಂಸ್ಕೃತ ಕೇಂದ್ರಿತ ಚಿಂತನೆಯ ಬಗ್ಗೆ ಡಿ.ಆರ್.ನಾಗರಾಜ್‌ರವರ ಅಭಿಪ್ರಾಯ ಹೀಗಿದೆ: "ಕೃಷ್ಣಮೂರ್ತಿಯವರ ಸಾಹಿತ್ಯ ಸಂವೇದನೆಯನ್ನು ರೂಪಿಸಿದ್ದ ಇನ್ನೊಂದು ಧಾರೆ ಎಂದರೆ ಸಂಸ್ಕೃತ ಸಾಹಿತ್ಯದ 'ಸೆಕ್ಯುಲರ್' ಸೌಂದರ್ಯ ಮೀಮಾಂಸೆ. ರಸ ಸಿದ್ಧಾಂತದ ಸರಳ ರೂಪಗಳು ಕೃಷ್ಣಮೂರ್ತಿ ತಲೆಮಾರಿನ ವಿದ್ವಾಂಸರನ್ನು ಪೂರ್ಣವಾಗಿ ರೂಪಿಸಿದ್ದವು. ಇದರಿಂದ ಉಂಟಾದ ವೈಚಾರಿಕ ಅನಾಹುತ ಎಂದರೆ, ಸಂಸ್ಕೃತ ಮತ್ತು ಭಾರತೀಯ ತಾತ್ವಿಕ ಜಗತ್ತುಗಳಲ್ಲಿ ನಡೆದಿರುವ ಆದಿಮ ಸಂಘರ್ಷಗಳ ಮಹತ್ವದ ನಿರಾಕರಣೆ. ಸಾಹಿತ್ಯ ಮೀಮಾಂಸೆಯ ಪರಿಕಲ್ಪನೆಗಳು ಶುದ್ಧ ಸಾಹಿತ್ಯಕ ದ್ರವ್ಯದಿಂದಲೇ ರೂಪುಗೊಂಡಿವೆ ಎಂಬ ನಂಬಿಕೆ ಕೃಷ್ಣಮೂರ್ತಿಯವರದು. ಈ ಬಗೆಯ ನಿಲುವು ಪ್ರಾಚೀನ ಭಾರತೀಯ ವೈಚಾರಿಕ ಚರಿತ್ರೆಯಲ್ಲಿನ ಮಹತ್ವದ ಸಂಘರ್ಷಗಳನ್ನು ಕಡೆಗಣಿಸಿ ನೋಡುತ್ತದೆ. ಈ ನಿಲುವಿನ ಪರಿಣಾಮ ಎಂದರೆ ಕಾವ್ಯಮೀಮಾಂಸೆಯ ಚರಿತ್ರೆಯಲ್ಲಿನ ವೈದಿಕ – ಶ್ರಮಣ, ಪ್ರತಿಷ್ಠಿತ – ಭಿನ್ನಮತೀಯ ಸಂಘರ್ಷಗಳನ್ನು ಕೃಷ್ಣಮೂರ್ತಿ ಮುಖ್ಯ ಎಂದು ಭಾವಿಸುವುದಿಲ್ಲ"[23]

ಈ ಬಗೆಯಲ್ಲಿ ಸಂಸ್ಕೃತ ಕೇಂದ್ರದಿಂದ ಚಿಂತಿಸಿದಾಗ ಸಂಸ್ಕೃತಿಯಲ್ಲೆ ಅಂತರ್ಗತವಾಗಿರುವ ಅನ್ಯಧಾರೆಗಳು ಕೆಲವೊಮ್ಮೆ ಉದ್ದೇಶಪೂರ್ವಕವಾಗಿ, ಮತ್ತೆ ಕೆಲವೊಮ್ಮೆ ಆಕಸ್ಮಿಕವಾಗಿ ಅಮುಖ್ಯವಾಗತೊಡಗುತ್ತವೆ. ಹಾಗೂ ವೈದಿಕ ದರ್ಶನವೇ ಆತ್ಯಂತಿಕ ಎಂಬ ಗ್ರಹಿಕೆಯೂ ಮುನ್ನೆಲೆಗೆ ಬರತೊಡಗುತ್ತದೆ.

ಈ ಬಗೆಯ ಏಕರೂಪೀಕರಣವನ್ನು ಡಿ.ಆರ್.ನಾಗರಾಜ್ ವಿಮರ್ಶಾತ್ಮಕವಾಗಿ ಪರಿಶೀಲಿಸುವ ಉದ್ದೇಶವೆಂದರೆ, ಆ ಸಂಸ್ಕೃತಿಯಲ್ಲೆ ರೂಪುಗೊಂಡು, ವಿಶಿಷ್ಟವಾಗಿದ್ದೂ ಪರಿಶಿಷ್ಟವಾಗಿಯೆ ಉಳಿದು, ಅಂಚಿಗೆ ತಳ್ಳಲ್ಪಟ್ಟಿರುವ ದೇಶೀಯ ಚಿಂತನ ಧಾರೆಗಳ ಪ್ರಾಮುಖ್ಯತೆಯನ್ನು ಕಂಡುಕೊಳ್ಳುವುದೇ ಆಗಿದೆ. ಅವರ ಮಾತಿನಲ್ಲೇ ಹೇಳುವುದಾದರೆ, "ಕನ್ನಡ ವೈಯಾಕರಣರು ಮತ್ತು ಕಾವ್ಯ ಮೀಮಾಂಸಕರು ಯಾವುದನ್ನು ದೇಶಿ ಎಂದು ಕರೆದರೂ ಅದು ಮಾರ್ಗಕ್ಕೆ ಒಪ್ಪಿತವಾಗುವ ಹಾಗೂ ಮಾರ್ಗದ ಜೊತೆಗೆ ಹೊಂದಾಣಿಕೆ ಸಾಧಿಸುವ ದೇಶಿಯೆ ಹೊರತು; ಅದರಿಂದ ಹೊರಗಿರುವ ದೇಶಿಯಲ್ಲ. ಸಾಹಿತ್ಯ ಸಂಸ್ಕೃತಿಯೊಂದು ರೂಪುಗೊಳ್ಳುವ ಬಗೆಯೆ ಹೀಗೇ. ಒಂದು ರೀತಿಯ ಶುದ್ಧೀಕರಣದ ನೆಪದ ಒಳಗಡೆಗೆ, ಇಂಥ ಶುದ್ಧೀಕರಣದ ಹಾಗೂ ವಿಸ್ತರೀಕರಣದ ಪ್ರಕ್ರಿಯೆ ಇನ್ನೊಂದು ರೀತಿಯಲ್ಲಿ ದಮನೀಕರಣದ ಪ್ರಕ್ರಿಯೆಯೂ ಹೌದು"[24]

ಆದುದರಿಂದ, ಡಿ.ಆರ್.ನಾಗರಾಜ್ ರವರ ಚಿಂತನೆಗಳ ಕೇಂದ್ರವಿರುವುದು, ಈ ಬಗೆಯ ದಮನ, ನಿಯಂತ್ರಣದ ಮಾದರಿಗಳನ್ನು ಮೀರಿ, ಪರಿಶಿಷ್ಟವಾಗಿರುವ ಮಾದರಿಗಳ ಪ್ರಸ್ತುತತೆಯನ್ನು ಕಂಡುಕೊಳ್ಳುವ ಮೂಲಕ ಸಂಸ್ಕೃತಿಯ ಬಹುಮುಖತೆಯಲ್ಲಿರುವ ಜ್ಞಾನಶಾಖೆ, ಪರಿಕರ, ಪರಿಭಾಷೆ, ನೋಟಕ್ರಮಗಳನ್ನು ಅನ್ವಯಿಸುವ ಹೊಸ ದೃಷ್ಟಿಕೋನವೊಂದು ಈ ಪ್ರಯತ್ನವೆನ್ನಬಹುದು.

ಸಂಸ್ಕೃತಿ ಹಾಗೂ ಧರ್ಮಗಳ ಬಹುಮುಖಿ ಸ್ವರೂಪದ ಮೂಲಕ ನಿರ್ವಸಾಹತೀಕರಣ

ಸಂಸ್ಕೃತಿಗಳು ಏಕಾಕಾರಿ ರಚನೆಗಳಲ್ಲ. ಅವು ಪರಸ್ಪರ ಕೊಡು ಕೊಳುವಿಕೆಗಳಿಂದ ನಿರಂತರವಾಗಿ ಬೆಳೆಯುತ್ತಿರುವಂತವು. ಆದುದರಿಂದ ಸಂಸ್ಕೃತಿಗಳಲ್ಲಿ ಬಹುಮುಖತೆ ಸಾಮಾನ್ಯವಾಗಿರುತ್ತದೆ. ಕಲೆ, ಧರ್ಮ, ಲೋಕಗ್ರಹಿಕೆ, ನೋಟಕ್ರಮ, ಭಾಷೆ, ಭಿನ್ನ ಅನುಸಂಧಾನ, ಇವೆ ಮೊದಲಾದವುಗಳ ಸಂಗಮವೇ ಸಂಸ್ಕೃತಿ. ಈ ದಿಸೆಯಲ್ಲಿ ಸಂಸ್ಕೃತಿಗಳು ಸಂಕರಗೊಳ್ಳುವುದು, ಭಿನ್ನ ಅವಸ್ಥೆಗಳಿಗೆ ಒಳಪಡುವುದು ಕಾಲಾನುಕ್ರಮದಲ್ಲಿ ನಡೆಯುವುದು ಅನಿವಾರ್ಯವಾಗಿರುತ್ತದೆ. ಮೇಲಿನ ಅಂಶಗಳ ಏಕೀಕೃತ ರೂಪವನ್ನು ಸಂಸ್ಕೃತಿಗಳೆನ್ನಬಹುದು. ಸಂಸ್ಕೃತಿ, ಸಂಸ್ಕೃತಿಗಳು, ಪ್ರತಿಸಂಸ್ಕೃತಿ, ಉಪಸಂಸ್ಕೃತಿಗಳ ಭಿನ್ನ

ಮಾದರಿಗಳ ಬಗೆಗೆ ಕನ್ನಡದಲ್ಲಿ ಡಿ.ವಿ.ಜಿ, ಮಾಸ್ತಿ, ಶಂಬಾ ಜೋಷಿ, ಕುವೆಂಪು, ದೇವುಡು, ಶ್ರೀರಂಗ, ಶಿವರಾಮಕಾರಂತ, ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗ, ಪೂರ್ಣಚಂದ್ರ ತೇಜಸ್ವಿ, ಲಂಕೇಶ್, ಡಿ.ಆರ್.ನಾಗರಾಜ್, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಮೊಗಳ್ಳಿ ಗಣೇಶ್, ಬರಗೂರು ರಾಮಚಂದ್ರಪ್ಪ ಮೊದಲಾದವರು ನಡೆಸಿರುವ ಚಿಂತನೆಗಳನ್ನು ರಹಮತ್ ತರೀಕೆರೆಯವರು 'ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಚರ್ಚಿಸಿದ್ದಾರೆ.

ಸಂಸ್ಕೃತಿ ಶಬ್ದಕ್ಕೆ ನಿರ್ದಿಷ್ಟ ಅರ್ಥವನ್ನು ಹೇಳುವುದು, ವ್ಯಾಖ್ಯಾನ ಮಾಡುವುದು ಅದರ ಸಂಕೀರ್ಣ ಆಯಾಮಗಳ ಕಾರಣದಿಂದ ಸಾಧ್ಯವಾಗುವುದಿಲ್ಲ. ರಹಮತ್ ತರೀಕೆರೆಯವರ ಪ್ರಕಾರ:"'ಸಂಸ್ಕೃತಿ' ಶಬ್ದವು ತನ್ನ ಚರಿತ್ರೆಯುದ್ದಕ್ಕೂ ಪಡೆದುಕೊಂಡು ಬಂದ ಅರ್ಥಗಳನ್ನು ಹಾಗೂ ಅದು ಬಳಕೆಯಾದ ರೀತಿಯನ್ನು ಕಾಣುವಾಗ, ಅದೊಂದು ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಹೇಳಲು ಸಜ್ಜುಗೊಂಡ ಪರಿಭಾಷೆ ಎಂದು ಗೊತ್ತಾಗುತ್ತದೆ ಎಂತಲೆ ಈ ಶಬ್ದವು ಆಧುನಿಕ ಕಾಲದ ಒಂದು ಪರಿಕಲ್ಪನೆ ಮತ್ತು ರಚನೆಯಾಗಿರುವುದು"[25]

ಆದ್ದರಿಂದ ಈ ಎಲ್ಲ ಆಯಾಮಗಳನ್ನು ಒಳಗೊಳ್ಳುವ ವ್ಯಾಪಕತೆ ಸಂಸ್ಕೃತಿಗಳಿಗಿರುತ್ತದೆ. ಈ ಕಾರಣಗಳಿಂದಾಗಿ ಸಂಸ್ಕೃತಿ ಅಧ್ಯಯನಕಾರರು ಅನೇಕ ವಿಷಯಗಳಲ್ಲಿ, ತಾತ್ವಿಕತೆಯಲ್ಲಿ, ಸಿದ್ಧಾಂತಗಳಲ್ಲಿ ಖಚಿತವಾದ ನಿಲುವು, ಧೋರಣೆ, ವ್ಯುತ್ಪತ್ತಿ, ಪ್ರತಿಭೆಗಳನ್ನು ಹೊಂದಿರಬೇಕಾಗಿರುತ್ತದೆ. ಇಲ್ಲವಾದಲ್ಲಿ ಸಂಸ್ಕೃತಿಗಳು ಅಧ್ಯಯನಕಾರನ ದಿಕ್ಕು ತಪ್ಪಿಸುತ್ತವೆ. ಇವುಗಳಿಂದ ಮುಕ್ತವಾಗಿ ಸಂಸ್ಕೃತಿಗಳ ಬಹುಮುಖತೆಯನ್ನು ಕಂಡುಕೊಳ್ಳುವುದು ಸಾಂಸ್ಕೃತಿಕ ಜವಾಬ್ದಾರಿ ಕೂಡ ಆಗಿರುತ್ತದೆ.

ಕನ್ನಡ ಸಂಸ್ಕೃತಿ ಅಧ್ಯಯನಕಾರರಲ್ಲಿ ಮುಖ್ಯರಾದ ಡಿ.ಆರ್.ನಾಗರಾಜ್‌ರವರು ಸಂಸ್ಕೃತಿಗಳ ಈ ಬಹುಮುಖೀ ಸ್ವರೂಪ ಹಾಗೂ ಅವುಗಳ ಸುತ್ತ ನಡೆಯುವ ಸಾಂಸ್ಕೃತಿಕ ರಾಜಕಾರಣಗಳನ್ನು ಸೂಕ್ಷ್ಮ ಒಳನೋಟಗಳಿಂದ ವಿಶ್ಲೇಷಿಸಿದ್ದಾರೆ. ಸಂಸ್ಕೃತಿ ಹಾಗೂ ಪ್ರಭುತ್ವಗಳ ಹೊಂದಾಣಿಕೆ ಹಾಗೂ ಸಂಘರ್ಷಗಳನ್ನು ಅರಿಯುವಲ್ಲಿ ಅವರ ಈ ಅಭಿಪ್ರಾಯಗಳು ಅವಶ್ಯಕ.

ಡಿ.ಆರ್.ನಾಗರಾಜ್‌ರವರು ಹೇಳುವಂತೆ, "ಯಾವುದೇ 'ಸಾಮ್ರಾಜ್ಯ' ಚಕ್ರಾಧಿಪತ್ಯ ಕಟ್ಟಬೇಕಾದರೆ ಏಕರೂಪದ ಧರ್ಮ ಇರಬೇಕು. ಏಕರೂಪದ ಆಚರಣಾ ವ್ಯವಸ್ಥೆ ಇರಬೇಕು. ಈ ಕಾರಣದಿಂದಲೇ ಎಲ್ಲ ಸಾಮ್ರಾಜ್ಯಗಳೂ, ಅವು ಯಾವುದೇ ಸಿದ್ಧಾಂತಕ್ಕೆ

ಸೇರಿದವುಗಳಾಗಿರಲಿ, ಬಲಾತ್ಕಾರವಾಗಿಯಾದರೂ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಏಕರೂಪ ತರಲು ಹವಣಿಸುತ್ತವೆ. ಭಿನ್ನರೂಪಗಳ ನಿರಾಕರಣೆ ಸಾಮಾಜಿಕ ಸ್ಥಿರತೆಯ ರೂಪ ತಾಳುತ್ತದೆ. ಬ್ರಿಟಿಷರ ಧಾರ್ಮಿಕ ಮತ್ತು ಸಾಂಸ್ಕೃತಿಕ ನೀತಿಯ ಗುರಿ ಇದ್ದದ್ದೇ ಈ ರೀತಿಯ ಏಕರೂಪತೆ ನಿರ್ಮಿಸುವ ಕಡೆಗೆ. ಬಹುರೂಪತೆಯನ್ನು ನಿರಾಕರಿಸುವ ಈಗಿನ ರಾಜಕೀಯ ಹಠದ ಉಗಮ ಬಹುಶಃ ಅಲ್ಲೇ"[26]

ಈ ಬಗೆಯಲ್ಲಿ ಏಕರೂಪೀಕರಣವನ್ನು ಬಯಸುವ ಪ್ರಭುತ್ವದ ಸ್ವ-ಉದ್ದೇಶಗಳ ಕಾರಣದಿಂದಾಗಿ ಬಹುತ್ವವುಳ್ಳ ಸಂಸ್ಕೃತಿಗಳನ್ನು ಕೂಡ ಹೀಗೆ ಏಕಾಕಾರಿಯಾಗಿ ರೂಪಿಸುವ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಿರುತ್ತವೆ.

ಆಳುವ ವರ್ಗವೊಂದಕ್ಕೆ ಈ ಬಗೆಯ ಬಹುತ್ವವು ತನ್ನ ಆಡಳಿತವನ್ನು ಸುಗಮವಾಗಿ ನಡೆಸುವುದಕ್ಕೆ ಅನೇಕ ಸವಾಲುಗಳನ್ನು ಒಡ್ಡುತ್ತದೆ. ನ್ಯಾಯ, ನೀತಿ, ಶಾಸನಗಳನ್ನು ಸಾರ್ವತ್ರಿಕವಾಗಿ ತಿಳಿಸಲು, ತನ್ನ ಆಡಳಿತವನ್ನು ನಿರಾತಂಕವಾಗಿ ನಡೆಸಲು ಅನುವಾಗುವಂತೆ ಧರ್ಮ, ಭಾಷೆ, ಸಂಸ್ಕೃತಿ, ಜೀವನಕ್ರಮಗಳನ್ನು ಏಕರೂಪಗೊಳಿಸಲು ಹವಣಿಸುತ್ತಿರುತ್ತದೆ. ಪ್ರಭುತ್ವಕ್ಕೆ ಅವಶ್ಯಕವಾದ ಈ ಏಕರೂಪತೆಯನ್ನು ಪ್ರಜೆಗಳು ಎಂದಿಗೂ ಒಪ್ಪಿದ ಉದಾಹರಣೆಗಳಿಲ್ಲ. ಅವು ತಮ್ಮ ಅನೇಕ ಒಳಧಾರೆಗಳನ್ನು ನಿರಂತರವಾಗಿ ಮುಂದುವರೆಸಿಕೊಂಡೆ ಬರುತ್ತವೆ. ಆದರೆ ಪ್ರಭುತ್ವದ ದಮನ ಮಾದರಿಗಳು–ಈ ಬಗೆಯ ಬಹುತ್ವವನ್ನು ನಿರಾಕರಿಸುವ ಪ್ರಯತ್ನಗಳನ್ನು ಮುಂದುವರಿಸುತ್ತಿರುತ್ತವೆ. ಈ ಬಗೆಯ ವೈರುಧ್ಯಗಳು ಸಂಸ್ಕೃತಿಗಳಲ್ಲಿ ಸಾಮಾನ್ಯವೇನೋ?

ಪ್ರಭುತ್ವಗಳೇ ಧರ್ಮ ಪೋಷಣೆ ಹಾಗೂ ಸಂಸ್ಕೃತಿ ವಕ್ತಾರಿಕೆಯ ಕೆಲಸವನ್ನು ಕೂಡ ನಿರ್ವಹಿಸುವ ಧೋರಣೆಗಳು ಇವೆ. ಇಂತಹ ಸಂದರ್ಭದಲ್ಲಿ ನಿರ್ದಿಷ್ಟ ಧರ್ಮ, ಭಾಷೆ, ಸಂಸ್ಕೃತಿಗಳನ್ನು ಬೆಂಬಲಿಸುವ ಪ್ರಭುತ್ವವು, ಇನ್ನುಳಿದವುಗಳನ್ನು ಅಂಚಿಗೆ ತಳ್ಳುತ್ತಿರುತ್ತದೆ. ಇದು ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗಿದ್ದರೆ, ಮತ್ತೆ ಕೆಲವು ಸಾರಿ ಅಪ್ರಜ್ಞಾಪೂರ್ವಕವಾಗಿ ನಡೆಯುತ್ತಿರುತ್ತದೆ. ಭಾರತದಂತಹ ಬಹು ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ವಾತಾವರಣದಲ್ಲಿ ಪ್ರಭುತ್ವಗಳು ತೆಗೆದುಕೊಳ್ಳುವ ಈ ಬಗೆಯ ನಿರ್ಣಯಗಳು ಕೆಲವು ಸಂದರ್ಭದಲ್ಲಿ ಅನ್ಯ ಧರ್ಮ, ಭಾಷೆ, ಸಂಸ್ಕೃತಿಗಳಿಗೆ ಮಾರಕವಾಗುತ್ತಿರುತ್ತವೆ. ಭಾರತದ ದೇಶೀ ರಾಜರುಗಳು, ಮೊಗಲರು, ಬ್ರಿಟಿಷ್ ಹಾಗೂ ಆಧುನಿಕ ಪ್ರಜಾಪ್ರಭುತ್ವದ ಸಂದರ್ಭಗಳಲ್ಲೂ ಕೂಡ ಈ ಬಗೆಯ ಅನೇಕ ತಾರತಮ್ಯಗಳು ಜಾರಿಯಲ್ಲಿದ್ದವು, ಜಾರಿಯಲ್ಲಿವೆ ಹಾಗೂ ಭವಿಷ್ಯದಲ್ಲಿ ಕೂಡ ಜಾರಿಗೆ ಬರುತ್ತವೆ.

ಈ ಬಗೆಯ ಏಕರೂಪೀಕರಣವು ಆತ್ಯಂತಿಕ ಮಟ್ಟದಲ್ಲಿ ಪ್ರತಿಪಾದಿಸಲ್ಪಟ್ಟದ್ದು ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ. ಇಲ್ಲಿನ ಅಗಾಧವಾದ ವೈವಿಧ್ಯತೆ ವಸಾಹತುಶಾಹಿಗಳಿಗೆ ಆರಂಭದಲ್ಲಿ ಕುತೂಹಲಕಾರಿಯೆನಿಸಿದರೂ, ಅಧಿಕಾರ ಗ್ರಹಣಾನಂತರದಲ್ಲಿ ಬ್ರಿಟಿಷರನ್ನು ಅಧೀರರನ್ನಾಗಿಸಿದ್ದು ಈ ದೇಶೀ ಸಮುದಾಯಗಳ ಬಹುತ್ವ ದೇಶದಾದ್ಯಂತ ಹಂತಹಂತವಾಗಿ ಅಧಿಕಾರವನ್ನು ವಿಸ್ತರಿಸಿದ ಬ್ರಿಟಿಷರು, ಪ್ರತಿಯೊಂದು ಪ್ರಾಂತ್ಯಕ್ಕೂ ಪ್ರತ್ಯೇಕ ಪರಿಸರ, ಭಾಷೆ, ಆಚರಣೆ, ಸಂಪ್ರದಾಯ, ವೃತ್ತಿ, ಸಂಸ್ಕೃತಿಗಳಿರುವುದು ತನ್ನ ಆಡಳಿತದ ಅವಧಿಯಲ್ಲಿ ನೀತಿ, ನ್ಯಾಯ, ಶಾಸನ ರೂಪಣೆ ಹಾಗೂ ಅವುಗಳನ್ನು ಪ್ರತಿಯೊಂದು ಪ್ರಾಂತ್ಯದ ಭಾಷೆಗಳಲ್ಲಿ ಹೊರಡಿಸಬೇಕಾದ ಅನಿವಾರ್ಯತೆಯನ್ನು ಎದುರಿಸಿದರು. ಇದನ್ನು ಆರಂಭದಲ್ಲೆ ಮನಗಂಡ ವಸಾಹತುಶಾಹಿಗಳು, ಈ ಬಗೆಯ ಬಹುತ್ವದ ಸಮುದಾಯಗಳನ್ನು ಆಳುವುದು, ನಿಯಂತ್ರಿಸುವುದು ಸಾಧ್ಯವಾಗದೆಂಬ ಕಾರಣಕ್ಕೆ ಏಕರೂಪೀಕರಣವನ್ನು ಮಂಡಿಸತೊಡಗಿದರು.

ಇದನ್ನೆ ಆಧುನಿಕ ಸಂದರ್ಭದಲ್ಲಿ ಕೂಡ ಪ್ರಭುತ್ವಗಳು ಒಂದಿಲ್ಲೊಂದು ಬಗೆಯಲ್ಲಿ ಮುಂದುವರೆಸಿಕೊಂಡು ಬರುತ್ತಿರುವುದರ ಕಾರಣಕ್ಕೆ ಅನೇಕ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳುಂಟಾಗುತ್ತಿವೆ.

ಬೌದ್ಧ, ಜೈನ, ವೈಷ್ಣವ, ವೀರಶೈವ, ಮುಸ್ಲಿಂ, ಕ್ರಿಶ್ಚಿಯನ್ ಮುಂತಾದ ಧರ್ಮವನ್ನಾಶ್ರಯಿಸಿದ, ಪೋಷಿಸಿದ ಪ್ರಭುತ್ವಗಳು ಆಯಾ ಸಂದರ್ಭದಲ್ಲಿ ತಾನು ನಂಬಿದ ಧರ್ಮಗಳಿಗೆ ಉದಾರವಾಗಿ ದಾನ, ದತ್ತಿ, ಮತಾಂತರಗಳಿಗೆ ಪ್ರೋತ್ಸಾಹಗಳನ್ನು ನೀಡುತ್ತಿರುವುದು ಚರಿತ್ರೆಯಲ್ಲಿ ದಾಖಲಾಗಿದೆ. ಅಂತೆಯೇ ಉದಾರ ಮನೋಧರ್ಮದ ರಾಜರುಗಳು ಕೂಡ ಆಳ್ವಿಕೆ ನಡೆಸಿದ ಉದಾಹರಣೆಗಳಿವೆ.

ಆದರೆ ಆಧುನಿಕ ಸಂದರ್ಭದಿಂದೀಚೆಗೆ ಧಾರ್ಮಿಕ ಸಹಿಷ್ಣುತೆಯು ದಿನದಿಂದ ದಿನಕ್ಕೆ ಪ್ರಭುತ್ವಗಳಲ್ಲಿ ಕಣ್ಮರೆಯಾಗುತ್ತಿದೆಯೇನೋ ಎಂಬ ಅನುಮಾನ ಮೂಡುವಂತೆ ಧಾರ್ಮಿಕ ಮೂಲಭೂತವಾದವು ವಿಶ್ವವ್ಯಾಪಿಯಾಗುತ್ತಿದೆ. ಕ್ರಿಶ್ಚಿಯನ್, ಮುಸ್ಲಿಂ, ಹಿಂದೂ ಧರ್ಮಗಳು ಅನೇಕ ಹಂತಗಳಲ್ಲಿ ಈ ಬಗೆಯಲ್ಲಿ ಬಳಕೆಯಾಗುತ್ತಿವೆ. ಪ್ರಭುತ್ವ ನಿರ್ದೇಶಿತ ಧರ್ಮಗಳು, ಧರ್ಮ ನಿರ್ದೇಶಿತ ಪ್ರಭುತ್ವಗಳೆರಡೂ ಈ ಬಗೆಯ ಧಾರ್ಮಿಕ ಮೂಲಭೂತವಾದಕ್ಕೆ ಎಡೆ ಮಾಡಿಕೊಡುತ್ತಿವೆ.

ವಸಾಹತುಶಾಹಿಯ ಸಂಪರ್ಕದ ಕಾರಣಗಳಿಂದ, ದೇಶೀ ಸಮುದಾಯಗಳಲ್ಲಿದ್ದ ಸಾಮರಸ್ಯ, ಹೊಂದಾಣಿಕೆ, ಪರಸ್ಪರರ ಮೇಲಿನ ನಂಬಿಕೆ ಮುಂತಾದವುಗಳು ಇಲ್ಲವಾಗ ತೊಡಗಿದವು. ಏಕರೂಪೀಕರಣದ ದಾರಿಯಲ್ಲಿ ವಸಾಹತುಶಾಹಿಗಳು ಒಡೆದು ಆಳುವ ನೀತಿಯನ್ನು ರೂಪಿಸಿಕೊಂಡು, ದೇಶೀ ಜೀವನಕ್ರಮಗಳಲ್ಲಿ ಈ ಬಗೆಯ ನಿರ್ಣಾಯಕ ಬಿರುಕನ್ನುಂಟು ಮಾಡಿದವು.

ಡಿ.ಆರ್.ನಾಗರಾಜ್ ಅವರು ದೇಶೀ ಬಹುಮುಖಿ ಆಯಾಮ ಹಾಗೂ ಹೊಂದಾಣಿಕೆಗಳನ್ನು ಕುರಿತು ಹೀಗೆ ಹೇಳುತ್ತಾರೆ : "ಈ ವಸಾಹತುಶಾಹಿ ಪಲ್ಲಟದ ಒಂದು ಅತ್ಯಂತ ಮುಖ್ಯ ಬೆಳವಣಿಗೆ ಎಂದರೆ ನಮ್ಮ ಧಾರ್ಮಿಕ ಸಂಸ್ಕೃತಿಯ ಬಹುಮುಖೀ ಪರಂಪರೆ ಮರೆತು ಹೋದದ್ದು. ನಮ್ಮಲ್ಲಿ ಈಗ ಎಂತಹ ಪರಿಸ್ಥಿತಿ ಬಂದಿದೆ ಎಂದರೆ ಭಾರತೀಯ ಸಂಸ್ಕೃತಿ, ಭಾರತೀಯ ತತ್ವಜ್ಞಾನ ಎಂದರೆ ವೇದಾಂತ ಮಾತ್ರ ಎಂಬುದಾಗಿದೆ. ಈ ಪ್ರಾಧಾನ್ಯ ನಿಸ್ಸಂದೇಹವಾಗಿ ಬ್ರಿಟಿಷರ ಸಾಂಸ್ಕೃತಿಕ ನೀತಿಯ ಫಲ. ಬ್ರಿಟಿಷರು ಈ ದೇಶಕ್ಕೆ ಬಂದಾಗ ಅವರನ್ನು ಕಂಗೆಡಿಸಿದ್ದು ಇಲ್ಲಿನ ಧಾರ್ಮಿಕ ಬದುಕಿನ ಅಪಾರ ವೈವಿಧ್ಯತೆ ಮತ್ತು ಭಿನ್ನರೂಪಗಳು. ಒಬ್ಬ ಬ್ರಾಹ್ಮಣ ವೇದಾಂತಿಗೆಷ್ಟು ಬೆಲೆಯೊ ಅಷ್ಟೇ ಮಹತ್ವ ಒಬ್ಬ ಶೂದ್ರ ಯೋಗಿಗೂ ಇದ್ದ ಸ್ಥಿತಿ ಅದು. ಶೃಂಗೇರಿ ಶಂಕರಾಚಾರ್ಯ ಎಷ್ಟು ದೊಡ್ಡವನೊ ಅಷ್ಟೇ ದೊಡ್ಡವನು ಬಳೆಗಾರ ಕುಲದ ಕೈವಾರ ನಾರಣಪ್ಪ. ಗುರುಗೋವಿಂದನ ಸಮನಾಗಿ ನಿಲ್ಲಬಲ್ಲವನು ಷರೀಫ"[27]

ಆದರೆ, ವಸಾಹತುಶಾಹಿ ಆಳ್ವಿಕೆಯ ತರುವಾಯ ಈ ಬಗೆಯ ಸಾಮರಸ್ಯವೆ ಇಲ್ಲವಾಗಿ, ವೈದಿಕ ರಚನೆಗಳಿಗೆ ಆತ್ಯಂತಿಕ ಪ್ರಮಾಣ ನೀಡುವ ರಚನೆಗಳು ಕಟ್ಟಲ್ಪಟ್ಟವು. ಇವುಗಳನ್ನು ಸ್ವತಃ ಬ್ರಿಟಿಷ್ ಅಧಿಕಾರಿ, ವಿದ್ವತ್ ವರ್ಗವು ರೂಪಿಸಿ, ಅವುಗಳನ್ನು ದೇಶೀ ಮಾದರಿಗಳ ಮೇಲೆ ಆರೋಪಿಸಿದ ಕಾರಣಕ್ಕಾಗಿ, ಮೇಲು-ಕೀಳು ಎಂಬ ವೈರುಧ್ಯಗಳು ಈ ಸಮುದಾಯಗಳಲ್ಲುಂಟಾಗಿ, ತಮ್ಮ ತಮ್ಮ ಸ್ವಗಳ ಹುಡುಕಾಟ, ಅಸ್ಮಿತೆಯ ಪ್ರತಿಪಾದನೆಯತ್ತ ಚಲಿಸುವ ಪ್ರಯತ್ನ ಆರಂಭವಾಗಿ ಅನೇಕ 'ಅನ್ಯ'ಗಳ ಸೃಷ್ಟಿಯಾಯಿತು.

ಈಚಿನ ದಿನಗಳಲ್ಲಿ, ಈ ಹಿಂದೆ ಇದ್ದ ಪರಸ್ಪರರ ಮೇಲಿನ ನಂಬಿಕೆ, ಗೌರವ, ಆತ್ಮಾಭಿಮಾನ ಮುಂತಾದವುಗಳು- ವೈವಿಧ್ಯತೆಯ ನಾಶಪಡಿಸುವ ಉದ್ದೇಶದಿಂದ ರೂಪಿಸಲ್ಪಟ್ಟ – ವೈದಿಕ, ವೇದಾಂತ ಪ್ರಾಮಾಣ್ಯದ ಕಾರಣದಿಂದಾಗಿ, ಅದುವರೆಗೆ ಇದ್ದ ಸಮಾನ ಗೌರವಗಳು ನಿಧಾನವಾಗಿ ಕಣ್ಮರೆಯಾಗುತ್ತ, ವೈದಿಕ ರಚನೆಗಳಿಗೆ ಪ್ರಾಮುಖ್ಯತೆ

ಬರತೊಡಗಿತು. ಈ ದಿಸೆಯಲ್ಲಿ ಈ ಕಾಲವನ್ನು 'ಮಹಾನ್ ನಿರ್ಮಾಣ ಮತ್ತು ವಿನಾಶಗಳ ಯುಗ' ವೆಂದು ಡಿ.ಆರ್.ನಾಗರಾಜ್‌ರವರು ಕರೆಯುತ್ತಾರೆ.

ವಸಾಹತುಶಾಹಿಯ ಈ ಧೋರಣೆಯಿಂದ ಸ್ವಾತಂತ್ರ್ಯಾನಂತರವೂ ಬಿಡುಗಡೆ ಹೊಂದದೆ, ಮತ್ತೆ ಅದು ನೇಯ್ದ ಬಲೆಯೊಳಗೆ ಬಿದ್ದು ಕಾಲು ಬಡಿಯುತ್ತಿರುವ ಆಧುನಿಕ ಸರ್ಕಾರಗಳಲ್ಲಿ ಕೂಡ, ಅನೇಕ ಸಂದರ್ಭಗಳಲ್ಲಿ, ಇಂತದೇ ಪ್ರತಿಕ್ರಿಯೆಗಳು ಮುಂದುವರೆಯುತ್ತಿವೆ. ವಸಾಹತುಶಾಹಿಯನ್ನು ವಿರೋಧಿಸಿ, ಗಳಿಸಿದ ಸ್ವಾತಂತ್ರ್ಯದ ನಿಜವಾದ ಸಾಧನೆಯ ಬಗೆಗೆ ಅನೇಕ ಅನುಮಾನಗಳು ಮೂಡುವಂತಹ ಕಲುಷಿತ ವಾತಾವರಣವೊಂದನ್ನು, ಸಮಕಾಲೀನ ರಾಜಕೀಯ ಪಕ್ಷಗಳು ತರುತ್ತಿರುವುದು ತೃತೀಯ ಜಗತ್ತಿನ ಅನೇಕ ಸಮಸ್ಯೆಗಳಲ್ಲಿ ಒಂದು. ಪರಂಪರೆಯಲ್ಲಿನ ಒಳಿತುಗಳನ್ನೆಲ್ಲ ನಿರಾಕರಿಸುವ, ಆ ಮೂಲಕ ತನ್ನನ್ನು ತಾನೇ ಪತನದಂಚಿಗೆ ತಳ್ಳಿಕೊಳ್ಳುವ ಹಂತಕ್ಕೆ ಆಧುನಿಕ ಪ್ರಜಾಪ್ರಭುತ್ವದ ಅನೇಕ ಸರ್ಕಾರಗಳ ತೀರ್ಮಾನಗಳಿರುವುದನ್ನು ನೋಡಬಹುದು. ಸಂವಿಧಾನದ ಮೂಲ ಆಶಯಗಳಾದ ಜಾತ್ಯತೀತತೆ, ಧರ್ಮಾತೀತ ರಾಷ್ಟ್ರ ಎಂಬ ನಿಲುವುಗಳಿಗೆ ವ್ಯತಿರಿಕ್ತವಾಗಿ ಆಧುನಿಕ ಸರ್ಕಾರಗಳು ನಡೆದುಕೊಳ್ಳುತ್ತಿವೆ.

ಧಾರ್ಮಿಕ ಪ್ರಭುತ್ವದ ಕಾರಣಗಳಿಂದ ಉಂಟಾಗುವ ಕೆಲವು ಸಮಸ್ಯೆಗಳನ್ನು ಡಿ.ಆರ್. ನಾಗರಾಜ್‌ರವರು ವಸಾಹತುಶಾಹಿ ಶಿಕ್ಷಣ ಕ್ರಮದ ಸಂದರ್ಭದ ಚರ್ಚೆಯಲ್ಲಿ ಮುಖಾಮುಖಿಯಾಗಿಸುತ್ತಾರೆ. ಈ ಕಾಲಘಟ್ಟದಲ್ಲಿ ಅವೈದಿಕ ದರ್ಶನಗಳನ್ನೆಲ್ಲ ಹಿನ್ನೆಲೆಗೆ ತಳ್ಳಿ, ವೈದಿಕ ಧರ್ಮ, ಸಂಸ್ಕೃತಿಗಳನ್ನು ಬೆಂಬಲಿಸಿದ ಅನೇಕ ಸಾಂಸ್ಥಿಕ ರಚನೆಗಳನ್ನು ನಿರಚಿಸಿ ನೋಡುವ ಪ್ರಯತ್ನ ಇಲ್ಲಿದೆ.

ಡಿ.ಆರ್.ನಾಗರಾಜ್‌ರವರು ಟ್ರೆವಾರ್ ಲಿಂಗ್‌ನ ಮಾತುಗಳನ್ನು ಉದ್ಧರಿಸುತ್ತಾ ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ : "'ಪೋರ್ಟ್ ವಿಲಿಯಂ ಕಾಲೇಜು ಮತ್ತು ಬ್ರಹ್ಮೋ ಸಮಾಜಗಳು ಪುನರುದ್ಧರಿಸಿದ ಈ ವೇದಾಂತ ತತ್ವಜ್ಞಾನಕ್ಕೆ ಶತಮಾನಗಳಿಂದ ಇರದಿದ್ದ ಪ್ರಾಧಾನ್ಯತೆ ಸಿಕ್ಕಿತು'. ಈ ವಿದ್ಯಮಾನ ತುಂಬ ಮುಖ್ಯವಾದದ್ದು ಎಂದು ನನಗನ್ನಿಸಿದೆ. ಭಾರತದಲ್ಲಿದ್ದ ಅನೇಕ ಪ್ರಸ್ಥಾನಗಳಲ್ಲಿ ವೇದಾಂತ ಕೂಡಾ ಒಂದು ಅಷ್ಟೆ. ಚರಿತ್ರೆಯಲ್ಲಿ ಆಗುವುದೇ ಹೀಗೆ. ನಿರ್ದಿಷ್ಟ ಘಟ್ಟದ ಜಾತಿ–ವರ್ಗದ ಒಕ್ಕೂಟಗಳು ತಮಗೆ ಅಗತ್ಯವಾದ ದರ್ಶನಗಳನ್ನು ಆಯ್ದುಕೊಂಡು ಅದರ ಮೂಲಕ ಮುನ್ನಡೆಯುತ್ತವೆ. ಅಧಿಕಾರಕ್ಕೆ, ಯಾಜಮಾನ್ಯಕ್ಕೆ ಹಾತೊರೆಯುತ್ತವೆ. ವಸಾಹತುಶಾಹಿ ಕಾಲಘಟ್ಟದಲ್ಲಿ

ನಡೆದದ್ದು ಹೀಗೆ. ಈ ದರ್ಶನ ಬ್ರಿಟಿಷ್ –ಬನಿಯಾ (ಕ್ಯಾಪಿಟಲಿಸ್ಟ್ ಎಂಬರ್ಥದಲ್ಲಿ)– ಬ್ರಾಹ್ಮಣ ಒಕ್ಕೂಟದ ಸೈದ್ಧಾಂತಿಕ ಸಾಧನವಾಗಿ ಬಿಟ್ಟಿತು"[28]

ವೇದಾಂತ ತತ್ವಜ್ಞಾನದ ಪ್ರಾಬಲ್ಯದ ಕಾರಣಕ್ಕೆ, ಭಾರತದ ದೇಶೀಯವಾದ ಅನೇಕ ಪ್ರಸ್ಥಾನಗಳಲ್ಲಿ ಒಂದಾಗಿದ್ದ ವೇದಾಂತದ ಮುಂದೆ ಉಳಿದ ಪ್ರಸ್ಥಾನಗಳು ಸತ್ವಪೂರ್ಣವಾಗಿದ್ದರೂ ಹಿನ್ನೆಲೆಗೆ ತಳ್ಳಲ್ಪಟ್ಟವು. ಈ ಬಗೆಯ ಸಾಂಸ್ಕೃತಿಕ ರಾಜಕಾರಣಗಳಿಂದ ವಸಾಹತುಶಾಹಿಗಳ ವ್ಯವಸ್ಥಿತ ದಮನದ ಮಾದರಿಗಳು ಅಗೋಚರವಾಗಿಯೇ ಉಳಿದು ಬಿಡುತ್ತವೆ. ಆದರೆ ಇದರಿಂದ ಆಗುವ ನಷ್ಟಗಳೆಂದರೆ, ದೇಶೀ ತತ್ವಜ್ಞಾನಗಳಲ್ಲಿದ್ದ ಚಿಂತನೆಗಳು ಕಾಣೆಯಾಗುವುದು.

ಏಕರೂಪೀಕರಣದಿಂದಲೇ ಹುಟ್ಟುವ ಅನ್ಯತೆಗಳು – ಭಿನ್ನಧಾರೆಗಳನ್ನು, ಅದರ ಸಾಂಸ್ಕೃತಿಕ ಮೌಲ್ಯಗಳನ್ನು ಕಳೆದು ಹಾಕುತ್ತವೆ. ಅದರ ಜೊತೆಗೆ ಆಯಾ ಧಾರೆಗಳನ್ನಾಧರಿಸಿದ ತತ್ವಜ್ಞಾನ, ತಂತ್ರಜ್ಞಾನ, ನೋಟಕ್ರಮ, ಆರ್ಥಿಕತೆ ಮುಂತಾದವುಗಳು ಕೂಡ ಅವುಗಳ ಜೊತೆಯಲ್ಲೆ ಹಿನ್ನೆಲೆಗೆ ಸರಿಯತೊಡಗುತ್ತವೆ. ಈ ಸಂದರ್ಭದಲ್ಲೂ ಕೂಡ ಮೂಲಭೂತವಾದದಂತಹ ಅನಾಹುತಗಳು ಹುಟ್ಟುವ ಸಾಧ್ಯತೆಗಳಿರುತ್ತವೆ. ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಮೂಲಭೂತವಾದಗಳು ಇಂತಹ ಸಂದರ್ಭದ ಕೂಸುಗಳೇ ಆಗಿರುತ್ತವೆಂಬುದನ್ನು ಇದೇ ಸಂದರ್ಭದಲ್ಲಿ ಗಮನಿಸಬಹುದು. ಬಹುಮುಖಿ ಸಾಂಸ್ಕೃತಿಕ, ಧಾರ್ಮಿಕ ಧಾರೆಗಳಲ್ಲಿದ್ದ ಅನ್ಯೋನ್ಯತೆಯನ್ನು ಈ ಬಗೆಯ ತಾರತಮ್ಯಗಳೆ ಇಲ್ಲವಾಗಿಸುತ್ತವೆ.

ಡಿ.ಆರ್.ನಾಗರಾಜ್‌ರವರ ಪ್ರಕಾರ : "ಇಲ್ಲಿ ಧಾರ್ಮಿಕ ಅನುಭವ ಎಂದರೆ ವೇದಾಂತ ನಿರ್ಣಿತ ಅನುಭವ (ಈ ವೇದಾಂತದಲ್ಲಿ ಎಷ್ಟೇ ಒಳಪಂಗಡಗಳಿದ್ದರೂ ಅವಕ್ಕೆ ಕೆಲವು ಸಾಮಾನ್ಯ ಲಕ್ಷಣಗಳಿವೆ ಎಂಬುದಷ್ಟೇ ನಮಗೆ ಇಲ್ಲಿ ಮುಖ್ಯ). ಒಬ್ಬ ಕಾಡುಗೊಲ್ಲನ, ಒಬ್ಬ ಚಂಡಾಲನ, ಒಬ್ಬ ಕುರುಬನ, ಒಬ್ಬ ಕೊರವಂಜಿಯ ಧಾರ್ಮಿಕ ಅನುಭವದ ವಿಶಿಷ್ಟ ರೂಪಗಳು ಕ್ಷುದ್ರವಾಗಿ ಬಿಟ್ಟವು. ಅವೈಚಾರಿಕ ಮೂಢನಂಬಿಕೆಗಳಾಗಿ ಬಿಟ್ಟವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಇದು ಬಹುಸಂಖ್ಯಾತ ಶೂದ್ರರ ಧಾರ್ಮಿಕತೆಯ ನಿರಾಕರಣೆ. ನಮ್ಮ ಸೃಜನಶೀಲ ಪ್ರತಿಭೆಯ ಸಾಧ್ಯತೆಗಳು ತೀರಾ ಕುಗ್ಗಿ ಹೋದವು. ಸೃಜನಶೀಲ ಆಕೃತಿಯಲ್ಲೂ ಮನೋಲಿಥಿಕ್ ಸ್ಥಿತಿ"[29] ಗಳಿಗೆ ಈ ಬಗೆಯ ಒತ್ತಡಗಳು ಬಹುಮುಖಿಧಾರೆಗಳನ್ನು ತಂದು ನಿಲ್ಲಿಸಿಬಿಡುತ್ತವೆ.

ಇದುವರೆಗೆ ಕಾಯ್ದುಕೊಂಡು ಬಂದಿದ್ದ ಸಾಮರಸ್ಯದ ಬದಲು, ಆದಾನ-ಪ್ರದಾನಗಳು ಇಲ್ಲವಾಗಿ, ಪರಸ್ಪರರನ್ನು ಮೂಢನಂಬಿಕೆಯವರೆಂಬ ರಚನೆಗಳು ಕೂಡ ಆರಂಭವಾಗುತ್ತವೆ.

ಇದು ಈ ಹಿಂದೆ ಇದ್ದ ಚಾರ್ವಾಕ-ಆಸ್ತಿಕ ರೂಪಗಳಿಗಿಂತ ವ್ಯಗ್ರರೂಪತಾಳುತ್ತದೆ. ಆಧುನಿಕ ಪೂರ್ವದಿಂದಲೂ ಅಸ್ತಿತ್ವದಲ್ಲಿರುವ ಚಾರ್ವಾಕ ಸಿದ್ಧಾಂತವು ವೈದಿಕ ಧರ್ಮದ ವೇದ ಪ್ರಾಮಾಣ್ಯ, ಕ್ರಿಯಾವಿಧಿಗಳು, ಆಚರಣೆಗಳನ್ನು ಪ್ರಶ್ನಿಸುತ್ತಿತ್ತು. ಆದರೆ ಅದು ಇಂದಿಗೂ ಮೂಲಭೂತವಾದವಾಗಿ ರೂಪಾಂತರ ಹೊಂದಿಲ್ಲ. ಆದರೆ, ವಸಾಹತೋತ್ತರ ಸಂದರ್ಭದಲ್ಲಿ ಧಾರ್ಮಿಕ ಮೂಲಭೂತವಾದವು ರೂಪುಗೊಳ್ಳುತ್ತಿದೆ.

ಡಿ.ಆರ್.ನಾಗರಾಜ್‌ರವರು ಆಧುನಿಕತೆ ಹಾಗೂ ಜ್ಞಾನಾಧಿಕಾರದ ಬಗ್ಗೆ ಹೀಗೆ ಹೇಳುತ್ತಾರೆ : "ಆಧುನಿಕತೆಯಲ್ಲಿ ಜ್ಞಾನವೆಂದರೆ ನಿಯಂತ್ರಣ. ಆಧುನಿಕ ನಾಗರಿಕತೆ ನಿರ್ಮಾಣವಾದದ್ದೆ ದಮನ ಮತ್ತು ನಿರ್ನಾಮಗಳ ಆಧಾರದ ಮೇಲೆ. ತನಗೆ ಅರ್ಥವಾಗದ ಎಲ್ಲ ಜೀವನಕ್ರಮಗಳನ್ನು ನಾಶ ಮಾಡಬೇಕು, ನಿಯಂತ್ರಣ ಮಾಡಬೇಕು, ಇಲ್ಲ ನಿರ್ಲಕ್ಷ್ಯ ಮಾಡಬೇಕು ಎಂಬಲ್ಲಿ ಆಧುನಿಕತೆ ಹುಟ್ಟುವುದು. ಇದು ಎಷ್ಟೆಲ್ಲ ರೀತಿಯಲ್ಲಿ ಅಂದರೆ ಅನ್ಯರ ಜೀವನ ಕ್ರಮಗಳು, ದೇವರುಗಳು, ನಂಬಿಕೆ, ಊಟ, ತಟ್ಟೆ ಬಟ್ಟಲುಗಳನ್ನು - ಇವೆಲ್ಲವನ್ನು ಆಧುನಿಕತೆ ನಿರಾಕರಿಸುತ್ತದೆ"[30]

ಹೀಗೆ ತನ್ನ ಅರಿವಿಗೆ ಬಾರದ್ದನ್ನು, ಹೇರಿಕೆಗಳನ್ನು ಒಪ್ಪದ ದೇಶೀ ಮಾದರಿಗಳನ್ನು ನಿಯಂತ್ರಿಸಲು ಆಧುನಿಕ ಯುಗದಲ್ಲಿ ದಮನ ಮಾದರಿಗಳನ್ನನುಸರಿಸುವುದು ಮುಂದೆ ಅನೇಕ ಬಗೆಯ ಹಿಂಸಾ ಮಾದರಿಗಳ ಸೃಷ್ಟಿಗೆ ಕಾರಣವಾಗುತ್ತದೆ.

ಡಿ.ಆರ್.ನಾಗರಾಜ್‌ರವರ ಪ್ರಕಾರ, ಧಾರ್ಮಿಕ ಕೊಡುಕೊಳುವಿಕೆಗಳು ನಿರಂತರವಾಗಿ ನಡೆದಿವೆ. ಆದರೆ, ಅವುಗಳನ್ನು ಮರೆತಿರುವುದು ಇಂದಿನ ಸಮಸ್ಯೆಗಳಿಗೆ ಮೂಲ ಕಾರಣ. ಅವರೇ ಹೇಳುವಂತೆ : "ಪ್ರತಿಷ್ಠಿತರ ಅಭಿವ್ಯಕ್ತಿಯಾದ ಸಂಸ್ಕೃತ ಕೇಂದ್ರಿತ ವೈದಿಕ ರಚನೆಗಳಲ್ಲಿ ಶೂದ್ರ ಬಂಡಾಯ ಕಾಣುತ್ತದೆ. ವೈದಿಕ ಅಚ್ಚುಕಟ್ಟುತನದಲ್ಲಿ ಹೇಗೊ ಶೂದ್ರರ ಅನೇಕ ಆಶಯ ಪ್ರತಿಮೆಗಳು ಸೆಣಸಿ ಒಳಸೇರಿಬಿಟ್ಟಿವೆ. ಹಾಗೆಯೇ, ಜಾನಪದ ಹಾಗೂ ಶೂದ್ರೀಯ ಎಂದು ಮೇಲುನೋಟಕ್ಕೆ ಕಾಣುವ ಸಾಂಸ್ಕೃತಿಕ ರಚನೆಗಳಲ್ಲಿ ಬ್ರಾಹ್ಮಣ್ಯದ ಸೊಗಡಿದೆ. ಈ ಸಾಂಸ್ಕೃತಿಕ ಸಂಕರದಿಂದಾಗಿ ಭಾರತೀಯ ಸಂಸ್ಕೃತಿಯನ್ನು ಶುದ್ಧ ಬ್ರಾಹ್ಮಣ-ಶೂದ್ರ ಎಂದು ದ್ವಂದ್ವಾತ್ಮಕ ಪರಿಕಲ್ಪನೆಗಳಲ್ಲಿ ಅಧ್ಯಯನ

ಮಾಡಿದರೆ ಬಹುಪಾಲು ಪ್ರಸಂಗಗಳಲ್ಲಿ ತರಲೆಯೇ ಹೆಚ್ಚಾಗುತ್ತದೆ. ನಿರ್ದಿಷ್ಟವಾಗಿ ಕೆಲವೊಮ್ಮೆ ಮಾತ್ರ ಇವು ತಮ್ಮ ಶುದ್ಧರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಉಳಿದೆಡೆಗಳಲ್ಲಿ ಇವು ಪರಸ್ಪರ ಸೆಣಸುತ್ತಾ ಪರಸ್ಪರ ಬೆರೆತುಹೋಗಿವೆ"[31]

ಹಿಂದೂ-ಮುಸ್ಲಿಂ ಸಂವೇದನೆಗಳು ಈಗ ವೈರುಧ್ಯಗಳಂತೆ ಬಿಂಬಿಸಲ್ಪಡುತ್ತಿದ್ದರೂ, ಆಂತರ್ಯದಲ್ಲಿ ಈ ಎರಡೂ ಧರ್ಮೀಯರು ತಮ್ಮ ಧಾರ್ಮಿಕ ಆಚರಣೆ, ವ್ಯಾಪಾರ, ವ್ಯವಹಾರ, ಮಾನವೀಯ ಸಂಬಂಧಗಳನ್ನು ಇಟ್ಟುಕೊಂಡು ಬದುಕುತ್ತಿದ್ದಾರೆ.

ಹಿಂದೂ ಹಾಗೂ ಮುಸ್ಲಿಂ ಸಾಮರಸ್ಯದ ಬಗ್ಗೆ ಡಿ.ಆರ್.ನಾಗರಾಜ್‌ರವರು ಹೇಳುವುದೆಂದರೆ : "ಈವತ್ತಿಗೂ ಕರ್ನಾಟಕದ ಅನೇಕ ಮುಸ್ಲಿಂ ಪವಿತ್ರ ಸ್ಥಳಗಳಿಗೆ ಹಿಂದೂಗಳು ತುಂಬು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಹಿಂದೂ ದೇವತೆ ಕ್ಷೇತ್ರಗಳಿಗೆ ಮುಸ್ಲಿಮರು ನಡೆದುಕೊಳ್ಳುತ್ತಾರೆ. ಮೌನವಾಗಿ, ಸಾಂಸ್ಕೃತಿಕ ದೈನಂದಿನತೆಯ ಭಾಗವಾಗಿದ್ದ ಮೌಲ್ಯವನ್ನು ಪ್ರಧಾನ ಮೌಲ್ಯವಾಗಿ ಪರಿವರ್ತಿಸಬೇಕಾಗಿದೆ. 'ಖಾದರ್ ಲಿಂಗ'ರನ್ನ ಸೃಷ್ಟಿಸಿದ ಸಂಸ್ಕೃತಿ ಎನ್ನುವುದನ್ನು ಮತ್ತೆ ಪ್ರತಿಷ್ಠಾಪಿಸಬೇಕಾಗಿದೆ"[32]

ಈ ಬಗೆಯ ಸಾಮರಸ್ಯವೇ ಧಾರ್ಮಿಕ ಸಂಕುಚಿತತೆಗಳನ್ನು ಮೀರುವ ಕ್ರಮ. ಬ್ರಿಟಿಷರು ವಸಾಹತುಶಾಹಿ ಆಡಳಿತಾವಧಿಯಲ್ಲಿ, ರೂಪಿಸಿದ ಈ ಬಗೆಯ ಧಾರ್ಮಿಕ ಸಂಕುಚಿತತೆಯನ್ನು ಮೀರುವುದು ನಿರ್ವಸಾಹತೀಕರಣದ ಸಂದರ್ಭದಲ್ಲಿ ವಸಾಹತುಶಾಹಿ ರೂಪಿಸಿದ ನೋಟಕ್ರಮಗಳಿಂದ ಬಿಡುಗಡೆ ಹೊಂದುವ ಪ್ರಯತ್ನ.

ಧರ್ಮ ಹಾಗೂ ಸಂಸ್ಕೃತಿಗಳ ಬಹುಮುಖತ್ವಕ್ಕೆ ಸಮ್ಮತಿಸುವ ಮೂಲಕವೆ ವಸಾಹತುಶಾಹಿಯ ಲೋಕಗ್ರಹಿಕೆ, ನಿಯಂತ್ರಣದ ಮಾದರಿಗಳಿಂದ ಬಿಡುಗಡೆ ಹೊಂದುವುದು ಸಾಧ್ಯವಾಗುತ್ತದೆ. ಕುವೆಂಪುರವರ 'ಕಾನೂರು ಹೆಗ್ಗಡತಿ'ಯಲ್ಲಿ, ಹೂವಯ್ಯನು ವೈದಿಕ ಧರ್ಮದ ಸಂಕುಚಿತ ದೃಷ್ಟಿಗಳಿಂದ ಬಿಡುಗಡೆ ಪಡೆಯಲು ಇರುವ ಮಾರ್ಗವೊಂದನ್ನು ಕ್ರಮಿಸಲು ಬೌದ್ಧ ಧರ್ಮದ ಆಸರೆಯನ್ನು ಪಡೆಯುತ್ತಾನೆ. ಹಾಗೆಯೇ, ಅಂಬೇಡ್ಕರ್‌ರವರು ಕೂಡ ಹಿಂದೂ ಧರ್ಮದ ಶೋಷಣೆ ಹಾಗೂ ಕರ್ಮಠ ಆಚರಣೆಗಳಿಂದ ಬಿಡುಗಡೆ ಹೊಂದಲು ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ ಸಂದರ್ಭವು ಆಂತರಿಕ ವಸಾಹತುಶಾಹಿಗಳಿಂದ ನಿರ್ವಸಾಹತೀಕರಣದ ಪ್ರಕ್ರಿಯೆಯೆನ್ನಬಹುದು.

ಆಧುನಿಕೋತ್ತರ ಸಂದರ್ಭದಲ್ಲಿ, ಧರ್ಮ-ಸಂಸ್ಕೃತಿಗಳಲ್ಲಿ ನಿರ್ವಸಾಹತೀಕರಣದ ಸಾಧ್ಯತೆಗಳನ್ನು ಡಿ.ಆರ್.ನಾಗರಾಜ್‌ರವರು ಮಂಡಿಸುವುದು – ಬಾಹ್ಯ ಹಾಗೂ ಆಂತರಿಕ ವಸಾಹತುಶಾಹಿಗಳಿಬ್ಬರಿಂದಲೂ ನಿರ್ವಸಾಹತೀಕರಣಗೊಳ್ಳುವ ಮಾರ್ಗವನ್ನು. ಅದು ಧರ್ಮ ನಿರಪೇಕ್ಷ ಧೋರಣೆ ತಳೆಯುವುದಾಗಿದೆ. ಸಂಸ್ಕೃತಿ ಹಾಗೂ ಧರ್ಮಗಳ ಸಂಶ್ಲೇಷಿತ ರೂಪಗಳಿರುವುದನ್ನು ಅವರ ಬಹುಪಾಲು ಸಂಸ್ಕೃತಿ ಹಾಗೂ ಧಾರ್ಮಿಕ ಚಿಂತನೆಗಳಲ್ಲಿ ಮಂಡಿಸುತ್ತಾರೆ. 'ಸಂಕಲನಾನುಸಂಧಾನ'ದ ಪರಿಭಾಷೆಯು ಇದನ್ನು ಮಂಡಿಸುತ್ತದೆ.

ರಾಜಕೀಯ ಹಾಗೂ ಬೌದ್ಧಿಕ ನಿರ್ವಸಾಹತೀಕರಣದ ಚಿಂತನೆಗಳು

ಆಧುನಿಕೋತ್ತರ ಸಂದರ್ಭದಲ್ಲಿ ಶುದ್ಧಾಂಗವಾಗಿ ಸಾಹಿತ್ಯಕ ದೃಷ್ಟಿಕೋನದಿಂದ ಪ್ರಚಲಿತ ಸಮಸ್ಯೆಗಳನ್ನು ಮುಖಾಮುಖಿಯಾಗುವುದು ಸಾಧ್ಯವಿಲ್ಲ. ಆದ್ದರಿಂದ ಆಧುನಿಕ ಪೂರ್ವದಿಂದ ಸಮಕಾಲೀನ ಸಂದರ್ಭದವರೆಗೂ ಸಂಸ್ಕೃತಿಯಲ್ಲಿ ವ್ಯಕ್ತವಾಗಿರುವ ಅನೇಕ ಬಗೆಯ ಸಾಂಸ್ಕೃತಿಕ ಹಿಡಿತಗಳನ್ನು ಕಂಡುಕೊಳ್ಳಲು ಒಂದೇ ಜ್ಞಾನಶಿಸ್ತಿನ ಮೂಲಕ ಆಗುವುದಿಲ್ಲ. ಈ ಪರಿಣಾಮವಾಗಿ ಸಂಸ್ಕೃತಿಯನ್ನು ಪರಿಭಾವಿಸುವಲ್ಲಿ ರಾಜಕೀಯ ಧೋರಣೆಗಳನ್ನು ಪರಿಭಾವಿಸುವ ಅಗತ್ಯವಿದೆ.

ಆ ಕಾರಣದಿಂದಾಗಿ ಡಿ.ಆರ್.ನಾಗರಾಜ್‌ರವರು ವಸಾಹತುಶಾಹಿಯನ್ನು ಒಳಗೊಂಡಂತೆ ಪ್ರಭುತ್ವದ ಅನೇಕ ಆಯಾಮಗಳನ್ನು ನಿರಚಿಸಿಕೊಳ್ಳುವ ಮೂಲಕ ಪ್ರಭುತ್ವದ ಅಸಂಖ್ಯ ಹಿಡಿತಗಳನ್ನು ಅನಾವರಣಗೊಳಿಸುತ್ತಾರೆ. ಇದರಲ್ಲಿ ಮುಖ್ಯವಾಗಿ ಪ್ರಭುತ್ವವು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದ ಅಂಶಗಳನ್ನು ಹೇಗೆ ಪ್ರಜೆಗಳೆದುರಿಗೆ ನಿರಾಕರಿಸಲಾಗದಂತೆ; ಸಾರ್ವಜನಿಕ ಸಮ್ಮತಿ ಪಡೆಯುವಂತೆ ಮಂಡಿಸುತ್ತದೆ ಎಂಬುದನ್ನು ಡಿ.ಆರ್.ನಾಗರಾಜ್‌ರವರು ವ್ಯಾಖ್ಯಾನಿಸುತ್ತಾರೆ.

ಸಾಹಿತ್ಯ ಕಥನದ ಮುನ್ನುಡಿಯಲ್ಲಿ "ಸಾಹಿತ್ಯಾನುಭವದಲ್ಲಿ ಹುಟ್ಟಿರುವ ಪರಿಕಲ್ಪನೆಗಳಿಗೆ ಉಳಿದ ಜ್ಞಾನಕ್ಷೇತ್ರಗಳಲ್ಲೂ ಅಪಾರ ದೀಪ್ತಿ ಸಾಮರ್ಥ್ಯ ಇದೆ ಎಂಬ ನಂಬಿಕೆ ಇದರ ಹಿಂದೆ ಕೆಲಸ ಮಾಡಿದೆ. ಹೀಗಾಗಿ, ಇಲ್ಲಿರುವ ಸಾಕಷ್ಟು ಲೇಖಗಳು, 'ಶುದ್ಧ ಸಾಹಿತ್ಯ'ದ ವಲಯದಾಚೆಗಿರುವ ವಸ್ತುಗಳನ್ನು ಕುರಿತವು. ಆದರೆ, ಆ ಅನುಭವಗಳನ್ನು ಅರ್ಥೈಸುವುದಕ್ಕೆ ನಾನು ಬಳಸಿರುವ ತಂತ್ರಗಳು ಶುದ್ಧಾಂಗವಾಗಿ ಸಾಹಿತ್ಯ ಮೀಮಾಂಸೆಯವು. ಸಮಸ್ತ ಜ್ಞಾನವೂ ಒಂದು ಬಗೆಯ ಕಥನವೇ ಎನ್ನುವುದು ನನ್ನ

ಶ್ರದ್ಧೆಯ ಒಂದು ಮುಖವಾದರೆ, ಅದರ ಇನ್ನೊಂದು ಮುಖ ಎಲ್ಲಾ ಜ್ಞಾನಗಳನ್ನು ಸಾಹಿತ್ಯ ಮೀಮಾಂಸೆಯ ಪರಿಕರಗಳಿಂದ ಪ್ರವೇಶಿಸಲು ಸಾಧ್ಯ ಎಂಬ ನಿಲುವು"[33] ಎಂಬ ಡಿ.ಆರ್.ನಾಗರಾಜ್‌ರವರ ನಿಲುವಿನಲ್ಲಿ ಮುಖ್ಯವಾಗಿ ಗಂಭೀರ–ಜನಪ್ರಿಯ, ಶಿಷ್ಟ–ಜಾನಪದ, ಮುಂತಾದ ವಿಭಾಗಕ್ರಮಗಳನ್ನು ಮೀರಿ ಸಾಹಿತ್ಯ ಕೃತಿಗಳ ಮೂಲಕವೇ ಸಾಂಸ್ಕೃತಿಕ ಪ್ರಕ್ರಿಯೆಗಳ ಅಧ್ಯಯನಕ್ಕೆ ಒತ್ತು ನೀಡಲಾಗಿದೆ. 'ಸಂಸ್ಕೃತಿ ಕಥನ'ದ ಲಂಕೇಶರಲ್ಲಿ ರೀತಿ ಮತ್ತು ನೀತಿ ಎಂಬ ಲೇಖದಲ್ಲಿ 'ಸಾಹಿತ್ಯ ಕಥನ' ಕೃತಿಯಲ್ಲಿ ನಡೆದಿರುವ ಅನುಸಂಧಾನದ ಬಗ್ಗೆ ಹೀಗೆ ಹೇಳುತ್ತಾರೆ, "ನನ್ನ ಒಟ್ಟು ಕೃತಿಯ ಆಶಯಗಳು ವಸಾಹತೋತ್ತರ ಮತ್ತು ನವ್ಯೋತ್ತರ ಚಿಂತನೆಗಳಿಂದ ಪ್ರಭಾವಿತವಾಗಿ ಪ್ರತಿಯಾಗಿ ರೂಪುಗೊಂಡವು ('ಪೋಸ್ಟ್ ಕಲೋನಿಯಲ್' ಮತ್ತು 'ಪೋಸ್ಟ್ ಮಾರ್ಡರ್ನಿಸ್ಟ್' ಎಂಬರ್ಥದಲ್ಲಿ). ಈ ಅಂಶವನ್ನೆ ವಿಸ್ತರಿಸಿ ಹೇಳಲು ಸಾಧ್ಯವಿದೆ. ಪ್ರತಿಯೊಂದು ಸಾಹಿತ್ಯಕ ಚಿಂತನೆಯೂ ಕೆಲವು ನಿರ್ದಿಷ್ಟ ದ್ರವ್ಯ, ಪ್ರಭಾವಗಳಿಂದ ರೂಪುಗೊಂಡಿರುತ್ತದೆ. ಹೀಗಾಗಿ, ಅದಕ್ಕೊಂದು ಅಧ್ಯಯನ ವಿಧಾನವೂ ರೂಪುಗೊಂಡಿರುತ್ತದೆ. ಸಾಹಿತ್ಯ ಚಿಂತನೆಯ ಪ್ರಜ್ಞಾವಂತ ವಿದ್ಯಾರ್ಥಿಗೆ ತನ್ನ ಪರಿಕರಿಗಳ ಸ್ವರೂಪದ ಬಗೆಗೆ ಆತ್ಮ ಜ್ಞಾನವಿರುತ್ತದೆ"[34]

'ವಸಾಹತೋತ್ತರ ಮತ್ತು ನವ್ಯೋತ್ತರ ಚಿಂತನೆಗಳಿಂದ ಪ್ರಭಾವಿತವಾಗಿ ಪ್ರತಿಯಾಗಿ' ಆಧುನಿಕೋತ್ತರ ಚಿಂತನೆಗಳಿಂದ ರೂಪಿತಗೊಂಡ ಅವರ ಕೃತಿಗಳನ್ನು ಅನ್ಯ ಜ್ಞಾನಶಿಸ್ತುಗಳ ಮೂಲಕ ಪರಿಭಾವಿಸಬೇಕಾಗುತ್ತದೆ.

ವಸಾಹತುಶಾಹಿ ನಿರ್ಮಿತ ಸಂಕಥನಗಳು ಅನೇಕ ಬೌದ್ಧಿಕ ಆಯಾಮಗಳನ್ನು ಒಳಗೊಂಡಿವೆ. ಇವುಗಳಿಗೆ ಪ್ರತಿ ಸಂಕಥನಗಳನ್ನು ನಿರ್ಮಿಸುವಾಗ ಕೂಡ ಇದೇ ಬಗೆಯ ಆಳವಾದ ಪರಿಶೀಲನೆಯಿಂದ ಬೌದ್ಧಿಕವಾದ ಪರಿಕರಗಳನ್ನು ಅನ್ವೇಷಿಸುವ ಅಗತ್ಯವಿದೆ. ಇದಕ್ಕಾಗಿ ವಸಾಹತುಶಾಹಿ ದೃಷ್ಟಿಕೋನದಿಂದ ಕಲೆ, ಸಾಹಿತ್ಯ, ಧರ್ಮ, ಸಂಸ್ಕೃತಿ, ಮುಂತಾದವುಗಳನ್ನು ಭಿನ್ನ ಅನುಸಂಧಾನಗಳಿಂದ ಮುಖಾಮುಖಿಯಾಗಿ ಅವುಗಳಿಗೆ ಒಂದು ಸಾಂಸ್ಕೃತಿಕ ಶಕ್ತಿಯನ್ನು ಒದಗಿಸಬೇಕಾಗುತ್ತದೆ. 'ಸಂಪೂರ್ಣ ಸ್ವಾಧೀನತೆ ಮತ್ತು ನಿಯಂತ್ರಣಗಳಾಚೆಗೆ ವಸಾಹತೀಕರಣ ಸಿದ್ಧಾಂತಿಗಳ ವಿಷಾದಯೋಗದ ಮೂಲವನ್ನು ಕುರಿತು' ಎಂಬ ಲೇಖನದಲ್ಲಿ ಡಿ.ಆರ್.ನಾಗರಾಜ್‌ರವರು ವಸಾಹತುಶಾಹಿ ಅನುಭವದ ಸಿದ್ಧಾಂತಿಗಳ ಬಗ್ಗೆ ಚರ್ಚಿಸುವಾಗ ಮೂರು ಬಗೆಯ ವಿಂಗಡಣೆಗಳನ್ನು ಮಾಡಿಕೊಳ್ಳುತ್ತಾರೆ.

1. ಸಾಂಸ್ಕೃತಿಕ ಆತ್ಮವಾದಿಗಳು

2. ಸಮಗ್ರ ದಿಗ್ವಿಜಯವಾದಿಗಳು

3. ಸಾಂಸ್ಕೃತಿಕ ಅನುಸಂಧಾನದ ಮಾರ್ಗ

ಇದರಲ್ಲಿ ಕ್ರಮವಾಗಿ ಆನಂದ ಕುಮಾರಸ್ವಾಮಿ, ಎಡ್ವರ್ಡ್‌ಸೈದ್, ಫ್ರಾಂಜ್ ಫ್ಯಾನನ್, ಅಶೀಶ್‌ನಂದಿ, ಮಹಾತ್ಮಗಾಂಧಿ ಮುಂತಾದವರ ಚಿಂತನೆಗಳನ್ನು ವಸಾಹತುಶಾಹಿ ಅನುಭವದ ಸಿದ್ಧಾಂತಿಗಳಾಗಿ ಚರ್ಚಿಸುತ್ತಾರೆ. ಈ ಸಂದರ್ಭದಲ್ಲಿ ವಸಾಹತೋತ್ತರ ಚಿಂತನೆಯಲ್ಲಿ ಮುಖ್ಯವಾಗಿ ಪರಿಗಣಿಸಲ್ಪಟ್ಟಿದ್ದ ಎಡ್ವರ್ಡ್‌ಸೈದ್‌ನ 'ಓರಿಯಂಟಲಿಸಂ' ಕೃತಿಯಲ್ಲಿ ಕೂಡ ವಸಾಹತುಶಾಹಿ ಹೇರಿದ ಮಿತಿಗಳಿವೆ ಎನ್ನುತ್ತಾರೆ. ಅವರ ಪ್ರಕಾರ : "ಎಡ್ವರ್ಡ್‌ಸೈದ್ ಮತ್ತು ಉಳಿದ ದಿಗ್ವಿಜಯವಾದಿಗಳ ಅಧ್ಯಯನ ವಿಧಾನದ ಅತಿದೊಡ್ಡ ಮಿತಿ ಎಂದರೆ-ಅವಕ್ಕೆ ವಸಾಹತೀಕೃತ ಸಮಾಜಗಳ ಬಗ್ಗೆ ಒಂದು ಏಕರೂಪೀ ಕಲ್ಪನೆ ಇದೆ ಎನ್ನುವುದು. ಈ ವಸಾಹತೀಕೃತ ಸಮಾಜಗಳ ಚಾರಿತ್ರಿಕ, ಅಸ್ತಿತ್ವೀಯ ಅನುಭವಗಳಲ್ಲಿ ವಿವಿಧ ಸ್ತರಗಳ ತಾರತಮ್ಯತೆಯನ್ನು, ಭಿನ್ನತೆಯನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನವೇ ಹೆಚ್ಚು ನಡೆದಿಲ್ಲ ಎನ್ನುವುದು ಶೋಧನಾ ಯೋಗ್ಯವಾದ ಸಂಗತಿ. ಅಂದರೆ, ಇಲ್ಲಿ ದಿಗ್ವಿಜಯ ವಿಧಾನ ಒಂದು ನಿರ್ದಿಷ್ಟ ಎರಕದ ಚಾರಿತ್ರಿಕ ಸಂಶೋಧನಾ ವಿಧಾನವನ್ನು ರೂಪಿಸಿದ್ದು, ಅದಕ್ಕೆ ಕೆಲವು ರೀತಿಯ ಮಾಹಿತಿಗಳು ಮಾತ್ರ ಕಾಣುತ್ತವೆ. ಶತ್ರುವಿನ ಶಕ್ತಿಯ ಬಗೆಗಿನ ಉತ್ಪ್ರೇಕ್ಷಿತ ಕಲ್ಪನೆಗಳು ಮಾತ್ರ ಇದಕ್ಕೆ ಕಾರಣವಲ್ಲ. ಅಥವಾ 'ಸೋತ' ಸಮಾಜಗಳ ಶಕ್ತಿಯ ಬಗೆಗೆ ಅಪನಂಬಿಕೆಯೂ ಇದಕ್ಕೆ ಏಕ ಮಾತ್ರ ಕಾರಣವಲ್ಲ. ಏಕೆಂದರೆ, ತಾತ್ವಿಕವಾಗಿ ಇವೆರಡೂ ಒಂದೇ ಆಲೋಚನಾ ಕ್ರಮದ ಎರಡು ಮುಖಗಳು. ಆದ್ದರಿಂದ, ಇಲ್ಲಿ ನಿಜವಾದ ನಿಯಂತ್ರಕಶಕ್ತಿ ಇರುವುದು, ಪಶ್ಚಿಮ ಚಿಂತನೆಯಲ್ಲಿ ಕಳೆದ ೨೦೦ ವರ್ಷಗಳಿಂದ ರೂಢಿಯಾಗುತ್ತ ಬೆಳೆದು ಬಂದ ಒಂದು ನಿರ್ದಿಷ್ಟ ಆಲೋಚನಾಕ್ರಮದಲ್ಲಿ. ಈ ಆಲೋಚನಾಕ್ರಮ ಲೌಕಿಕಾಧಿಕಾರ, ಪ್ರಭುತ್ವ ಮತ್ತು ಸಮಾಜಗಳ ನಡುವಣ ಸಂಬಂಧವನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ನಿಯಂತ್ರಿಸುತ್ತದೆ ಎಂಬ ನಂಬಿಕೆ ಇಲ್ಲಿ ಪ್ರಧಾನವಾಗಿ ಕೆಲಸ ಮಾಡುತ್ತದೆ"[35]

ಈ ಬಗೆಯ ಮಿತಿ ಇರುವ ಎಡ್ವರ್ಡ್‌ಸೈದ್‌ನ ವಿಚಾರಧಾರೆಗಳು ಕೂಡ ವಸಾಹತುವಾದಿ ಸಂಕಥನಕ್ಕೆ ಪೂರಕವಾಗಿವೆ. ಇವರನ್ನು ಸಮಗ್ರ ದಿಗ್ವಿಜಯವಾದಿಗಳು ಎನ್ನುವ ಡಿ.ಆರ್.ನಾಗರಾಜ್‌ರವರು 'ಓರಿಯಂಟಲಿಸಂ' ನಂತಹ ಕೃತಿಗಳಲ್ಲಿಯೂ ಕೂಡ ಅಂತರ್ಗತವಾಗಿರುವ ವಸಾಹತುವಾದೀ ದೃಷ್ಟಿಕೋನ ಹಾಗೂ ಅದು

ರೂಪಿಸಬಯಸುತ್ತಿರುವ ಸಂಕಥನಗಳು ಕೂಡ ವಸಾಹತುಕ್ರಮವೇ ಆಗುತ್ತದೆ ಎಂಬುದನ್ನು ಈ ಲೇಖನದಲ್ಲಿ ಪ್ರತಿಪಾದಿಸುತ್ತಾರೆ.

ಅಶೀಶ್ ನಂದಿ ಮತ್ತು ಗಾಂಧಿಯವರ ಚಿಂತನೆಗಳು 'ಸಾಂಸ್ಕೃತಿಕ ಅನುಸಂಧಾನದ ಮಾರ್ಗ'ದ ಮೂಲಕ 'ಸಾಂಸ್ಕೃತಿಕ ಆತ್ಮವಾದಿಗಳು' ಮತ್ತು 'ಸಮಗ್ರ ದಿಗ್ವಿಜಯವಾದಿಗಳು' ಎದುರಿಸುವ ಸಮಸ್ಯೆಗಳನ್ನೇ ಭಿನ್ನ ಕ್ರಮದಲ್ಲಿ ಮುಖಾಮುಖಿಯಾಗುವುದನ್ನು ಪರಿಶೀಲಿಸುತ್ತಾರೆ. ಈ ಬಗೆಯ ಚರ್ಚೆಯ ಕೇಂದ್ರ ಗ್ರಹಿಕೆ ಎಂದರೆ ವಸಾಹತುವಾದೀ ದೃಷ್ಟಿಕೋನದಿಂದ ಬಿಡುಗಡೆ ಪಡೆಯುವ ಹಂತದಲ್ಲಿ ಮತ್ತೆ ಪಶ್ಚಿಮ ಮುಖಿಯಾಗುವುದನ್ನು ತಪ್ಪಿಸುವುದು. ರಾಜಕೀಯ ವಿಚಾರಧಾರೆಗಳಲ್ಲಿ ನಿರ್ವಸಾಹತೀಕರಣ ಪ್ರಕ್ರಿಯೆ ನಡೆಯಬೇಕಾಗಿರುವುದು ಈ ದಿಸೆಯಲ್ಲೇ. ಇಲ್ಲವಾದಲ್ಲಿ ಎಡ್ವರ್ಡ್ ಸೈದ್‌ನ ವ್ಯಾಪಕ ಅನ್ವಯಕ್ರಮಗಳಿಂದಾಗಿ ದೇಶೀ ಚಿಂತನಾಕ್ರಮಗಳು ರಾಜಕೀಯ ಚಿಂತನೆಯ ಸಂದರ್ಭದಲ್ಲಿ ಹಿನ್ನೆಲೆಗೆ ಸರಿಯುತ್ತವೆ. ಆದರೆ ನಿರ್ವಸಾಹತೀಕರಣದಲ್ಲಿ ಈ ಬಗೆಯ ಪಶ್ಚಿಮದ ಚಿಂತನಾಕ್ರಮಗಳನ್ನು ಕೂಡಾ ನಿರಾಕರಿಸುವುದು ಹಾಗೂ ಅವುಗಳಿಗೆ ಪರ್ಯಾಯವಾಗಿ ದೇಶೀ ಚಿಂತನಕ್ರಮಗಳನ್ನು ಅನ್ವಯಿಸುವ ಕ್ರಮಗಳನ್ನು ಕಂಡುಕೊಳ್ಳುವುದು ಅಗತ್ಯವಾಗಿದೆ ಎಂಬುದು ಅವರ ಗ್ರಹಿಕೆಯಾಗಿದೆ.

'ಸಾಂಸ್ಕೃತಿಕ ಅನುಸಂಧಾನದ ಮಾರ್ಗ'ದ ಬಗ್ಗೆ ಡಿ.ಆರ್.ನಾಗರಾಜ್‌ರವರು "ಪ್ರಸ್ತುತ ಪ್ರಸ್ಥಾನದ ಅತ್ಯಂತ ಮುಖ್ಯ ಚಿಂತಕ ಎಂದರೆ ಅಶೀಶ್‌ನಂದಿ. ಆದರೆ, ಈ ಮಾರ್ಗದ ಮೂಲ ಪಿತಾಮಹ ಮಹಾತ್ಮಗಾಂಧಿ. ಆದರೆ, ಅಶೀಶ್‌ನಂದಿಯವರಲ್ಲಿ ಈ ಅಧ್ಯಯನ ಮಾರ್ಗ ತನ್ನದೇ ಆದ ಶಕ್ತಿ ಮತ್ತು ಸಮಸ್ಯೆಗಳನ್ನು ರೂಢಿಸಿಕೊಂಡಿದೆ. ಅಶೀಶರ ಅಧ್ಯಯನದ ಬೇರುಗಳು ಸಾಕಷ್ಟು ಆಳವಾಗಿ 'ಸಾಂಸ್ಕೃತಿಕ ದಿಗ್ವಿಜಯ'ದ ಮಾದರಿಯಲ್ಲೂ ಊರಿವೆ. ಆ ಅಧ್ಯಯನ ವಿಧಾನದ ಅಂತರ್ಗತ ವಿಷಾದ ಇಲ್ಲೂ ಕೂಡ ದಟ್ಟವಾಗಿ ಹರಿದು ಬಂದಿದೆ. ಈ ಅನುಸಂಧಾನ ಮಾರ್ಗ ಶತ್ರು ಪಕ್ಷದಲ್ಲೂ ಸೋತವನು ಒಳಹೊಕ್ಕು ಕಾಡುವುದನ್ನು ಗುರುತಿಸುತ್ತದೆ. ಹೀಗಾಗಿ, ಸಾಂಸ್ಕೃತಿಕ ದಿಗ್ವಿಜಯವಾದಿಗಳ ವಿಷಾದ ಯೋಗಕ್ಕೆ ಆಗಾಗ ಅಶಿಶ್‌ನಂದಿ ಸಂದರೂ ಒಟ್ಟು ಪ್ರಕ್ರಿಯೆಗಳ ಸಂಕೀರ್ಣತೆಯ ಕಡೆಗೆ ಎಚ್ಚರಿಸಲು ಪ್ರಯತ್ನಿಸುತ್ತಾರೆ. ಒಬ್ಬರೊಳಗೊಬ್ಬರು ಮುಳುಗಿಹೋಗಿ ಏಳುವ ಪ್ರಕ್ರಿಯೆಯನ್ನು ಅದರ ಎಲ್ಲಾ ಮುಖಗಳೊಂದಿಗೆ ವರ್ಣಿಸಲು, ಅರ್ಥೈಸಲು ಪ್ರಯತ್ನಿಸುತ್ತಾರೆ"[36] ಎನ್ನುತ್ತಾರೆ.

ಈ ವಿಧಾನದಲ್ಲಿ ಡಿ.ಆರ್.ನಾಗರಾಜ್‌ರವರು ಎಡ್ವರ್ಡ್ ಸೈದ್, ಫ್ರಾಂಜ್ ಫ್ಯಾನನ್, ಮೆಮ್ಮಿ, ಮುಂತಾದವರು ಪ್ರತಿಪಾದಿಸುವ "ವಸಾಹತೀಕರಣದ ಶಕ್ತಿಗಳು ದೇಶಿ ಸಂಸ್ಕೃತಿ-ಸಮಾಜಗಳ ಮೇಲೆ ಪೂರ್ಣ ಸಾಂಸ್ಕೃತಿಕ, ರಾಜಕೀಯ ಪ್ರಭುತ್ವವನ್ನು ಸಾಧಿಸಿವೆ ಎಂಬ ವೈಚಾರಿಕೆ ನೆಲೆ"[37] ಗಿಂತ ಭಿನ್ನವಾಗಿ ವಸಾಹತುಶಾಹಿಯೊಡನೆ ಸಾಂಸ್ಕೃತಿಕ ಅನುಸಂಧಾನದ ಮಾರ್ಗದ ಮುಖಾಂತರ 'ಸಾಂಸ್ಕೃತಿಕ ಆತ್ಮವಾದಿಗಳು' ಹಾಗೂ 'ಸಮಗ್ರ ದಿಗ್ವಿಜಯವಾದಿಗಳು' ಗಿಂತ ಭಿನ್ನವಾಗಿ "ವಸಾಹತೀಕರಣದ ತಂತ್ರಗಳನ್ನು ದಾಟುವ ಸ್ವದೇಶಿ ಶಕ್ತಿಯ ಸಾಧ್ಯತೆಗಳ ಕಡೆಗೆ ಗಮನ"[38] ಹರಿಸುತ್ತಾರೆ.

ಡಿ.ಆರ್.ನಾಗರಾಜ್‌ರವರು 'ಅಶೀಶ್‌ನಂದಿ:ರೂಪಕಾತ್ಮಕ ವಿಧಾನ' ಲೇಖನದಲ್ಲಿ ಪ್ರಭುತ್ವವು ಸೃಷ್ಟಿಸುವ ವಿರಾಟ್ ಕಥನಗಳ ಬಗ್ಗೆ ಅಶೀಶ್‌ನಂದಿಯವರ ಚಿಂತನೆಗಳ ಮೂಲಕ ಗಮನ ಸೆಳೆಯುತ್ತಾರೆ. "ವಿರಾಟ್‌ಕಥನಗಳ ಸೃಷ್ಟಿ ಎಂದರೆ, ಇಡೀ ದೇಶ ಒಪ್ಪಿ, ತಬ್ಬಿ ಹಠದಿಂದ ಮುಂದುವರೆಸುವ ರಾಜಕೀಯ, ಸಾಮಾಜಿಕ, ಚಾರಿತ್ರಿಕ, ಆರ್ಥಿಕ ಆದರ್ಶ ಆಕೃತಿಗಳ ಸೃಷ್ಟಿ, ಅಶೀಶ್‌ರ ಮುಖ್ಯ ಪರಿಣತಿ ಇರುವುದು ವಸಾಹತೀಕೃತ ಮತ್ತು ನಂತರದ ಭಾರತದ ಎಷ್ಟೆಲ್ಲ ವಿರಾಟ್ ಕಥನಗಳನ್ನು ಈ ಇಂದ್ರಜಾಲಿಕ ಮಧ್ಯಮವರ್ಗಗಳು ನಮಗೆ ಅರೆದು, ಕುಡಿಸಿ ಒಪ್ಪಿಸಿ ಬಿಟ್ಟಿವೆ ಎನ್ನುವುದನ್ನು ಅಧ್ಯಯನ ಮಾಡುವುದರಲ್ಲಿ. ಅಶೀಶರಲ್ಲಿ ಇದೇ ಒಂದು ವಿಶೇಷ ಜ್ಞಾನ ಶಾಖೆಯಾಗಿ ರೂಪುಗೊಂಡಿದೆ. ರಾಷ್ಟ್ರೀಯ ಪ್ರಭುತ್ವ (ನೇಷನ್ ಸ್ಟೇಟ್), ಪ್ರಗತಿ ಮತ್ತು ಅಭಿವೃದ್ಧಿಗಳೆಂಬ ಬಂಗಾರದ ನಾಡು, ವಿಜ್ಞಾನ ಮತ್ತು ತಂತ್ರಜ್ಞಾನಗಳೆಂಬ ಪ್ರಶ್ನಾತೀತ ಜ್ಞಾನ ಹಾಗೂ ಸುಖ ಸಾಧನೆಯ ವಿಧಗಳು, ಸೆಕ್ಯುಲರಿಸಂ ಎಂಬ ಪರಮೋಚ್ಚ ರಾಜಕೀಯ ಸಾಂಸ್ಕೃತಿಕ ಆದರ್ಶ - ಈ ನಾಲ್ಕು ನಮ್ಮನ್ನು ಕಳೆದ ೫೦ ವರ್ಷಗಳಿಂದ ಆಳುತ್ತಿರುವ ವಿರಾಟ್ ಕಥನಗಳು"[39] ಎನ್ನುತ್ತಾರೆ.

ಇವುಗಳು ಬಹುಮುಖಿಯಾದ ದೇಶೀ ಜೀವನ ಪದ್ಧತಿಗಳನ್ನು ಏಕರೂಪೀಕರಣಗೊಳಿಸಲು ಬಳಕೆಯಾಗುತ್ತಿವೆ. ಪ್ರಭುತ್ವದ ಈ ವಿರಾಟ್ ಕಥನಗಳ ಸೃಷ್ಟಿಯ ಹಿನ್ನೆಲೆಯಲ್ಲಿ ಇರುವ ಏಕೋದ್ದೇಶವೆಂದರೆ, ಬಹುಮುಖತೆಯನ್ನು ಇಲ್ಲವಾಗಿಸುವುದು. ಇವುಗಳನ್ನು ಸಾರ್ವತ್ರಿಕ ಸಮ್ಮತಿಯ ಮೇರೆಗೆ ಕಾರ್ಯರೂಪಕ್ಕೆ ತರುವಂತೆ ತೋರುವ ಪ್ರಭುತ್ವದ ಹುನ್ನಾರಗಳು ಅಸಂಖ್ಯ.

ಇವುಗಳನ್ನು ಗ್ರಹಿಸಲು ಫ್ರಾಂಜ್‌ಫ್ಯಾನನ್, ಎಡ್ವರ್ಡ್ ಸೈದ್ ಇಬ್ಬರಿಗಿಂತ ಅಶೀಶ್‌ನಂದಿಯವರ ಗ್ರಹಿಕೆಗಳು ಪ್ರಸ್ತುತವೆಂದು ಡಿ.ಆರ್.ನಾಗರಾಜ್‌ರವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ಫ್ರಾಂಜ್ ಫ್ಯಾನನ್ ಮತ್ತು ಎಡ್ವರ್ಡ್ ಸೈದ್‌ರು ಸೇರಿದಂತೆ ಬಹುಪಾಲು

ಆಧುನಿಕ ವಸಾಹತು ಸಿದ್ಧಾಂತಿಗಳು ವಿಧಿವಾದಿಗಳು ಎಂದರೂ ಸಲ್ಲುತ್ತದೆ. ಫ್ಯಾನನ್ ಮತ್ತು ಸೈದ್ ಇಬ್ಬರಿಗೂ ಸೋತವರ ತಂತ್ರಗಾರಿಕೆಗಿಂತ, ಗೆದ್ದವರ ಶಕ್ತಿಯ ಮೇಲೆಯೇ ಹೆಚ್ಚು ವಿಶ್ವಾಸ. ಅಂದರೆ, ವಸಾಹತುವಾದ ಎಂದರೆ ವಿಧಿ ಇದ್ದಂತೆ. ಫ್ಯಾನನ್‌ಗೆ ವಸಾಹತುಶಕ್ತಿಯ ಪೂರ್ಣ ಪರಿವರ್ತನಾಶೀಲ ಶಕ್ತಿಯ ಬಗ್ಗೆ ಭಯ ಮತ್ತು ಪೂರ್ಣವಿಶ್ವಾಸ. ವಸಾಹತೀಕರಣಕ್ಕೆ ಒಳಗಾದವನು ಪೂರ್ಣವಾಗಿ ಬದಲಾಗಿ ಬಿಡುತ್ತಾನೆ ಎಂಬ ನಿಲುವಿನ ಕಾರಣಕ್ಕಾಗಿಯೇ ಆತನ ಬರವಣಿಗೆಯಲ್ಲಿ ಉದ್ವಿಗ್ನತೆ, ವಿಷಾದ, ಕ್ರೋಧ ತುಂಬಿದೆ ಇದು ವಿಧಿವಾದದ ದಲಿತ (ಸಬ್ ಆಲ್ಟರ್ನ್) ರೂಪ. ಇದೇ ಪ್ರಕ್ರಿಯೆಯ ಇನ್ನೊಂದು ಕಡೆಯಲ್ಲಿ ಎಡ್ವರ್ಡ್ ಸೈದ್‌ರ ವಸಾಹತುಕಾರೀ ಮನೋರಚನೆಯ ವಿಶ್ಲೇಷಣೆ ರೂಪುಗೊಂಡಿದೆ. ಇಲ್ಲೂ ಕೂಡ ಇದೊಂದು ಅಪವಾದಗಳೇ ಇರದ ವಿಧಿವಾದೀ ರಚನೆ"[40]

ಈ ಬಗೆಯಲ್ಲಿ ಫ್ಯಾನನ್ ಮತ್ತು ಸೈದ್ ಈ ಇಬ್ಬರೂ ವಸಾಹತುವಾದಿ ಸಿದ್ಧಾಂತಗಳನ್ನೆ ಮತ್ತೊಂದು ರೀತಿಯಲ್ಲಿ ಮಂಡಿಸುತ್ತಿರುವಂತೆ ತೋರುತ್ತದೆ. ಅವರ ಪ್ರಕಾರ ವಸಾಹತುಗಳು, ವಸಾಹತುಶಾಹಿಗಳ ಆಳ್ವಿಕೆಗೆ ಒಳಪಡುವುದು ವಸಾಹತುಗಳ ವಿಧಿ. ಈ ಬಗೆಯ ನಿರ್ಧಾರಗಳನ್ನು ಡಿ.ಆರ್.ನಾಗರಾಜ್ ಪ್ರಶ್ನಿಸುತ್ತಾರೆ. ಈ ವಿಧಿವಾದಿ ನಿಲುವನ್ನು ಮಂಡಿಸುವಾಗ ವಸಾಹತುಗಳ ಸಾಂಸ್ಕೃತಿಕ ಪ್ರತಿರೋಧದ ನೆಲೆಗಳನ್ನು ಫ್ಯಾನನ್ ಮತ್ತು ಸೈದ್ ಪರಿಗಣಿಸದಿರುವುದು ಈ ಸಿದ್ಧಾಂತಿಗಳ ಮಿತಿ ಎನ್ನುತ್ತಾರೆ. ಡಿ.ಆರ್.ನಾಗರಾಜ್ ರವರ ಪ್ರಕಾರ, ಫ್ಯಾನನ್ ಮತ್ತು ಸೈದ್‌ರಿಗೆ ಪರ್ಯಾಯವಾಗಿ "ಅಶೀಶರ ತಾತ್ವಿಕತೆ ಹವಣಿಸುತ್ತದೆ ಎನ್ನುವುದನ್ನು ಗಮನಿಸಬೇಕು. ಅದು ವಿಜ್ಞಾನವು ಸಂಸ್ಕೃತಿ–ವಿಶಿಷ್ಟವಾದದ್ದಲ್ಲ, ವಿಜ್ಞಾನವು ಸಾರ್ವತ್ರಿಕವಾದದ್ದು ಎಂಬ ವಿರಾಟ್ ಕಥನದ ಭಗ್ನತೆಯ ಪ್ರಯತ್ನ. ಭಾರತೀಯ ಸನ್ನಿವೇಶದಲ್ಲಿ ಪರ್ಯಾಯ ವಿಜ್ಞಾನದ ಪ್ರಯತ್ನವೆಂದರೆ, ಅದು ನಿಸ್ಸಂದೇಹವಾಗಿ ಸಂಸ್ಕೃತಿ–ವಿಶಿಷ್ಟವೇ ಎನ್ನುವುದನ್ನು ಅಶೀಶ್ ಸಾಬೀತು ಮಾಡುತ್ತಾರೆ. ಇಲ್ಲೂ ಕೂಡಾ ಅಶೀಶರ ಅಧ್ಯಯನದ ವಿಶೇಷ ಎಂದರೆ ಜೀವನದ ಅತಿ ಸಾಮಾನ್ಯ ವಿವರಗಳ ಜೋಡಣೆ ಮತ್ತು ಹೊಂದಾಣಿಕೆಯಿಂದ ಪ್ರಸ್ತುತ ವ್ಯಕ್ತಿಯ ಅಸಾಮಾನ್ಯತೆಯನ್ನು ಹೊರಡಿಸಲು ಪ್ರಯತ್ನಿಸುವುದು"[41]

ಈ ಬಗೆಯಲ್ಲಿ ರಾಜಕೀಯ ಚಿಂತನೆಗಳಲ್ಲೂ ಕೂಡ ಭಾರತೀಯ ಸಂಸ್ಕೃತಿಯಿಂದಲೇ ರೂಪುಗೊಂಡ ಚಿಂತನೆಗಳೇ ರಾಜಕೀಯ ಹಾಗೂ ಬೌದ್ಧಿಕ

ವಿಚಾರಧಾರೆಗಳ ನಿರ್ವಸಾಹತೀಕರಣಕ್ಕೆ ಅವಶ್ಯಕವೆನ್ನುವುದು ಡಿ.ಆರ್.ನಾಗರಾಜ್‌ರವರ ಚಿಂತನೆಯಾಗಿದೆ.

ಡಿ.ಆರ್.ನಾಗರಾಜ್‌ರವರು ಪ್ರಭುತ್ವದ ಸೂಕ್ಷ್ಮ ಗ್ರಹಿಕೆಗೆ ಅನುಕೂಲವಾಗಲು ವ್ಯಕ್ತಪಡಿಸಿರುವ ಇತರೆ ಕೆಲವು ಅಭಿಪ್ರಾಯಗಳನ್ನು ನೋಡಬಹುದು. "ಧರ್ಮದ ಪರಿಭಾಷೆಯಲ್ಲಿ ಪ್ರಭುತ್ವವೊಂದು ಬೊಬ್ಬೆ ಹಾಕಿದಾಗ, ಧರ್ಮದ ಮೇಲಿನ ಟೀಕೆ ಸಾಕ್ಷಾತ್ ಪ್ರಭುತ್ವದ ಮೇಲಿನ ಟೀಕೆ ಎಂದು ಅದು ಹಾರಾಡಿದಾಗ ವಾಸ್ತವವಾಗಿ ಸ್ಪಷ್ಟ ವರ್ಗಸತ್ಯಗಳು ಅಲ್ಲಿ ಕೆಲಸ ಮಾಡುತ್ತಿರುತ್ತವೆ"[42]

ಏಕೆಂದರೆ ಪ್ರಭುತ್ವವು ಏಕಾಂಗಿಯಲ್ಲ. ಅದು ಧರ್ಮ, ಸಂಸ್ಕೃತಿ, ಭಾಷೆ, ಆರ್ಥಿಕ ಮುಂತಾದ ರಚನೆಗಳನ್ನು ಒಳಗೊಂಡ ಸಂಸ್ಥೆಯಾಗಿದ್ದು, ಪ್ರಜೆಗಳನ್ನು ನಿಯಂತ್ರಿಸಲು ಇವುಗಳನ್ನು ಬಳಸಿಕೊಳ್ಳುತ್ತಿರುತ್ತದೆ. ಪ್ರಭುತ್ವದ ನಿಯಂತ್ರಣದ ಕ್ರಮಗಳು ಈ ನೆಲೆಯಲ್ಲಿ ರೂಪುಗೊಳ್ಳುತ್ತಿರುತ್ತವೆ. ಡಿ.ಆರ್.ನಾಗರಾಜ್‌ರವರ ಪ್ರಕಾರ : "ಸಾಮಾನ್ಯವಾಗಿ ಪ್ರಭುತ್ವವೊಂದರ ನಿಯಂತ್ರಣದ ಕೆಲಸ ಸಲೀಸಾಗಲು ನಾಡೊಂದರಲ್ಲಿ ಏಕರೂಪದ ಧರ್ಮವಿದ್ದರೆ ಅನುಕೂಲ"[43] ಅಲ್ಲದೆ ಭಾಷೆ, ಸಂಸ್ಕೃತಿ, ಜೀವನ ಕ್ರಮಗಳು ಕೂಡ ಇದರಿಂದ ನಿರ್ಧಾರಿತವಾಗುತ್ತಿರುತ್ತವೆ.

ಅಭಿವೃದ್ಧಿ, ವೈಜ್ಞಾನಿಕ ದೃಷ್ಟಿಕೋನ, ತಂತ್ರಜ್ಞಾನ, ಆಧುನಿಕತೆಗಳ ಹೆಸರಿನಲ್ಲಿ ದೇಶೀ ಜೀವನ ಕ್ರಮಗಳನ್ನು ನಿರ್ನಾಮಗೊಳಿಸುತ್ತಿರುವ ಪ್ರಭುತ್ವವು ಕೂಡ ಇಂದು ದ್ವಂದ್ವದಲ್ಲಿದೆ. ದೇಶೀ ಕೈಗಾರಿಕೆಗಳ ಬದಲು ವಿದೇಶೀ ತಂತ್ರಜ್ಞಾನ ಆಧಾರಿತ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ, ಬಂಡವಾಳ ಹೂಡುವ ಮೂಲಕ ಹಾಗೂ ವಿದೇಶೀ ಬಂಡವಾಳದ ಹೂಡಿಕೆಗೆ ಮುಕ್ತ ಹಾದಿಯನ್ನು ತೆರೆಯುವ ಮೂಲಕ, ದೇಶೀ ತಂತ್ರಜ್ಞಾನಗಳಿಗೆ ಸ್ಥಳವಿಲ್ಲದಂತೆ ಮಾಡುತ್ತಿವೆ ಎಂಬುದನ್ನು ಡಿ.ಆರ್.ನಾಗರಾಜ್‌ರವರು ಹೀಗೆ ಹೇಳುತ್ತಾರೆ, "ಪಶ್ಚಿಮ ಕೇಂದ್ರಿತ ಬಂಡವಾಳ ಶಾಹಿ ಪಥದ ಕಲ್ಪನೆ ಮತ್ತು ಅನುಷ್ಠಾನದ ನೆಲೆಗಳಲ್ಲೇ ಸಾಂಪ್ರದಾಯಿಕ ರಾಜಕಾರಣ ನಿಭಾಯಿಸಲಾಗದ ಅನಾಹುತಗಳು ಹುಟ್ಟಿಕೊಳ್ಳುತ್ತಿವೆ ಎಂಬುದು ಈಗ ತೀವ್ರವಾಗಿ ಅರಿವಿಗೆ ಬರುತ್ತಿದೆ"[44]

ಆದರೂ, ಈಗಾಗಲೆ ಅಭಿವೃದ್ಧಿಯ ಬೆನ್ನು ಹತ್ತಿರುವ ಸರ್ಕಾರಗಳು ಎಚ್ಚೆತ್ತುಕೊಳ್ಳದೆ, ಅಣೆಕಟ್ಟು, ಬೃಹತ್ ಕೈಗಾರಿಕೆಗಳು, ವಿದ್ಯುತ್ ಉತ್ಪಾದನಾ ಕೇಂದ್ರಗಳ ಹೆಸರಿನಲ್ಲಿ ಅಪಾರವಾದ ನೆಲ, ಜಲ, ಅರಣ್ಯ ಮೂಲಗಳನ್ನು ನಾಶ ಮಾಡುವ ಮೂಲಕ, ದೇಶೀ ತಂತ್ರಜ್ಞಾನವನ್ನು ಗುಡಿ ಕೈಗಾರಿಕೆಗಳನ್ನು ನಿರಂತರವಾಗಿ ನಿರ್ಮೂಲಗೊಳಿಸುತ್ತಿವೆ.

ಈ ಬಗೆಯ ಪಶ್ಚಿಮ ಕೇಂದ್ರಿತ ಬಂಡವಾಳ, ಬೃಹತ್ ಯಂತ್ರೋದ್ಯಮ, ನಾಗರೀಕತೆಯ ಬೆನ್ನು ಹತ್ತಿರುವ ತೃತೀಯ ರಾಷ್ಟ್ರಗಳಲ್ಲಿ, ಪ್ರತಿಯೊಂದಕ್ಕೂ ಇದುವರೆಗೆ ಸಂಪನ್ಮೂಲವಾಗಿದ್ದ ಅರಣ್ಯಗಳೇ ಬಲಿಯಾಗುತ್ತಿವೆ.

ಡಿ.ಆರ್.ನಾಗರಾಜ್ ರವರ ಪ್ರಕಾರ: "ಸಮಕಾಲೀನ ರಾಜಕಾರಣವನ್ನು ವಿಶ್ಲೇಷಿಸಲು ರಾಜಕೀಯ ಶಾಸ್ತ್ರ ಅಷ್ಟು ಉಪಯುಕ್ತವಲ್ಲ. ಬದಲಾಗಿ, ಸಾಹಿತ್ಯ, ಕಲೆ ಸಂಸ್ಕೃತಿಶಾಸ್ತ್ರಗಳ ಪರಿಕಲ್ಪನೆಗಳಿಂದ ರಾಜಕಾರಣವನ್ನು ವಿವರಿಸಬೇಕು"[45]

ಆಗ ರಾಜಕಾರಣದ ಅನೇಕ ಆಯಾಮಗಳು, ಅದರ ಅಸಂಖ್ಯ ಹಿಡಿತದ ಕ್ರಮಗಳು ಅರಿವಾಗುತ್ತವೆ. ಆ ಕಾರಣದಿಂದಾಗಿಯೆ ಡಿ.ಆರ್.ನಾಗರಾಜ್‌ರವರ ಕೃತಿಗಳಲ್ಲಿ ಈ ಬಗೆಯ ಅನ್ಯ ಜ್ಞಾನಶಿಸ್ತುಗಳ ಮೂಲಕ ಸಾಂಸ್ಕೃತಿಕ ಅಧ್ಯಯನದ ಸಂಶ್ಲೇಷಿತ ಮಾದರಿಯೊಂದು ರೂಪಗೊಂಡಿರುವುದನ್ನು ಕಾಣಬಹುದು.

ಅಭಿವೃದ್ಧಿಯ ಹೆಸರಿನಲ್ಲಿ ಆಧುನಿಕ ಪ್ರಭುತ್ವದ ದಮನದ ಮಾದರಿಗಳನ್ನು ಡಿ.ಆರ್.ನಾಗರಾಜ್‌ರವರು ಹೀಗೆ ವಿಶ್ಲೇಷಿಸುತ್ತಾರೆ : "ಯಾವುದೇ ದೇಶದ ರಾಷ್ಟ್ರ – ಪ್ರಭುತ್ವವು ಅನುಸರಿಸುವ ಅಭಿವೃದ್ಧಿ ನೀತಿಗಳು ಹೆಚ್ಚಾಗಿ ಅಲ್ಪಸಂಖ್ಯಾತರ ಸಾಮಾಜಿಕ ಹಿತಾಸಕ್ತಿಗಳನ್ನು ಗೊತ್ತಿದ್ದೋ ಗೊತ್ತಿಲ್ಲದೆಯೋ ಕಡೆಗಣಿಸುತ್ತಿರುತ್ತವೆ. ಸಾಮಾನ್ಯವಾಗಿ, ರಾಷ್ಟ್ರೀಯ ಮಟ್ಟದಲ್ಲಿ ಕ್ರಿಯಾಶೀಲವಾದ ಅಭಿವೃದ್ಧಿಯ ಅಂತರ್ಗತ ಕಾರ್ಯತಂತ್ರದ ಕಾರಣದಿಂದಾಗಿ ಅಲ್ಪಸಂಖ್ಯಾತರು ಅನೌಪಚಾರಿಕ ಕ್ಷೇತ್ರಕ್ಕೆ ಎಸೆಯಲ್ಪಡುತ್ತಾರೆ"[46]

ಈ ಬಗೆಯ ಶೋಚನೀಯ ಸ್ಥಿತಿಗೆ ಪ್ರಭುತ್ವಗಳು ಪ್ರಜೆಗಳನ್ನು ಗುರಿಯಾಗಿಸುತ್ತವೆ. ಪ್ರಭುತ್ವ ಹಾಗೂ ಬಂಡವಾಳಶಾಹಿ ಧೋರಣೆಗಳು ಒಟ್ಟುಗೂಡಿದಾಗ ಇನ್ನೂ ಅಸಹನೀಯ ದಮನದ ಮಾದರಿಗಳು ರೂಪುಗೊಳ್ಳುತ್ತವೆ ಎಂಬುದನ್ನು ಮುಂದುವರೆದು ಅವರು ಮಂಡಿಸುತ್ತಾರೆ : "ಅದು ತನ್ನ ಹಿಂದಿನ ಜೀವನಕ್ರಮಗಳಿಗಿದ್ದ ರಂಜಕತೆಯನ್ನು, ಅಲ್ಲ ನಿಗೂಢ ಪ್ರಭಾವಳಿಯನ್ನು, ನಿರ್ನಾಮ ಮಾಡಿಬಿಡುತ್ತದೆ. ಹಿಂದಿನ ಜಗತ್ತುಗಳ ಜೋಗಿ ಜಂಗಮರು ಕಚಡಾ ಭಿಕ್ಷುಕರಾಗಿಬಿಡುತ್ತಾರೆ. ಯಾತ್ರೆಗಳು ತಮ್ಮ ಅರ್ಥ ಕಳೆದುಕೊಳ್ಳುತ್ತವೆ. ನಾಗರೀಕತೆಯ ಕನಸುಗಳು ಕರಕರಗಿ ಕುರೂಪಿ ವಾಸ್ತವವೊಂದು ಮಾತ್ರ ಉಳಿದುಕೊಳ್ಳುತ್ತದೆ"[47] ಎನ್ನುತ್ತಾರೆ. ಏಕೆಂದರೆ, ತನ್ನ ಪರಿಸರದಿಂದ ಅನ್ಯರಾಗುವ, ಅನಾಥತೆಯನ್ನು ಬೃಹತ್ ಕೈಗಾರಿಕೆ ಹಾಗೂ ಬಂಡವಾಳಶಾಹಿ ನಾಗರೀಕತೆಯ ಆಧುನಿಕತೆ ದೇಶೀ ಜೀವನ ಮಾದರಿಗಳ ಮೇಲೆ ಹೇರುತ್ತದೆ.

ಬಂಡವಾಳಶಾಹಿ ಯುಗದಲ್ಲಿ ಸಾಂಸ್ಕೃತಿಕ ಆಯಾಮಗಳ ಪ್ರಾಮುಖ್ಯತೆಯನ್ನು ಡಿ.ಆರ್.ನಾಗರಾಜ್ ರವರ ಮುಂದಿನ ಮಾತುಗಳಲ್ಲಿ ಕಾಣಬಹುದು. "ಇಲ್ಲಿ ಅಡಕವಾಗಿರುವ ಪ್ರಶ್ನೆಗಳು ನಿಜವಾಗಿಯೂ ಜಟಿಲವಾದದ್ದು. ಅಂತಾರಾಷ್ಟ್ರೀಯ ಬಂಡವಾಳವನ್ನು ಹಾತೊರೆದು ಕರೆಯುತ್ತಿರುವ ಈಗಿನ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ಇದನ್ನು ಪರೀಕ್ಷಿಸಬೇಕು. ಈಗ ನಾಡಿನ ಅಭಿವೃದ್ಧಿಗೆ, ಈಗಿರುವ ಅಭಿವೃದ್ಧಿ ಮಾದರಿಗಳ ಕಾರಣಕ್ಕಾಗಿ ಹೊರಗಿನ ಬಂಡವಾಳ ಬೇಕು. ಅಂಥ ಬಂಡವಾಳವನ್ನು ನಿರಾಕರಿಸಿ ನಾಡನ್ನು ಆರ್ಥಿಕವಾಗಿ ಕಟ್ಟುವ ಆರ್ಥಿಕ ಏಕಾಂತತೆ ಕಾರ್ಯಕ್ರಮಗಳು ಈಗ ತುಂಬ ಅಪ್ರಸ್ತುತ ಎಂಬಂತೆ ಕಾಣುತ್ತಿವೆ. ಹೀಗಾಗಿ, ಈ ಬಂಡವಾಳಕ್ಕೆ ಸಾಮಾಜಿಕ ಅಥವಾ ಸಾಂಸ್ಕೃತಿಕ ನಿಯಂತ್ರಣ ಖಂಡಿತವಾಗಿ ಬೇಕೇಬೇಕು. ಸಾಂಸ್ಕೃತಿಕ ನಿಯಂತ್ರಣವಿರದ ಬಂಡವಾಳ ಇಡೀ ಸಮಾಜವನ್ನೇ ನಿರ್ಮೂಲನ ಮಾಡುತ್ತದೆ. ಈಗಿನ ಆರ್ಥಿಕ ನೀತಿಯಲ್ಲಿ ಈ ಸಾಮಾಜಿಕ ಅಥವಾ ಸಾಂಸ್ಕೃತಿಕ ನಿಯಂತ್ರಣದ ಅಂಶವೇ ಇಲ್ಲ. ರಾಜಕೀಯ ನಿಯಂತ್ರಣ ಕೂಡ ಇಲ್ಲವಾಗಿದೆ"[48] ಈ ಬಗೆಯಲ್ಲಿ ವಿವೇಚನೆ ರಹಿತ ವಿದೇಶಿ ಬಂಡವಾಳ ಹೂಡಿಕೆಗೆ ಕರ್ನಾಟಕವನ್ನು ಮುಕ್ತವಾಗಿಸುವ ಮೂಲಕ ಸಾಂಸ್ಕೃತಿಕ ಹಾಗೂ ರಾಜಕೀಯ ಅರಾಜಕತೆಯನ್ನು ಹುಟ್ಟುಹಾಕಲಾಗುತ್ತಿದೆ.

ಗಾಂಧಿ ಪ್ರಣೀತ ವಿಚಾರಧಾರೆಗಳಿಗೆ ವ್ಯತಿರಿಕ್ತವಾಗಿ ನಿರಂತರವಾಗಿ ನಡೆಯುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಹಿಂದೆ ಅಸಂಖ್ಯ ಚಳುವಳಿ, ಹೋರಾಟಗಳನ್ನು ನಡೆಸಿ ಹೊರದೂಡಿದ ವಸಾಹತುಶಾಹಿಗಳನ್ನು ಈಗ ಕೆಂಪು ಹಾಸಿನ ಮೇಲೆ ಆಹ್ವಾನಿಸುತ್ತಿರುವುದನ್ನು ಡಿ.ಆರ್.ನಾಗರಾಜ್‌ರವರು ಈ ಭಾಗದಲ್ಲಿ ಪ್ರಶ್ನಿಸುತ್ತಿದ್ದಾರೆ. ಆಧುನಿಕ ಸಂದರ್ಭದಲ್ಲಿ ಪ್ರಭುತ್ವವು "ಕಲ್ಯಾಣ ರಾಜ್ಯದ ತತ್ವವೇ ಪ್ರಜೆಗಳಲ್ಲಿ ಎಲ್ಲವೂ ಸರ್ಕಾರದ ಹೊಣೆ ಎಂಬ ಭಾವನೆ ಬೆಳೆಸಿ ಬಿಡುತ್ತದೆ. ತಮ್ಮ ಮನೆಯಾಚೆಗಿನ ಎಲ್ಲ ವ್ಯವಹಾರಗಳೂ ತನಗೆ ಸಂಬಂಧಿಸಿದ್ದಲ್ಲ ಎಂಬ ನಿಲುವು ಒಂದು ರೀತಿಯದು. ಅದು ಕಡೆಗೆ ಮನೆಯೊಳಗಿನ ವ್ಯವಹಾರಗಳನ್ನು ಕೂಡ ಅಂತಿಮವಾಗಿ ಆಳುವ ಶಕ್ತಿಗಳೇ ನೋಡಿಕೊಳ್ಳಬೇಕು ಎಂಬ ನಿಲುವಾಗಿ ಬಿಡುತ್ತದೆ"[49] ಈ ಬಗೆಯಲ್ಲಿ ಪ್ರಜೆಗಳನ್ನು ನಿಷ್ಕ್ರಿಯ ಫಲಾನುಭವಿಗಳೆಂಬಂತೆ ಚಿತ್ರಿಸುತ್ತಲೆ, ಎಲ್ಲವನ್ನೂ ನಿಯಂತ್ರಿಸಲಾರಂಭಿಸುತ್ತದೆ.

ಚಳವಳಿಗಳು ಜೀವಂತಿಕೆಯ ಸಂಕೇತ. ವ್ಯವಸ್ಥೆಯ ಅನೇಕ ಆಕ್ರಮಣಕಾರಿ, ಜನವಿರೋಧಿ ನಿಲುವುಗಳನ್ನು ಖಂಡಿಸಿ ಚಳವಳಿಗಳು ನಡೆಯುತ್ತಿರುತ್ತವೆ. ಆದರೆ ಎಲ್ಲವೂ ಸರ್ಕಾರದ ನಿಯಂತ್ರಣದಲ್ಲಿದೆ ಎಂಬ ಕಾರಣಕ್ಕೆ ಜನತಂತ್ರದಲ್ಲಿ ಚಳವಳಿಗಳು ಕಾವು

ಕಳೆದುಕೊಳ್ಳಲಾರಂಭಿಸುತ್ತವೆ. ಡಿ.ಆರ್.ನಾಗರಾಜ್‌ರವರ ಪ್ರಕಾರ : "ಭಾರತೀಯ ಸಮಾಜದಲ್ಲಿ ಇದೇ ರೀತಿಯ ದುರಂತ ಸಂಭವಿಸುತ್ತಿರುವುದನ್ನು ಕಾಣಬಹುದು. ಜನತೆಯ ಚಳವಳಿಗಳೂ ಇಲ್ಲದಿರುವ ಕಡೆಗಳಲ್ಲಂತೂ ಇದು ತೀರಾ ವಿಕಾರರೂಪಕ್ಕೆ ತಿರುಗಿದೆ. ಜನತೆಯ ಚಳವಳಿ, ಹೋರಾಟ ಜನತೆಯಲ್ಲಿ ತಮ್ಮ ಬದುಕಿಗೆ ತಾವೇ ಜವಾಬ್ದಾರರು ಎಂಬ ಪ್ರಜ್ಞೆಯನ್ನು ಮೂಡಿಸುತ್ತದೆ"[50]

ಏಕೆಂದರೆ ಚಳವಳಿಗಳು ನಿರ್ವಸಾಹತೀಕರಣದ ಮೂಲ ಧಾರೆಗಳು. ಸ್ವಾತಂತ್ರ್ಯ ಹೋರಾಟದಲ್ಲಿ ಈ ಬಗೆಯ ಅಸಂಖ್ಯ ಚಳುವಳಿಗಳು, ಹೋರಾಟಗಳು, ಸತ್ಯಾಗ್ರಹಗಳು ಮುಂತಾದವುಗಳು ನಿರಂತರವಾಗಿ ನಡೆದ ಉದಾಹರಣೆಗಳಿವೆ. ಆದರೆ ಪ್ರಜಾಪ್ರಭುತ್ವದ ಸರ್ಕಾರಗಳು ಈ ಬಗೆಯ ಚಳವಳಿಗಳನ್ನು 'ಹೈಜಾಕ್' ಮಾಡುತ್ತವೆ. ಒಂದು ಬಗೆಯ ನಿರಂಕುಶ ಪ್ರಭುತ್ವದಂತೆ ಮುಂದುವರೆಯುವ ಸಾಧ್ಯತೆಗಳಿಗೆ ಆಧುನಿಕ ಸಂದರ್ಭ ಅವಕಾಶ ಕೊಡುತ್ತಿದೆಯೇನೋ?

ಜಾಗತೀಕರಣದ ಆರಂಭದ ಘಟ್ಟದಲ್ಲೇ ಅದು ತೃತೀಯ ಜಗತ್ತಿನಲ್ಲಿ ಉಂಟುಮಾಡಬಲ್ಲ ಅನಾಹುತಗಳನ್ನು ಹಾಗೂ ಅದಕ್ಕೆ ಪರ್ಯಾಯಗಳನ್ನು ಕಂಡುಕೊಳ್ಳುವ ಸಾಧ್ಯತೆಗಳನ್ನು ಡಿ.ಆರ್.ನಾಗರಾಜ್‌ರವರ ಲೇಖನಗಳಲ್ಲಿ ಕಾಣಬಹುದು. ಅವರ ಪ್ರಕಾರ : "ಸಂಕಷ್ಟದ ಸನ್ನಿವೇಶಗಳಿಗೆ ಹಾಗೂ ಐತಿಹಾಸಿಕ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುವಲ್ಲಿ ಪ್ರತಿಯೊಂದು ರಾಜಕೀಯ ಸಮುದಾಯದ ಪ್ರತಿಭಾಪ್ರಜ್ಞೆಯೂ ತನ್ನ ಭೂತಕಾಲವನ್ನು ಆಧರಿಸಿರುತ್ತದೆ, ಆ ಭೂತಕಾಲದ ಹಲವಾರು ರೂಪಗಳನ್ನು ಬಳಸಿಕೊಂಡು ವರ್ತಮಾನದ ತನ್ನ ಪತಿಸ್ಪಂದನೆಯ ಆಕೃತಿಗಳನ್ನು ಪುನಾರೂಪಿಸಿ ಕೊಳ್ಳುತ್ತಿರುತ್ತಿದೆ"[51].

ಜಾಗತೀಕರಣವು ಈ ಬಗೆಯ ಸಂಕಷ್ಟದ ಸನ್ನಿವೇಶಗಳಲ್ಲೊಂದು. ಅದನ್ನು ಎದುರಿಸುವಲ್ಲಿ ದೇಶೀ ಸಮುದಾಯಗಳು ತನ್ನ ಪ್ರತಿಭಾಪ್ರಜ್ಞೆಯು ಭೂತಕಾಲದ ರೂಪಗಳನ್ನು ಜಾಗತೀಕರಣದೆದುರು ಮಂಡಿಸುವ ಕ್ರಮದ ಶೋಧದಲ್ಲಿ ಡಿ.ಆರ್.ನಾಗರಾಜ್‌ರವರ ಕೇದ್ರ ಚಿಂತನೆಗಳಿರುವುದನ್ನು ಕಾಣಬಹುದು.

ಪ್ರಸ್ತುತ ಸಂದರ್ಭದಲ್ಲೂ ಜಾಗತೀಕರಣವು ಉದಾರೀಕರಣ, ಖಾಸಗೀಕರಣಗಳೆಂಬ ಅವಳಿ ಸೋದರರೊಡನೆ, ತೃತೀಯ ಜಗತ್ತಿನ ಎಲ್ಲ ಬಗೆಯ ಬಹುತ್ವದ ಮಾದರಿಗಳನ್ನು ನಿರಾಕರಿಸಿ, ಏಕರೂಪಿತ ಜೀವನ ಕ್ರಮವನ್ನು ಹೇರುತ್ತಿರುವುದನ್ನು ಕಾಣಬಹುದು. ಎಲ್ಲ ನಗರಗಳಲ್ಲೂ ಶಾಪಿಂಗ್ ಮಾಲ್‌ಗಳು,

ಕಾಲ್‌ಸೆಂಟರ್‌ಗಳು, ಬಹುರಾಷ್ಟ್ರೀಯ ಕಂಪನಿಗಳ ವಿಸ್ತೃತ ಶಾಖೆಗಳು, ವಿಶೇಷ ವಿತ್ತ ವಲಯಗಳು ದೇಶೀ ಜನರ ಜೀವನವನ್ನು ನಿಯಂತ್ರಿಸುತ್ತಿವೆ. ಈ ಬಗೆಯ ನಿಯಂತ್ರಣವನ್ನು ಸ್ವತಂತ್ರ ದೇಶಗಳು ಅನುಭವಿಸಬೇಕಾಗಿ ಬಂದಿರುವುದು ದುರಂತ. ಆದರೆ ಇದರಿಂದ ಬಿಡುಗಡೆಯ ಸಾಧ್ಯತೆಯೆ ಇಲ್ಲವೇನೋ ಎಂಬಷ್ಟು ಗಾಢವಾಗಿ ಆಕ್ರಮಿಸಿಕೊಳ್ಳುತ್ತಿರುವ, ಈ ಪ್ರಕ್ರಿಯೆಯಿಂದ ಬಿಡುಗಡೆಯೆಡೆಗೆ ಇರುವ ಕಾಲುದಾರಿಗಳ ಬಗ್ಗೆ ಡಿ.ಆರ್.ನಾಗರಾಜ್‌ರವರು ದೇಶೀ ಜೀವನ ಕ್ರಮಗಳ ಬಹುತ್ವದ ಮಾದರಿಗಳಲ್ಲಿ ನಂಬಿಕೆ ಇರಿಸಿದ್ದರು. ಅವರ ಪ್ರಕಾರ : "ಇಂಥದೊಂದು ಅನುಭವವನ್ನು ಅರ್ಥೈಸಿಕೊಳ್ಳುವಲ್ಲಿ ರಾಜಕೀಯ ಸಮುದಾಯಗಳಿಗೆ ಸಹಾಯಕವಾಗುವ ಸೈದ್ಧಾಂತಿಕ ಹಾಗೂ ಕ್ರಿಯಾತ್ಮಕ ಮಾದರಿಗಳೆರಡೂ ಗಾಂಧೀಯಂಥವರಲ್ಲಿ ಮಾತ್ರ ಅತ್ಯಂತ ಸ್ಫುಟವಾಗಿ ಕಾಣುತ್ತವೆ. ಈ ನಿಟ್ಟಿನಲ್ಲಿ ಗಾಂಧಿಯ ಪ್ರಭಾವ ಎಷ್ಟು ಗಾಢವಾದುದು ಹಾಗೂ ಸಾರ್ವಕಾಲಿಕವಾದುದು ಎಂದರೆ ಹಳೆಯ ಜಾಗತೀಕರಣದ ಯೋಜನೆಗಿಂತ ಹಲವು ಭಿನ್ನರೀತಿಗಳಲ್ಲಿ ಕೆಲಸ ಮಾಡುವ ಹೊಸ ಜಾಗತೀಕರಣದ ಯೋಜನೆಯನ್ನು ವ್ಯಾಖ್ಯಾನಿಸುವಲ್ಲಿಯೂ ಗಾಂಧೀಯ ಮಾದರಿಯೆ ಅತ್ಯಂತ ಉಪಯುಕ್ತವೂ ಶಕ್ತವೂ ಆಗಿ ಕಂಡು ಅದುವೆ ಇಂದು ಹೆಚ್ಚು ಬಳಕೆಯಾಗುತ್ತಿದೆ"[52]

ಏಕೆಂದರೆ ವಸಾಹತು ಶಾಹಿಗೆ ಪ್ರತಿಕ್ರಿಯಿಸುವ ಸಂದರ್ಭದಲ್ಲಿ ಗಾಂಧಿಯವರು ಮಂಡಿಸಿದ ಗುಡಿ ಕೈಗಾರಿಕೆ, ಗ್ರಾಮ ಸ್ವರಾಜ್ಯ, ಸ್ವಾವಲಂಬನೆ, ಖಾದಿ ಹಾಗೂ ಗ್ರಾಮೋದ್ಯೋಗದ ದೇಶೀದರ್ಶನಗಳು ಭಾರತದಂತಹ ದೇಶಗಳ ದೇಶೀ ಜೀವನ ಪದ್ಧತಿಯನ್ನು ಆಧಾರವಾಗಿಟ್ಟುಕೊಂಡೆ ರೂಪಿಸಲಾದ ಕೆಲವು ಪರ್ಯಾಯಗಳು, ಗಾಂಧಿಯವರಿಗೆ ಬ್ರಿಟಿಷರಿಂದ ಬಿಡುಗಡೆ ಹೊಂದುವುದೆಂದರೆ, ಅದು ಕೇವಲ ರಾಜಕೀಯ ಬಿಡುಗಡೆ ಎಂಬ ಭ್ರಮೆ ಇರಲಿಲ್ಲ. ವಸಾಹತುಶಾಹಿಗಳ ಆಡಳಿತ ಕ್ರಮ ಮುಂದೆ ತಂದೊಡ್ಡಬಹುದಾದ ಭಾಷೆ, ಶಿಕ್ಷಣ, ಧರ್ಮ, ಆರ್ಥಿಕ, ಚಿಂತನಕ್ರಮಗಳಿಂದ ರಾಜಕೀಯವಾಗಿ ಬಿಡುಗಡೆ ಹೊಂದಿದಂತೆ ಮುಕ್ತವಾಗುವುದು ಹೇಗೆಂಬ ಚಿಂತನೆ ಅವರ 'ಹಿಂದ್ ಸ್ವರಾಜ್' ಕೃತಿಯಲ್ಲಿದೆ.

ವಸಾಹತುಶಾಹಿ ಆಳ್ವಿಕೆ ಹಾಗೂ ಜಾಗತೀಕರಣಗಳು ಅನೇಕ ಆಯಾಮಗಳಲ್ಲಿ ಭಾರತೀಯ ಸಮಾಜವನ್ನು ಸ್ಥಿತ್ಯಂತರಗಳಿಗೆ ನಿರಂತರವಾಗಿ ಈಡು ಮಾಡುತ್ತಿವೆ. ಇದನ್ನು ಗುರುತಿಸುವ ಡಿ.ಆರ್.ನಾಗರಾಜ್‌ರವರು ಹೀಗೆ ಹೇಳುತ್ತಾರೆ: "ಭಾರತೀಯ ರಾಜಕಾರಣದ ವಿಷಯದಲ್ಲಿ ಎರಡು ಪ್ರಮುಖ ಪ್ರತಿಸ್ಪಂದನೆಗಳನ್ನು ಗುರುತಿಸಬಹುದು. ಒಂದು,

ಸಂಪ್ರದಾಯಸ್ಥ ಹಿಂದೂ ಅಭಿವ್ಯಕ್ತಿ, ಇದು ತಾನು ಸಾಂಸ್ಕೃತಿಕ ದೇಶೀವಾದಿಯೆನ್ನುವ ಸೋಗನ್ನು ತೋರುವಂಥದ್ದು, ಇದನ್ನು ನಾನು ಸಂಘ-ಸ್ವದೇಶಿ ಪ್ರತಿ ಸ್ಪಂದನೆಯೆಂದು ಕರೆಯುತ್ತೇನೆ. ಹಿಂದೂವಾದಿ ರಾಜಕೀಯ ಸಂಘಟನೆ ಹಾಗೂ ಚಳವಳಿಗಳ ಸಮೂಹವಾದ ಬಲಪಂಥೀಯ ಸಂಘ ಪರಿವಾರದ ಅಂಗಸಂಸ್ಥೆಯಾದ ಸ್ವದೇಶಿ ಜಾಗರಣ ಮಂಚ ಇಂಥದೊಂದು ಪ್ರಾತಿನಿಧಿಕ ಮಾದರಿ. ಎರಡನೆಯದು, ಆರ್ಥಿಕ ಉದಾರೀಕರಣದ ನೀತಿಯಿಂದ ನೇರವಾಗಿ ಸಂಕಷ್ಟಕ್ಕೊಳಗಾದ; ಸಮುದಾಯಗಳ ರಾಜಕೀಯಾತ್ಮಕ ಹೋರಾಟದ ಅಭಿವ್ಯಕ್ತಿ. ಕರ್ನಾಟಕದ ರೈತ ಸಂಘ ಈ ಆಂದೋಲನದ ಮುಂಚೂಣಿಯಲ್ಲಿದೆ; ಅದರ ಅತ್ಯುಚ್ಚ ನಿದರ್ಶನವಾಗಿದೆ"[53] ಅವರ ಈ ಅಭಿಪ್ರಾಯದಲ್ಲಿ ಸೂಕ್ಷ್ಮವಾಗಿ ವ್ಯಕ್ತವಾಗುತ್ತಿರುವ ಅಂಶವೆಂದರೆ, ಅದು ಧಾರ್ಮಿಕ ಮೂಲಭೂತವಾದವೊಂದು ಜಾಗತೀಕರಣದ ಸಂದರ್ಭದಲ್ಲಿ ಪಡೆಯುತ್ತಿರುವ ಹೊಸ ರೂಪ.

ಮತ್ತೊಂದು ಕಡೆ ಈ ನೆಲದ ಜೊತೆ ನೇರ ಸಂಪರ್ಕ ಹೊಂದಿರುವ ರೈತರುಗಳ ಸಮಸ್ಯೆಗಳು. ಇದರ ಜೊತೆಗೆ ಉದಾರೀಕರಣ ಹಾಗೂ ಖಾಸಗೀಕರಣಗಳ ಕಾರಣಗಳಿಂದಾಗಿ ಇಂದು ಉಂಟಾಗುತ್ತಿರುವ ಆರ್ಥಿಕ, ಉದ್ಯೋಗದ ಅಸಮತೋಲನಗಳು ಮುಖ್ಯವಾದ ಸಮಸ್ಯೆಗಳಾಗಿವೆ. ಏಕೆಂದರೆ ಖಾಸಗಿ ಉದ್ಯೋಗ ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯೆ ನಗಣ್ಯವಾಗಿದೆ. ಸರ್ಕಾರದ ಮೀಸಲಾತಿ ನೀತಿಗಳು ಇಲ್ಲಿ ಅನ್ವಯವಾಗದೆ; ಜಾಗತೀಕರಣದ ಹೆಸರಿನಲ್ಲಿ ಹಿಂದುಳಿದ, ದಲಿತ, ಶೂದ್ರ ವರ್ಗಗಳ ನಿರುದ್ಯೋಗದ ಸಮಸ್ಯೆಗಳನ್ನು ಜಾಗತೀಕರಣವು ಹೆಚ್ಚಿಸುತ್ತಿದೆ.

ಡಿ.ಆರ್.ನಾಗರಾಜ್‌ರವರ ಪ್ರಕಾರ: ಜಾಗತೀಕರಣದ ಅನೇಕ ಸುಳಿಗಳಿಗೆ ಸಿಲುಕಿ "ಕರ್ನಾಟಕದ ಬದುಕು ಕೊಂಚ ಹೆಚ್ಚು ಅಧೀರವಾಗಿದೆ. ಕಾರಣ, ಜೀವನಕ್ರಮದ ಹಳೆಯ ಒಳಧಾರೆಗಳು ಕಳಚಿ ಬೀಳುತ್ತಿರುವುದು. ಇದು ಈಗಿನ ಜಾಗತಿಕ ಅಭಿವೃದ್ಧಿಯ ತರ್ಕ. ಇದು ಹೀಗೆ ಮುಂದುವರೆದರೆ ಕರ್ನಾಟಕ ಪಾಶ್ಚಿಮಾತ್ಯ ನಾಗರೀಕತೆಯ ಅಸಂಬದ್ಧ ನಕಲಾಗಿ ಬಿಡುತ್ತದೆ. ಒಂದೇ ಎರಕದಲ್ಲಿ ಸಮಾಜಗಳನ್ನು ಕಟ್ಟುವುದೇ ಈಗಿನ ನಾಗರಿಕತೆಯ ಭಯಾನಕತೆ. ಆಧುನಿಕ ಬಂಡವಾಳಶಾಹಿ, ಕೇಂದ್ರೀಕೃತ ಉನ್ನತ ತಾಂತ್ರಿಕ ನಾಗರೀಕತೆಗಳು ಬಹುಮುಖೀ ಸಂಸ್ಕೃತಿಗಳನ್ನು ಸಹಿಸುವುದಿಲ್ಲ. ಬಹುಮುಖೀ ಧಾರೆಗಳನ್ನು ಇದುವರೆಗೆ ಕಾಪಾಡಿಕೊಂಡು ಬಂದಿರುವ ಕರ್ನಾಟಕ ತನ್ನ ವಿಶಿಷ್ಟ ಗುರುತು ಚಹರೆ ಕಳೆದುಕೊಳ್ಳಬೇಕಾಗುತ್ತದೆ"[54]

ಈ ಬಗೆಯಲ್ಲಿ ವ್ಯವಸ್ಥಿತವಾಗಿ ಏಕರೂಪೀಕರಣವೆ ಜಾಗತೀಕರಣದ ಅಂತಿಮ ಉದ್ದೇಶ. ಹಾಗೆ ಆದಾಗ ಮಾತ್ರ, ಅದರ ಬೃಹತ್ ಕೈಗಾರಿಕೆಗಳಿಗೆ ಉತ್ಪಾದನಾ ಸಾಮರ್ಥ್ಯ ಹೆಚ್ಚು. ಲಾಭದ ಪ್ರಮಾಣ ಹೆಚ್ಚುವುದು. ಆದ್ದರಿಂದ ವ್ಯವಸ್ಥಿತವಾಗಿ ತೃತೀಯ ಜಗತ್ತಿನ ಅಸಂಖ್ಯ ಬಹುಮುಖೀ ಸಂಸ್ಕೃತಿಗಳನ್ನು ಒಂದೇ ಎರಕದ ಅಚ್ಚಿನ ಆಕಾರಕ್ಕೆ ಇಳಿಸುವ ಪ್ರಯತ್ನವನ್ನು ಜಾಗತೀಕರಣದ ಅದೃಶ್ಯ ಶಕ್ತಿಗಳು ಮಾಡುತ್ತಿವೆ. ವಸಾಹತುಶಾಹಿ ಕಾಲದಂತೆ, ಇಂದು ದೇಶದಲ್ಲೆ ಕುಳಿತು ಆಡಳಿತದ ನಿಯಂತ್ರಣ ನಡೆಸಬೇಕಾಗಿಲ್ಲ. ಎಲ್ಲವನ್ನು ತನ್ನ ಕಣ್ಣಾಗವಲಿನಲ್ಲೆ ಇಟ್ಟು ಕಾಯುವ ಬದಲು ಆರ್ಥಿಕವಾಗಿ ದೇಶವನ್ನು ಅವಲಂಬಿಸುವಂತೆ ಮಾಡಿದರೆ ಸಾಕು. ಅದಕ್ಕಾಗಿ ದೇಶೀ ಉತ್ಪಾದನಾ ಕ್ರಮಗಳನ್ನು ದಮನ ಮಾಡಬೇಕು. ಈ ಕಾರಣಗಳಿಂದ ತೃತೀಯ ಜಗತ್ತಿನ ಉತ್ಪಾದನಾ ಕ್ರಮಗಳನ್ನು ಅಮೆರಿಕ ಹಂತಹಂತವಾಗಿ ಇಲ್ಲವಾಗಿಸಲಾಗುತ್ತಿದೆ.

ಬೌದ್ಧಿಕ ಹಕ್ಕು ಇಂದು ಜಾಗತೀಕರಣದ ಅಸ್ತ್ರವಾಗಿದೆ. ಪೇಟೇಂಟ್ ಎಂಬ ಹೆಸರಿನಲ್ಲಿ ನಮ್ಮ ಮನೆಯ ಹಿತ್ತಲಲ್ಲಿ ಬೆಳೆದ ಬೇವಿನ ಗಿಡವನ್ನು ನಿರ್ದಿಷ್ಟ ಉದ್ದೇಶಗಳಿಗಾಗಿ ಬಳಸಲು ಹಕ್ಕನ್ನು ಮತೊಬ್ಬರಿಂದ ಪಡೆಯಬೇಕಾದ ಪರಿಸ್ಥಿತಿಗೆ ಜಾಗತೀಕರಣವು ತಂದಿತ್ತಿದೆ. ರೈತರ ಮತ್ತೊಂದು ಸಮಸ್ಯೆಯಾಗಿರುವುದು, ನಿರ್ಬೀಜೀಕರಣ. ಜವಾರಿ ತಳಿಗಳಲ್ಲಿ ಇದುವರೆಗೆ ಬಿತ್ತಿದ ಬೀಜಗಳಿಂದ ಪಡೆದ ಧಾನ್ಯಗಳಲ್ಲೆ, ಅವಶ್ಯಕ ಪ್ರಮಾಣದ ಕಾಳುಗಳನ್ನು ಬೀಜಕ್ಕೆ ಇರಿಸಿಕೊಳ್ಳುವುದು ರೈತರ ಪ್ರಾಚೀನ ಸಂಪ್ರದಾಯವಾಗಿತ್ತು. ಆದರೆ ಆಧುನಿಕ ಹೈಬ್ರಿಡ್ ತಳಿಗಳಿಂದಾಗಿ, ಪ್ರತಿಬಾರಿ ಬೀಜಕೊಳ್ಳಲು ಸಾವಿರಾರು ರೂಗಳನ್ನು ಪ್ರತಿವರ್ಷ ತೆರಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ.

ಈ ಬಗೆಯ ಅಸಂಖ್ಯ ದಮನದ ಮಾದರಿಗಳಿಂದಾಗಿ ಜಾಗತೀಕರಣವು ಒಂದು ಅರಗಿಸಿಕೊಳ್ಳಲಾಗದ ಪ್ರಕ್ರಿಯೆಯಾಗಿದೆ. ಇದನ್ನು ಮುಖಾಮುಖಿಯಾಗಲು ಗಾಂಧಿಯವರ ಮಾದರಿಯನ್ನು ಡಿ.ಆರ್.ನಾಗರಾಜ್‌ರವರು ನಮ್ಮ ಮುಂದಿಡುತ್ತಾರೆ.

ಇವೆಲ್ಲವುಗಳಿಂದ ಬಿಡುಗಡೆ ಹೊಂದುವುದೇ ನಿಜವಾದ ನಿರ್ವಸಾಹತೀಕರಣದ ಮುಖ್ಯವಾದ ಆಶಯವಾಗಿದ್ದು, ಅದರೆಡೆಗಿನ ಸೂಕ್ಷ್ಮವಾದ ವಿವೇಚನೆಗಳನ್ನು ಡಿ.ಆರ್.ನಾಗರಾಜ್ ರವರ ಚಿಂತನೆಗಳಲ್ಲಿ ಕಾಣಬಹುದು. ಈ ಬಗೆಯ ನಿರ್ವಸಾಹತೀಕರಣದ ಸಾಧ್ಯತೆಗಳನ್ನು ಸಾಹಿತ್ಯಕ, ಸಾಮಾಜಿಕ, ಆರ್ಥಿಕ, .ರಾಜಕೀಯ, ಸಾಂಸ್ಕೃತಿಕ ವಿಷಯಗಳನ್ನು ಅವರ ಸಂಸ್ಕೃತಿ ವಿಮರ್ಶೆಯ ಬಹುಪಾಲು ಲೇಖನಗಳಲ್ಲಿ

ಕಾಣಬಹುದು.

ಉಲ್ಲೇಖಗಳು

1. ಡಿ.ಆರ್.ನಾಗರಾಜ್, ಅಮೃತ ಮತ್ತು ಗರುಡ, ಎನ್.ಮನು ಚಕ್ರವರ್ತಿ, ಪ್ರಸ್ತಾವನೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2003, ಪು. 8
2. ಅದೇ, ಪು. 10
3. ಜಿ.ಎಸ್.ಆಮೂರ, ಡಿ.ಆರ್.ನಾಗರಾಜರ ವಿಮರ್ಶೆ, ಕನ್ನಡ ಅಧ್ಯಯನ, ಸಂ: ಎ.ವಿ.ನಾವಡ, ಸಂ.10, ಸಂಚಿಕೆ 1 ಮತ್ತು 2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು. 25
4. ರಾಜೇಂದ್ರ ಚೆನ್ನಿ, ಡಿ.ಆರ್.ನಾಗರಾಜ, ಅರ್ಥಕ್ಕೆ ಬಿಟ್ಟು ಹೋದ ಚಿಂತಕ, ಕನ್ನಡ ಅಧ್ಯಯನ, ಚಳಿ ಸಂಚಿಕೆ, ಸಂಪುಟ 9, ಸಂಚಿಕೆ 2 ಸಂ:ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003, ಪು. 90
5. ಡಿ.ಆರ್.ನಾಗರಾಜ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಬೆನ್ನುಡಿ, ಯೂ.ಆರ್.ಅನಂತಮೂರ್ತಿ, ಅಕ್ಷರ ಪ್ರಕಾಶನ, ಹೆಗ್ಗೋಡು, 2006.
6. ಮೂ: ಡಿ.ಆರ್.ನಾಗರಾಜ್, ಅ: ಎಂ.ಎಸ್.ಆಶಾದೇವಿ, ಅನುವಾದಕರ ಮಾತು, ಉರಿ ಚಮ್ಮಾಳಿಗೆ, ವಸಂತ ಪ್ರಕಾಶನ, ಬೆಂಗಳೂರು, 2002 ಪುಟ. 7
7. ಅಶೀಶ್ ನಂದಿ ವಿಚಾರ, ಡಿ.ಆರ್.ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು, 1995.
8. ಅದೇ,
9. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಸಂದರ್ಶನ: ನಟರಾಜ್ ಹುಳಿಯಾರ್, ಸಾಂಸ್ಕೃತಿಕ ವಿಸ್ಮೃತಿಯ ವಿರುದ್ಧ ಅಕ್ಷರ ಚಿಂತನದ ಸ್ವರೂಪ ಕುರಿತ ಒಂದು ಸಂದರ್ಶನ, ಅಕ್ಷರ ಪ್ರಕಾಶನ, ಹೆಗ್ಗೋಡು, ದ್ವಿಮು. 2006, ಪು. 82
10. ಡಿ.ಆರ್.ನಾಗರಾಜ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 33.
11. ಅದೇ,
12. ಅದೇ, ಪು. 34
13. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 82.
14. ಅದೇ, ಪು. 238

15. ಡಿ.ಆರ್.ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 35.
16. ಅದೇ, ಪು. 38
17. ಅದೇ, ಪು. 499
18. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 108
19. ಅದೇ,
20. ಡಿ.ಆರ್.ನಾಗರಾಜ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 29
21. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು.108, 109
22. ಡಿ.ಆರ್.ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 112
23. ಅದೇ, ಪು. 112, 113
24. ಅದೇ, ಪು. 14
25. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004, ಪು. 7
26. ಡಿ.ಆರ್.ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 77
27. ಅದೇ, ಪು. 76, 77
28. ಅದೇ, ಪು. 78
29. ಅದೇ, ಪು. 78
30. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 217
31. ಡಿ.ಆರ್.ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 219
32. ಅದೇ, ಪು. 63

33. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 9

34. ಡಿ.ಆರ್.ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 98

35. ಡಾ.ಡಿ.ಆರ್.ನಾಗರಾಜ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 19, 20

36. ಅದೇ, ಪು. 17

37. ಅದೇ, ಪು. 16

38. ಅದೇ, ಪು. 17

39. ಅದೇ, ಪು. 123

40. ಅದೇ, ಪು. 125

41. ಅದೇ, ಪು. 127

42. ಡಿ.ಆರ್.ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು. 197

43. ಅದೇ, ಪು. 198

44. ಅದೇ, ಪು. 63

45. ಅದೇ, ಪು. 317

46. ಅದೇ, ಪು. 337

47. ಅದೇ,

48. ಅದೇ, ಪು. 346

49. ಅದೇ, ಪು.303, 304

50. ಅದೇ, ಪು. 304

51. ಅದೇ, ಪು. 235

52. ಅದೇ, ಪು. 235, 236

53. ಅದೇ, ಪು. 236

54. ಅದೇ, ಪು. 65, 66

ಅಧ್ಯಾಯ-4

ದೇಶೀವಾದ ಮತ್ತು ನಿರ್ವಸಾಹಿತೀಕರಣದ ಸಾಧ್ಯತೆಗಳು

ದೇಶೀವಾದದ ಚರ್ಚೆಗಳು

'ದೇಶೀವಾದ'ವು 80ರ ದಶಕದಲ್ಲಿ ಪ್ರಚಲಿತಕ್ಕೆ ಬಂದ ಪರಿಭಾಷೆ. ಕೆ.ವಿ.ತಿರುಮಲೇಶ್‌ರವರ ಪ್ರಕಾರ: "ದೇಶೀಯತೆ, ದೇಶೀವಾದ, ಅರ್ಥಾತ್ ನೇಟಿವಿಸಂ ಎಂಬ ಸಿದ್ಧಾಂತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಳೆದ ಒಂದೆರಡು ದಶಕಗಳಿಂದ – ಎಂದರೆ ನವ್ಯದ ಪ್ರಾದುರ್ಭಾವ ಮುಗಿದು ದಲಿತ-ಬಂಡಾಯ ಚಳುವಳಿ ಆರಂಭವಾದಾಗಿನಿಂದ ಕೇಳಿಬರುತ್ತಿರುವ ಮಾತು. ಈ ವಾದದ ಪ್ರಕಾರ ಕನ್ನಡ ಸಾಹಿತ್ಯದ ಮೇಲೆ ಪಾಶ್ಚಾತ್ಯ ಪ್ರಧಾನವಾಗಿ ಇಂಗ್ಲೀಷಿನ, ಪ್ರಭಾವ ಅತಿಯಾಗಿದ್ದು, ಕನ್ನಡ ಸಂಸ್ಕೃತಿಗೆ ಅನ್ಯಾಯವಾಗುತ್ತಿದೆ; ಇದು ವಸಾಹತುಶಾಹಿಯನ್ನು ನಾವಾಗಿಯೇ ಇನ್ನೊಮ್ಮೆ ಆಮದು ಮಾಡಿಕೊಂಡ ಹಾಗೆ; ಇದೇ ನವವಸಾಹತುಶಾಹಿಯೆಂದರೆ, ಇದಕ್ಕೆ ವಿರುದ್ಧವಾಗಿ ನಾವೀಗ ಮರೆತಿರುವ ಅಥವಾ ಇತರರ ಅನುಕರಣೆಯಿಂದ ಬೇಕೆಂದೇ ಅವಗಣಿಸುವ ನಮ್ಮದೇ ಸಂಸ್ಕೃತಿಯ ಮೂಲ ಸೆಲೆಗಳನ್ನು ಪುನರುಜ್ಜೀವನಗೊಳಿಸಿ ನಮ್ಮ ಸಾಹಿತ್ಯವನ್ನು ಬೆಳೆಸುವುದು ಅಗತ್ಯವಾಗಿದೆ. ಮೊದಮೊದಲು ಸೃಜನಶೀಲ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಕೇಳಿ ಬಂದ ಈ ಮಾತು ಆಮೇಲೆ ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿಗೆ ಸಂಬಂಧಿಸಿಯೂ ಕೇಳಿ ಬರಲು ಶುರುವಾಯಿತು"[1]

ಈ ದೃಷ್ಟಿಯಿಂದ ದೇಶೀವಾದವು ಪಶ್ಚಿಮದ ಪ್ರಭಾವದಿಂದ ಬಿಡುಗಡೆಯ ಉದ್ದೇಶದೊಡನೆ, ನವವಸಾಹತುಶಾಹಿಗಳಿಂದಲೂ ಮುಕ್ತವಾಗುವ ಪ್ರಯತ್ನ. ಹಾಗೆಯೇ, ಸಾಹಿತ್ಯ, ಸಂಸ್ಕೃತಿ, ವಿಮರ್ಶಾಕ್ಷೇತ್ರಗಳಲ್ಲಿ ಈ ಬಗೆಯ ಹಂಬಲ ವ್ಯಕ್ತವಾಗುವಲ್ಲಿ ಪಾಶ್ಚಾತ್ಯ ಪ್ರಭಾವಗಳಿಗೆ ತಡೆಯೊಡ್ಡಲು ಈ ಪರಿಭಾಷೆಯು ಬಳಕೆಯಾಗುತ್ತಿದೆ.

ದೇಶೀ ಸಾಹಿತ್ಯ, ಸಂಸ್ಕೃತಿ, ವಿಮರ್ಶಾಕ್ಷೇತ್ರಗಳಲ್ಲಿ ನಡೆದಿರುವ ಈ ಬಗೆಯ ಚರ್ಚೆಗಳಲ್ಲಿ ಪಾಶ್ಚಾತ್ಯ ಪ್ರಭಾವಗಳಿಂದ ಬಿಡುಗಡೆ ಹೊಂದುವ ಗಾಢವಾದ ಹಂಬಲವು ವ್ಯಕ್ತವಾಗುತ್ತಿರುವುದು ಈ ದಿಸೆಯಲ್ಲಿ ಗಮನಾರ್ಹ ಅಂಶ. ನವವಸಾಹತುಶಾಹಿಯ ಅನೇಕ ಪ್ರಭಾವಗಳು ಎದುರಾಗುತ್ತಿರುವ ಸಂದರ್ಭದಲ್ಲಿ ದೇಶೀವಾದವು ಮಂಡಿಸುವ ದೇಶೀ ಮಾದರಿಗಳು ಅನೇಕ ಪ್ರಜಾಸತ್ತಾತ್ಮಕ, ಸಾಮಾಜಿಕ, ರಾಜಕೀಯ, ಆಯಾಮಗಳನ್ನು ಒಳಗೊಂಡ ಪರಿಭಾಷೆಯಾಗಿ ದೇಶೀವಾದವನ್ನು ಪ್ರತಿಪಾದಿಸುತ್ತಿರುವುದು ಮುಖ್ಯವಾಗಿದೆ.

ಆದರೆ ಕೆ.ವಿ.ತಿರುಮಲೇಶ್‌ರವರ ಪ್ರಕಾರ: "ಈ ದೇಶೀಯತೆಯ ಕಲ್ಪನೆ ಕೂಡಾ ಕೇವಲ ಕನ್ನಡದ್ದೆಂದಾಗಲಿ, ಭಾರತೀಯವೆಂದಾಗಲಿ ತಿಳಿದುಕೊಳ್ಳುವಂತಿಲ್ಲ."[2]

ಆದ್ದರಿಂದ ಇದನ್ನು ಶುದ್ಧಾಂಗವಾಗಿ ದೇಶೀ ಅನ್ವೇಷಣೆ ಎನ್ನಲಾಗದು. ಆದರೆ, ಇದರ ಅವಶ್ಯಕತೆ ಇರುವುದಂತೂ ನಿಜ. ದೇಶೀಯತೆ, ದೇಶೀವಾದ ಎನ್ನುವುದು ಅಕಾಡೆಮಿಕ್ ಆಸಕ್ತಿ ಮಾತ್ರವಾಗಿರದೆ, ದೇಶೀ ಜೀವನ ಪದ್ಧತಿಗಳ ಬಹುಮುಖತೆಯನ್ನು ಆಧರಿಸಿರುವುದರಿಂದಾಗಿ ಹಾಗೂ ಅವುಗಳ ಬಹುತ್ವದ ಮಾದರಿಗಳ ಬಗ್ಗೆ ಆರೋಗ್ಯಕರ ಚರ್ಚೆ ನಡೆಯಬೇಕಾದ ಅವಶ್ಯಕತೆಯನ್ನು ಮಂಡಿಸುತ್ತಿರುವ ಕಾರಣಕ್ಕೆ ಈ ಚರ್ಚೆಯು ಮುಖ್ಯವಾಗಿದೆ.

ರಾಜೇಂದ್ರ ಚೆನ್ನಿಯವರ ಪ್ರಕಾರ, "ದೇಶೀವಾದವೆಂದರೆ, ಒಂದು ಸಾಹಿತ್ಯದ ಪ್ರಾದೇಶಿಕ ಸತ್ವವನ್ನು, ಆ ಸಾಹಿತ್ಯವು ಹುಟ್ಟಿಕೊಳ್ಳುವ ಭಾಷಾ ಸಮುದಾಯದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಪ್ರದಾಯದ ವಿಶಿಷ್ಟ ಒಲವುಗಳನ್ನು, ಆ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಆ ಸಾಹಿತ್ಯಕ್ಕೆ ಇರುವ ತನ್ನದೇ ಆದ ಸ್ವಾಯತ್ತತೆಯನ್ನು ಗುಣಾತ್ಮಕವೆಂದು ಒಪ್ಪಿಕೊಳ್ಳುವ ಧೋರಣೆ ಅಥವಾ ಸಿದ್ಧಾಂತ."[3]

ಆದರೆ, ಇದು ಪ್ರಾದೇಶಿಕತೆಯ ಪರಿಕಲ್ಪನೆಯಲ್ಲವೆಂದು ಸ್ಪಷ್ಟನೆಯನ್ನು ರಾಜೇಂದ್ರ ಚೆನ್ನಿಯವರು ನೀಡುತ್ತಾ, "ದೇಶೀವಾದದ ಚರ್ಚೆಯಲ್ಲಿ ಪ್ರಾದೇಶಿಕ ಚೌಕಟ್ಟು ವಿಶಿಷ್ಟವಾದ ಸಂಸ್ಕೃತಿಯೊಂದನ್ನು ಹೊಂದಿರುವ ಭಾಷಾ ಸಮುದಾಯವೊಂದರ ವಾಸ್ತವಿಕ ಜೀವನದ ಹೊರ ಆವರಣವಾಗಿ ಮುಖ್ಯವಾಗಿರುತ್ತದೆ. ಅಲ್ಲದೆ, ಭಾಷಾ ಸಮುದಾಯವೊಂದರ ತನ್ನದೇ ಆದ ಚಿಂತಿಸುವ ಮತ್ತು ಭಾವಿಸುವ, ಒಟ್ಟಿನಲ್ಲಿ ಬದುಕನ್ನು ಅರ್ಥ ಮಾಡಿಕೊಳ್ಳುವ ಬಗೆಗಿನ ಮೇಲೆ ಭೌಗೋಳಿಕ ಸತ್ಯಗಳು ಪ್ರಭಾವ ಬೀರುವುದರಿಂದ ಅವು ಮುಖ್ಯವಾಗಿವೆ. ದೇಶೀವಾದದ ಒತ್ತು ಇರುವುದು ಪ್ರಾದೇಶಿಕ ವಿಶಿಷ್ಟತೆಗಿಂತ ಹೆಚ್ಚಾಗಿ ಭಾಷಾ ಸಮುದಾಯವೊಂದರ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಿಶಿಷ್ಟತೆಗಳ ಮೇಲೆ. ಹೆಚ್ಚಾಗಿ ದೇಶೀವಾದವು ಭಾಷಾ ಸಂಪ್ರದಾಯದ ಮೇಲೆ ಪ್ರಭಾವ ಬೀರಿರುವ 'ಅನ್ಯ' ಅಥವಾ 'ಹೊರಗಣ' ಸಂಸ್ಕೃತಿಯ ಅಂಶಗಳಿಗೆ ವಿರುದ್ಧವಾದ ಅಥವಾ ಭಿನ್ನವಾದ ದೇಶೀಯ ಸಂಸ್ಕೃತಿಯ ವಿಶಿಷ್ಟತೆಗಳನ್ನು ಎತ್ತಿ ಹಿಡಿಯುತ್ತದೆ"[4] ಎನ್ನುತ್ತಾರೆ.

ಈ ದೃಷ್ಟಿಯಿಂದ, ದೇಶೀವಾದವು ತನ್ನ ನಿರ್ದಿಷ್ಟ ಭಾಷಾಸಮುದಾಯದ ಮೂಲಕವೇ 'ಅನ್ಯ', 'ಹೊರಗಣ' ಪ್ರಭಾವಗಳನ್ನು ಪರಿಶೀಲಿಸುತ್ತಾ, ಪ್ರಾದೇಶಿಕ ವಿಶಿಷ್ಟತೆಗಿಂತ ಭಾಷಾ ಸಮುದಾಯದ ಜೀವನದ ಮೇಲೆ ಉಂಟಾಗುತ್ತಿರುವ ಪ್ರಭಾವಗಳ ಪರಿಣಾಮಗಳನ್ನು ಕೇಂದ್ರವಾಗಿಟ್ಟುಕೊಂಡು ಅನ್ಯ ಪ್ರಭಾವಗಳಿಗೆ ವಿರುದ್ಧವಾದ ದೇಶೀಯ

ಸಂಸ್ಕೃತಿ ವಿಶಿಷ್ಟತೆಗಳೆಡೆಗೆ ಗಮನ ನೀಡುತ್ತದೆ. ಈ ಕಾರಣಗಳಿಂದಾಗಿ ಅನನ್ಯತೆಯನ್ನು ಪ್ರತಿಪಾದಿಸಬಯಸುತ್ತದೆ. ದೇಶೀವಾದವು ಹುಟ್ಟಿರುವುದು, ಅನ್ಯ ಪ್ರಭಾವಗಳ ಬಗೆಗಿರುವ ಆತಂಕದಲ್ಲಿ.

ಕೃತಿಕಾರರಲ್ಲೆ ಹುಟ್ಟುವ ದೇಶೀವಾದದ ಬಗ್ಗೆ ಗಮನ ಸೆಳೆಯುವ ಅಂಶಗಳನ್ನು ಕೆ.ವಿ.ತಿರುಮಲೇಶರು ಪೂರ್ಣಚಂದ್ರ ತೇಜಸ್ವಿಯವರು ತಳೆಯುವ ನಿಲುವುಗಳಿಂದ ಉದಾಹರಿಸುತ್ತಾರೆ. "ಅವರು ನವ್ಯಸಾಹಿತ್ಯ ಮಾರ್ಗವನ್ನು ತ್ಯಜಿಸುವುದೆಂದರೆ ಅದರ ಸ್ಫೂರ್ತಿಮೂಲಗಳನ್ನು, ಪರಿಕರಗಳನ್ನೂ, ಮೌಲ್ಯಗಳನ್ನೂ, ಎಲ್ಲವನ್ನೂ ತ್ಯಜಿಸುವುದು ಎಂದು ಹೇಳಿದ್ದು ಹಾಗೂ ಹೊಸ ಸಾಹಿತ್ಯದ ಬರವಿಗೆ ಸಮಗ್ರ ಸಾಮಾಜಿಕ, ರಾಜಕೀಯ, ಹಾಗೂ ತಾತ್ವಿಕ ಬದಲಾವಣೆಯ ಅಗತ್ಯವನ್ನು ಪ್ರತಿಪಾದಿಸಿದ್ದು, ಒಂದು ರೀತಿಯಿಂದ ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲಿಯೂ ದೇಶೀಯತೆಯ ಶೋಧನೆಗೆ ಪ್ರಚೋದನೆ ನೀಡಿರಲೂಬಹುದು."[5] ಈ ಕಾರಣಗಳು ಸೃಜನಶೀಲ ಲೇಖಕರಲ್ಲೆ ಉಂಟುಮಾಡುವ ಬದಲಾವಣೆಗಳ ಕಾರಣಗಳಿಂದಾಗಿ ಸಮಕಾಲೀನ ಸಮಾಜವನ್ನು ಗ್ರಹಿಸುವ, ಅಭಿವ್ಯಕ್ತಿಸುವ, ಪರಿಶೀಲಿಸುವ ಕ್ರಮಗಳ ಭಿನ್ನತೆಯನ್ನು ಸೂಚಿಸುವುದರ ಜೊತೆಗೆ ಸಮಗ್ರವಾದ ಪಲ್ಲಟಗಳ ನಿರೀಕ್ಷೆಯನ್ನು ಕಾಣಬಹುದು.

ಆದರೆ, ದೇಶೀವಾದವು ಕೆಲವು ಅನಿರ್ದಿಷ್ಟತೆಗಳಿಂದ ಕೂಡಿರುತ್ತದೆ. ರಾಜೇಂದ್ರ ಚೆನ್ನಿಯವರ ಪ್ರಕಾರ, "ಸಂಪ್ರದಾಯದ ದೇಶೀಯ ಅಂಶಗಳ ಬಗ್ಗೆ ನಿರ್ದಿಷ್ಟತೆ ಇಲ್ಲದಿರುವುದರಿಂದ ದೇಶೀವಾದದ ಹುಡುಕಾಟ ನಿರಂತರವೂ ಮತ್ತು ಸೃಜನಶೀಲವೂ ಆಗಿರುತ್ತದೆ. ಇದರಿಂದಾಗಿ ನಮ್ಮ ಅರಿವಿಗೆ ಬಂದಿರದಿದ್ದಂಥ ಸಂಪ್ರದಾಯದ ಮಗ್ಗಲುಗಳನ್ನು ಅದು ಶೋಧಿಸುತ್ತದೆ. ಯಾವುದೇ ಕಾಲದಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯದ ಸಂದರ್ಭಗಳಲ್ಲಿ ಕೆಲವು ಪರಿಕರಗಳು ಮಾತ್ರ ಸ್ವೀಕೃತವಾಗಿದ್ದು ಇನ್ನೂ ಹಲವಾರು ಹೆಚ್ಚಿನ ಮನ್ನಣೆ ಪಡೆದಿರುವುದಿಲ್ಲ. ಸಾಮಾನ್ಯವಾಗಿ ದೇಶೀವಾದವು ಇಂಥ ಅಲಕ್ಷ್ಯಕ್ಕೀಡಾದ ಪರಿಕರಗಳನ್ನು ಮರು ಶೋಧಿಸುತ್ತದೆ."[6]

ನಿರ್ವಸಾಹತೀಕರಣ ಪ್ರಕ್ರಿಯೆಯು ಕೂಡ ಇದೇ ಬಗೆಯ ಅನಿರ್ದಿಷ್ಟತೆಯೊಡನೆ ಮುಖಾಮುಖಿಯಾಗುವ ಅನಿವಾರ್ಯತೆ ಇದೆ. ವಸಾಹತುಶಾಹಿ ಆಡಳಿತದಿಂದ ಎದುರಾದ ಅದರ ನೋಟಕ್ರಮಗಳಿಂದಾಗಿ, ನಿರ್ವಸಾಹತೀಕರಣದ ಹಂತದಲ್ಲಿ ಇದು ಎದುರಾಗುತ್ತದೆ. ಅಂತೆಯೆ ದೇಶೀ ಸಮುದಾಯಗಳಲ್ಲಿ ಅಲಕ್ಷ್ಯಕ್ಕೀಡಾಗಿರುವ ಅಂಶಗಳೆಡೆಗೆ ತನ್ನ ಗಮನ ನೀಡುವ ಸಂದರ್ಭವು ದೇಶೀವಾದದ ರೀತಿಯದೆ ಆಗಿದೆ.

ದೇಶೀವಾದ ಹಾಗೂ ನಿರ್ವಸಾಹತೀಕರಣಗಳು ಎದುರಿಸುವ ಈ ಅನಿರ್ದಿಷ್ಟತೆಯು ಕೆಲವು ಬಾರಿ ಸಹಾಯಕವಾಗಿಯೆ ಇರುತ್ತದೆ. ರಾಜೇಂದ್ರ ಚೆನ್ನಿಯವರ ಪ್ರಕಾರ, "ದೇಶೀಯವೆನ್ನುವ ಅಂಶಗಳ ಬಗೆಗಿರುವ ಅನಿರ್ದಿಷ್ಟತೆಯಿಂದಾಗಿ ದೇಶೀವಾದವು ಸಂಕುಚಿತ ಧೋರಣೆಗಳಿಂದ ಮತ್ತು ಅಸಹನೆಯಿಂದ ಮುಕ್ತವಾಗಿರುತ್ತದೆ."[7] ಅವರೇ ಮುಂದುವರೆದು ಹೇಳುವಂತೆ, "ಬಹುಮುಖತ್ವವೇ ಜೀವಾಳವಾಗಿರುವ ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಯಾವುದೇ ಬಗೆಯ ಸಂಕುಚಿತ ಧೋರಣೆ ದಮನಕಾರಿಯಾಗಬಲ್ಲದು. ರಾಜಕೀಯವಾಗಿ ದೇಶೀವಾದವು ತೋರುವ ಅಸಹನೆ ಮತ್ತು ದಮನಕಾರಿ ಪ್ರವೃತ್ತಿ ಸಾಹಿತ್ಯಿಕ ದೇಶೀವಾದದಲ್ಲಿ ಕಾಣದಿರುವುದಕ್ಕೆ ಇಲ್ಲಿ ಚರ್ಚಿಸಲಾಗುತ್ತಿರುವ ಅನಿರ್ದಿಷ್ಟತೆಯೇ ಕಾರಣವೆನ್ನಬಹುದು. ಸಂಪ್ರದಾಯದ ಯಾವುದೇ ಅಂಶವು ಹೆಚ್ಚಿನ ಮನ್ನಣೆ ಪಡೆದು ಆಕ್ರಮಕವಾಗಿಬಿಟ್ಟಾಗ ದೇಶೀವಾದವು ಅದರ ವಿರುದ್ಧ ಆರೋಗ್ಯಕರವಾದ ರೀತಿಯಲ್ಲಿ ಬಂಡೇಳುತ್ತದೆ, ನಮ್ಮ ಸಂದರ್ಭದಲ್ಲಿ ದೇಶೀವಾದವು ಯಜಮಾನ ಸಂಸ್ಕೃತಿಯ ವಿರುದ್ಧ ಸಂಸ್ಕೃತಿಯ ಒಳಸುಳಿಗಳನ್ನು ಪೊರೆಯುತ್ತಾ ಬಂದಿರುವುದು ಮಹತ್ವಪೂರ್ಣವಾಗಿದೆ."[8]

ಇದನ್ನು ನಿರ್ವಸಾಹತೀಕರಣಕ್ಕೂ ಅನ್ವಯಿಸಬಹುದು. ಇಂತದೇ ಸಂದರ್ಭವನ್ನು ನಿರ್ವಸಾಹತೀಕರಣದಲ್ಲೂ ಕಾಣಬಹುದು. ಪ್ರಭುತ್ವಗಳು ಸಂಸ್ಕೃತಿಯನ್ನು ಏಕಾಕಾರಿಗೊಳಿಸುವ ಪ್ರಯತ್ನಗಳನ್ನು ಪ್ರಶ್ನಿಸುವ ನಿರ್ವಸಾಹತೀಕರಣದ ಚಿಂತನೆಗಳು ಧರ್ಮ, ಭಾಷೆ, ಸಂಸ್ಕೃತಿಗಳ ಬಹುತ್ವವನ್ನೆ ಪ್ರತಿಪಾದಿಸುತ್ತವೆ.

ದೇಶೀವಾದದ ಚರ್ಚೆಗಳು ಸಾಹಿತ್ಯದಲ್ಲಿ ಅರ್ಥಪೂರ್ಣವಾದ ಸಂವಾದವನ್ನು ನಡೆಸುತ್ತಿವೆ. ದೇಶೀವಾದವು ತನ್ನನ್ನು ತಾನು ನಿರ್ವಚಿಸಿಕೊಳ್ಳಲು ಯಾವುದು ದೇಶೀಯವಲ್ಲವೆಂಬುದರೆಡೆಗೆ ಗಮನ ನೀಡುತ್ತದೆ. ಈ ದೃಷ್ಟಿಯಿಂದ ದೇಶೀವಾದದ ಲಕ್ಷಣಗಳನ್ನು ರಾಜೇಂದ್ರ ಚೆನ್ನಿಯವರು ಹೀಗೆ ಗುರುತಿಸುತ್ತಾರೆ: 1. "ದೇಶೀವಾದದ ಪರಿಕಲ್ಪನೆ ಯಾವಾಗಲೂ ದ್ವಂದ್ವಾತ್ಮಕ ರೀತಿಯದ್ದಾಗಿರುತ್ತದೆ. ಅಂದರೆ, ದೇಶೀಯವೆನ್ನಲಾಗುವ ರಚನೆಗಳೊಂದಿಗೆ ದೇಶೀಯವಲ್ಲದ ಅನ್ಯವೆನ್ನಬಹುದಾದ ರಚನೆಗಳನ್ನು ಅದು ಗುರುತಿಸುತ್ತದೆ. ಸಾಮಾನ್ಯವಾಗಿ ದೇಶೀಯವೆನ್ನಲಾಗುವ ಪರಿಕರಗಳ ಬಗ್ಗೆ ನಿರ್ದಿಷ್ಟತೆಯಿಲ್ಲದಿದ್ದರೂ ದೇಶೀಯವಲ್ಲದ ಪರಿಕರಗಳನ್ನು ದೇಶೀವಾದ ಹೆಚ್ಚು ಸ್ಪಷ್ಟವಾಗಿ ವಿವೇಚಿಸುತ್ತದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಕನ್ನಡದ ಸೃಷ್ಟಿಶೀಲ, ವಿಮರ್ಶಾತ್ಮಕ ಪಾರಿಭಾಷಿಕಗಳು ಹೆಚ್ಚಾಗಿ ದ್ವಂದ್ವಾತ್ಮಕವಾಗಿವೆ. ಉದಾಹರಣೆಗೆ ಮಾರ್ಗ-ದೇಸಿ, ವಸ್ತುಕ-ವರ್ಣಕ, ಸ್ಥಾವರ-ಜಂಗಮ."[9] 2."ದೇಶೀವಾದವು ದೇಶೀಯವೆನ್ನಲಾಗುವ ಬಗ್ಗೆ ಸ್ವಲ್ಪಮಟ್ಟಿಗೆ ಅಸ್ಪಷ್ಟವಾಗಿರುತ್ತದೆ, ಸಿದ್ಧಾಂತದ ದೃಷ್ಟಿಯಿಂದ ಇದು ಕೊರತೆಯಾಗಿ

ಕಾಣಬಹುದಾದರೂ ದೇಶೀವಾದದ ಪ್ರಭಾವಕ್ಕೆ ಸೃಜನಶೀಲ ಕೊಡುಗೆಗೆ ಈ ಅಸ್ಪಷ್ಟತೆಯೇ ಕಾರಣ"[10]ವಾಗುತ್ತದೆ.

ವಸಾಹತೋತ್ತರದಲ್ಲಿ ಆಧುನಿಕಪೂರ್ವದ ಅರ್ಥಪೂರ್ಣವಾದ ರಚನೆಗಳು ನಾಶವಾಗುತ್ತಿವೆ ಎಂಬುದು ದೇಶೀವಾದದ ಕೇಂದ್ರಗ್ರಹಿಕೆ. ಆದ್ದರಿಂದ ದೇಶೀವಾದವು ಸಾಂಸ್ಕೃತಿಕ ಎಚ್ಚರವನ್ನು ಸದಾ ಹೊಂದಿರುತ್ತದೆ. ದೇಶೀವಾದ ಹಾಗೂ ನಿರ್ವಸಾಹತೀಕರಣಗಳೆರೆಡರ ಚರ್ಚೆಗಳೂ ಆಧುನಿಕಪೂರ್ವ ದೇಶೀ ಮಾದರಿಗಳ ಶೋಧನೆಯತ್ತ ತಮ್ಮ ಗಮನ ನೀಡುತ್ತಿವೆ.

ದೇಶೀವಾದ ಮತ್ತು ನಿರ್ವಸಾಹತೀಕರಣ : ಸಮಸ್ಯೆಗಳು

ನಟರಾಜ್ ಹುಳಿಯಾರ್‌ರವರು ನಡೆಸಿದ ಸಂದರ್ಶನದಲ್ಲಿ, ಡಿ.ಆರ್. ನಾಗರಾಜ್‌ರವರು ಮಂಡಿಸುತ್ತಿರುವ 'ವಿಸ್ಮೃತಿ' ಹಾಗೂ 'ದೇಶೀವಾದದ' ಚರ್ಚೆಗಳನ್ನು ನೋಡುವ ಇನ್ನೊಂದು ದೃಷ್ಟಿಕೋನದ ಬಗ್ಗೆ ಗಮನ ಸೆಳೆಯುತ್ತಾರೆ.

"ಆಧುನಿಕ ಅನಾಧುನಿಕ ಜೀವನ ದರ್ಶನಗಳ ಪುನರುದ್ದೀಪನದ ಈ ಮಾತುಗಳು ಸಂಘಪರಿವಾರದವರು ಹೇಳುವ ಪುನರುಜ್ಜೀವನವಾದದಂತೆ ಕೆಲವರಿಗೆ ಕೇಳಿಸುತ್ತಿವೆಯಲ್ಲ?

ಯಾವುದೇ ತಾತ್ವಿಕ ವಿಚಾರಗಳನ್ನು ನಾವು ಚರ್ಚಿಸುವಾಗ ಈ ರೀತಿಯ ಗೊಂದಲಗಳು ಹುಟ್ಟುವುದು ಸಹಜ. ಸ್ವದೇಶೀ ಚಿಂತನೆ ಅಂದ ಮಾತ್ರಕ್ಕೆ ಅದು ಸಂಘ ಪರಿವಾರದ್ದೇ ಆಗಬೇಕಾಗಿಲ್ಲ. ನಾನು ಮಾತಾಡ್ತಾ ಇರುವ ಭಾಷೆ ಗಾಂಧಿ, ಅಂಬೇಡ್ಕರ್ ಅಥವಾ ಲೋಹಿಯಾರದ್ದು. ನಿಜವಾಗಿ ಸಾಂಸ್ಕೃತಿಕ ಶಕ್ತಿ ಎಲ್ಲಿ ಸಂಚಯ ಆಗುತ್ತೆ ಅಂದ್ರೆ ನಮ್ಮ ಸಂಸ್ಕೃತಿಯಲ್ಲೇ ಇದ್ದ ಬಹುಮುಖೀ ಧಾರೆಗಳನ್ನು ಉದ್ದೀಪಿಸಿದಾಗ. ಸಂಘ ಪರಿವಾರಕ್ಕೆ ಮಾರಕವಾದ ಪೆಟ್ಟು ನೀಡುವುದು ಈ ಬಗೆಯ ದರ್ಶನಗಳ ಪ್ರತಿಪಾದನೆಯ ಮೂಲಕವೇ. ಸಾಂಸ್ಕೃತಿಕ ಸ್ಮೃತಿ ಅನ್ನೋದು ಭಾರತದಲ್ಲಿ ದೇಶೀ ಸಮಾಜವಾದಿಗಳಿಗೂ ಇರುವ ಪ್ರಬಲವಾದ ಲೋಕ. ಅದನ್ನೇ ಸಂಘ ಪರಿವಾರಕ್ಕೆ ಬಿಟ್ಟುಕೊಟ್ಟರೆ ನಾವು ನಿರಾಯುಧರಾಗಿ ಕೂತಿರುತ್ತೇವೆ, ಅಷ್ಟೆ. ನಮ್ಮ ಸಂಸ್ಕೃತಿಯ ಜಾತ್ಯತೀತ ಪರಂಪರೆಗಳು, ಧಾರ್ಮಿಕವಾದ ಜಾತ್ಯತೀತ ಪರಂಪರೆಗಳನ್ನು ಪುನರುದ್ದೀಪಿಸೋದ್ರಿಂದ ಮಾತ್ರ ಸಂಘ ಪರಿವಾರವನ್ನು ತಡೆಗಟ್ಟೋಕೆ ಸಾಧ್ಯ."[11]

ದೇಶೀ ದರ್ಶನಗಳ ಪುನರುದ್ದೀಪನದ ಸಂದರ್ಭದಲ್ಲಿ ಈ ಬಗೆಯ ಪರ ವಿರೋಧದ ಚರ್ಚೆಗಳು ಸೂಕ್ಷ್ಮವಾದ ಆಯಾಮಗಳನ್ನು ಪಡೆಯುತ್ತವೆ. ಅವೈದಿಕ ದರ್ಶನಗಳನ್ನು ಅರಿಯಲು ವೈದಿಕ ದರ್ಶನಗಳ ಜೊತೆ ನಡೆದಿರುವ ಸಂಘರ್ಷಗಳನ್ನು

ತಿಳಿದಿರಬೇಕಾಗುತ್ತದೆ ಎಂಬ ಡಿ.ಆರ್. ನಾಗರಾಜ್‌ರವರ ಚಿಂತನೆಗಳು ಈ ಸಂದರ್ಭದಲ್ಲಿ ಪ್ರಸ್ತುತವಾದವುಗಳು. ಆಧುನಿಕಪೂರ್ವದ ದೇಶೀದರ್ಶನಗಳ ಶೋಧದ ಸಂದರ್ಭದಲ್ಲಿ ಎಲ್ಲ ದರ್ಶನಗಳೊಡನೆ ಮುಖಾಮುಖಿಯಾಗುವ ಅವಶ್ಯಕತೆಯನ್ನು ಡಿ.ಆರ್.ನಾಗರಾಜ್ ರವರು 'ಅಕ್ಷರ ಚಿಂತನ ಮಾಲೆ'ಯಲ್ಲಿ ಪ್ರಕಟಗೊಂಡ ಕೃತಿಗಳ ಚರ್ಚೆಯಲ್ಲಿ ಮಂಡಿಸುತ್ತಾರೆ.

ಬಾಲಚಂದ್ರ ನೆಮಾಡೆಯವರ ಪ್ರಕಾರ: "ದೇಶೀಯತೆ ಎಲ್ಲಾ ಭಾಷಾ ಸಾಹಿತ್ಯಗಳಲ್ಲೂ ಢಾಳಾಗಿ ಕಂಡುಬಂದರೂ ದೇಶೀವಾದದ ಬಗ್ಗೆ ತಾತ್ವಿಕ ಸಂವಾದಗಳು ನಡೆದಿರುವುದು ಕಡಿಮೆ ಎನ್ನಬಹುದು. ಆದರೆ, ಪ್ರಪಂಚದ ವಿವಿಧ ದೇಶಗಳಲ್ಲಿ ದೇಸಿಯತೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದ ಕಾಲಘಟ್ಟಗಳಲ್ಲಿ ಅಲ್ಲಿಯ ಸಾಹಿತ್ಯ ವಿಫುಲವಾಗಿ ಬೆಳೆದಿದೆ ಎನ್ನುವುದನ್ನು ಚರಿತ್ರೆ ಸ್ಪಷ್ಟಪಡಿಸುತ್ತದೆ, ೧೩ನೆಯ ಶತಮಾನದ ಯಾದವರ ಕಾಲ, ಶಿವಾಜಿಯ ಆಳ್ವಿಕೆಯ ಅನಂತರದ ಕಾಲ, ಇಂಗ್ಲೆಂಡಿನಲ್ಲಿ ಎಲಿಜಬೆತ್ ರಾಣಿಯ ಕಾಲವನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಈ ಕಾಲಘಟ್ಟಗಳ ಲೇಖಕರು ದೇಸೀಕರಣದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗಿಗಳಾಗಿದ್ದರು."[12]

ಈ ಬಗೆಯಲ್ಲಿ ದೇಶೀಯತೆಯ ಕಾರಣದಿಂದಾಗಿ ಸಾಹಿತ್ಯ ಕೃತಿಗಳ ವಿಫುಲವಾದ ಹುಟ್ಟಿಗೆ ಕಾರಣವಾಗುತ್ತದೆ. ದೇಶೀವಾದದ ಚರ್ಚೆಯು ಕೂಡ ಮುಂದೆ ಅನೇಕ ಅವಸ್ಥಾಂತರಗಳಿಗೆ ಕಾರಣವಾಗುತ್ತದೆ.

ಅದರ ಮಿತಿಯ ಬಗ್ಗೆ ಬಾಲಚಂದ್ರ ನೆಮಾಡೆಯವರೇ ಹೇಳುವುದೇನೆಂದರೆ : "ದೇಸೀಯತೆ ಪರಾಕಾಷ್ಠೆ ತಲುಪಿದಾಗ ಆ ಸಂಸ್ಕೃತಿ ಪತನದ ಹಾದಿ ಹಿಡಿಯುತ್ತದೆ. ಹೊರಜಗತ್ತಿನ ಸಂಪಕವನ್ನು ಪೂರ್ಣವಾಗಿ ನಿರಾಕರಿಸುವ, ಸ್ವಪ್ರತಿಷ್ಠೆಯ, ತನ್ನೊಳಗೆ ನಾನೇ ಕಳೆದುಹೋದ ಸಂಸ್ಕೃತಿ ಹೊರಗಿನ ಆಕ್ರಮಣಕಾರಿ ಸಂಸ್ಕೃತಿಯೊಂದನ್ನು ವಿರೋಧಿಸುವ ಶಕ್ತಿಯನ್ನು ಕೂಡ ಕಳೆದುಕೊಂಡಿರುತ್ತದೆ. ಅಲ್ಬರೂನಿ ವಿವರಿಸುವ ೧೧ನೇ ಶತಮಾನಕ್ಕೆ ಮುಂಚೆ ಇದ್ದ ಬ್ರಾಹ್ಮಣ–ಕೇಂದ್ರಿತ ಹಿಂದೂ ಜನಾಂಗವನ್ನು ಇದಕ್ಕೆ ಉದಾಹರಣೆಯೆಂದರೆ – ಆಗ ಬಂದ ಮಹಾನುಭಾವ–ವಾರಕ ಭಕ್ತಿ ಪಂಥಗಳು ಹಾಗು ಸೂಫಿ ಪಂಥಗಳು ಹುಟ್ಟುಹಾಕಿದ ಆತ್ಮಶುದ್ಧಿ ಪ್ರಕ್ರಿಯೆಗಳು ಒಂದಿಷ್ಟು ಮಟ್ಟಿಗೆ ಆಗಿನ ಸಮಾಜಕ್ಕೆ ಜೀವ ತುಂಬಿದವು. ಮತ್ತೆ ೧೮ನೇ ಶತಮಾನದಲ್ಲಿ ಅತಿ ಅಂತರ್ಮುಖತೆಯಿಂದ ಪೀಡಿತವಾಗಿದ್ದ ನಮ್ಮ ಸಂಸ್ಕೃತಿಗೆ ಪಾಶ್ಚಿಮಾತ್ಯ ಸಂಸ್ಕೃತಿಯ ಆಘಾತ ತಡೆದುಕೊಳ್ಳಲಾಗಲಿಲ್ಲ."[13]

ದೇಶೀವಾದವು ಸಮಸ್ಯೆ ಎದುರಿಸುವುದು ಇಂಥ ಸಂದರ್ಭದಲ್ಲೇ. ಇದುವರೆಗೆ ಅಲಕ್ಷಿತವಾಗಿದ್ದ ದೇಶೀ ಮಾದರಿಗಳ ಪುನರುಜ್ಜೀವನದ ಹಂಬಲದೊಡನೆ ತನ್ನನ್ನು ತಾನು

ಬಲಿಷ್ಠಗೊಳಿಸಿಕೊಳ್ಳುವ ಕ್ರಮಗಳು ಸ್ವದಲ್ಲಿ ಮುಳುಗುವ ಸಾಧ್ಯತೆಗಳು ದೇಶೀವಾದದಲ್ಲಿ ಹೆಚ್ಚಾಗಿರುತ್ತವೆ.

ಅದರ ಇನ್ನೊಂದು ಮಿತಿಯ ಬಗ್ಗೆ ಬಾಲಚಂದ್ರ ನೆಮಾಡೆಯವರೇ ಹೇಳುವುದೇನೆಂದರೆ : "ದೇಸೀಯತೆ ಸಂಪ್ರದಾಯವಾದಿಗಳ, ಕೋಮುವಾದಿಗಳ ಕೈಗೂಸಾಗುವ ಅಪಾಯವಿದೆ ಎಂದು ಒಪ್ಪುವಾಗಲೂ, ದೇಶೀಯತೆ ತುಳಿತಕ್ಕೆ ಒಳಗಾದವರ ಕೈಯಲ್ಲಿರುವ ಏಕೈಕ ಅಸ್ತ್ರ ಕೂಡ ಹೌದು ಎಂಬುದನ್ನು ಮರೆಯಬಾರದು. ಮಹಾತ್ಮಗಾಂಧಿಯ ಆಧ್ಯಾತ್ಮಿಕ ಹಾಗೂ ಅಂಬೇಡ್ಕರರ ಬೌದ್ಧಮತ ಸ್ವೀಕಾರವನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಸಂಪ್ರದಾಯ ಮತ್ತು ಆಧುನಿಕತೆಯನ್ನು ಯಾವಾಗಲೂ ಎದುರು ಬದರಾಗಿ ಇಟ್ಟಿರುವುದು ಒಂದು ಜೀವಂತ ಸಮಾಜದ ಮುಖ್ಯ ಲಕ್ಷಣ. ಈ ಎರಡರ ನಡುವಿನ ಸಂಘರ್ಷ ನಮ್ಮ ದೇಸೀತನವನ್ನು ನಿರ್ಧರಿಸುತ್ತದೆ. ನಮ್ಮ ಮೇಲೆ ಹೇರಿರುವ ಅಸಹಜ ಅಂತರಾಷ್ಟ್ರೀಯತೆಯ ಭಾರವನ್ನು ಬೆನ್ನ ಮೇಲೆ ಹೊತ್ತು ನಡೆಯುವ ನಮಗೆ ಈ ಎರಡು ಶಕ್ತಿಗಳ ನಡುವೆ ಸಮತೋಲನ ಕಂಡುಕೊಳ್ಳುವುದು ಸಾಧ್ಯವಾಗಿಲ್ಲ."[14]

ದೇಶೀವಾದವು ರೂಪಿಸಬಯಸುವ ಸಾಂಸ್ಕೃತಿಕ ಅನನ್ಯತೆಯ ಮಿತಿಯಿಂದಾಗಿ, ಒಂದು ರೀತಿಯಲ್ಲಿ ಸಂಪ್ರದಾಯವಾದಿಯಾದ ಕೋಮುವಾದಿಗಳು ವಿಜೃಂಭಿಸಬಹುದು. ಆದರೆ, ಈ ಬಗೆಯ ಸಂಕುಚಿತ ದೃಷ್ಟಿಕೋನಕ್ಕೆ ಸೂಕ್ತ ಉತ್ತರವು ದೇಶೀವಾದವೇ ಆಗಿದೆ. ಡಿ.ಆರ್.ನಾಗರಾಜರವರು ಸಾಂಸ್ಕೃತಿಕ ಬಹುತ್ವವನ್ನು ಸಂಪ್ರದಾಯವಾದಿ, ಕೋಮುವಾದಿಗಳ ವಿರುದ್ಧ ಮಂಡಿಸುವ ಮೂಲಕವೇ ಈ ಬಗೆಯ ಮಾದರಿಗಳನ್ನು ತಿರಸ್ಕರಿಸುವುದು ಸಾಧ್ಯವೆಂದು ಹೇಳುತ್ತಾರೆ.[15]

ರಹಮತ್ ತರೀಕೆರೆಯವರ ಪ್ರಕಾರ : "ಕನ್ನಡದಲ್ಲಿ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿ ನಿರ್ವಸಾಹತೀಕರಣ (ಡಿಕಲೊನೈಜ್) ಗೊಳ್ಳುವ ಚರ್ಚೆಗಳು ನಡೆಯುತ್ತಿವೆ. ಬಿಡುಗಡೆಗೊಳ್ಳುವ ಈ ತುಡಿತಗಳ ಜತೆಯಲ್ಲೆ ಪರ್ಯಾಯಗಳ ಹುಡುಕಾಟವೂ ನಡೆದಿದೆ. ಪರ್ಯಾಯಗಳಲ್ಲಿ ಒಂದಾಗಿ ದೇಶೀವಾದವನ್ನು ಮಂಡಿಸಲಾಗುತ್ತಿದೆ. ದೇಶೀವಾದದ ಒಂದು ನೆಲೆ ಪ್ರಾಚೀನ ವೈದಿಕ ಸಂಸ್ಕೃತಿಯದು. ಇನ್ನೊಂದು ಈ ತನಕ ಅಲಕ್ಷಿತವಾಗಿದ್ದ ಬುಡಕಟ್ಟು-ದಲಿತ ಸಮುದಾಯಗಳ ಸಾಂಸ್ಕೃತಿಕ ಲೋಕಗಳ ನೆಲೆಯದು. ಈ ಪರ್ಯಾಯಗಳ ಸ್ವರೂಪವೇನು, ಇವು ಹಿಡಿಯಬೇಕಾದ ದಿಕ್ಕು ಯಾವುದು-ಇದಿನ್ನೂ ಪಕ್ಕಾ ಆಗಿಲ್ಲ."[16]

ಹೀಗೆ ಸಂದಿಗ್ಧದಲ್ಲಿರುವ ಈ ಪರಿಕಲ್ಪನೆಗಳ ಅನ್ವಯಕ್ರಮವು ಕೂಡ ಆಧುನಿಕ ಸಮಾಜದ ಲಕ್ಷಣವೆ. ಈಗ ಅಸ್ತಿತ್ವದಲ್ಲಿರುವ ಅನಾಧುನಿಕ, ಆಧುನಿಕ, ಆಧುನಿಕೋತ್ತರ,

ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮೊದಲಾದ ರಚನೆಗಳನ್ನು ಈ ಪೂರ್ವ, ಪಶ್ಚಿಮದ ಚಿಂತನೆಗಳು ಮುಖಾಮುಖಿಯಾಗುತ್ತಿವೆ.

ಈ ಬಗೆಯ ದ್ವಂದ್ವಕ್ಕೆ ಕಾರಣ ಕೂಡ ವಸಾಹತುಶಾಹಿಯು ದೇಶೀ ಜೀವನ ಪದ್ಧತಿಯಲ್ಲಿ ತಂದ ಬದಲಾವಣೆಯ ಪರಿಣಾಮವೇ ಆಗಿರುತ್ತದೆ. ಆಧುನಿಕತೆಯನ್ನು ಒಪ್ಪಿಕೊಳ್ಳುವ ಹಂತದಲ್ಲೆ ಅನೇಕ ಸಮಸ್ಯೆಗಳು ಎದುರಾಗುವುದನ್ನು ಕನ್ನಡದ ಆರಂಭಿಕ ಕಾದಂಬರಿಗಳು ನಿರ್ವಹಿಸುವ ಕ್ರಮ ಇಲ್ಲಿ ಮುಖ್ಯವಾದುದು. ಆಧುನಿಕ ವಿದ್ಯಾಭ್ಯಾಸ ಪಡೆದ ಪಾತ್ರಗಳನ್ನು ಚಿತ್ರಿಸುವಾಗ ಕಾದಂಬರಿಕಾರರುಗಳು ಅವರ ವ್ಯಕ್ತಿತ್ವಗಳ ಛಿದ್ರತೆಯನ್ನೇ ಮುಖ್ಯವಾಗಿ ಮಂಡಿಸುತ್ತಿದ್ದಾರೆ.

ವೈದಿಕ ವರ್ಣಾಶ್ರಮದ ಮುಂದುವರೆದ ಜಾತಿ ಪದ್ಧತಿಯ ಕಾರಣದಿಂದಾಗಿ ಜಾತಿ, ಲಿಂಗ ತಾರತಮ್ಯಗಳು ಉಂಟಾಗಿವೆ. ಜ್ಞಾನವು ಆಧುನಿಕ ಪೂರ್ವದಲ್ಲಿ ಸಾರ್ವತ್ರಿಕಗೊಳ್ಳುವ ಅವಕಾಶವೇ ಇರಲಿಲ್ಲ. ಆ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳು ಉಳ್ಳವರ ಸ್ವತ್ತಾಗಿದ್ದ ಪರಿಣಾಮವಾಗಿ ಸಾಮಾಜಿಕ ಅಸಮಾನತೆ ಉಂಟಾಗಿದ್ದವು. ವಸಾಹತುಶಾಹಿಯ ಆಡಳಿತದ ಪರಿಣಾಮದಿಂದ ವ್ಯಾಪಕವಾದ ಮುಖ್ಯ ಪರಿಣಾಮವೆಂದರೆ, ಸಾಮಾಜಿಕ ಚಲನೆಯ ಸ್ಥಿತಿ. ಇದುವರೆಗೆ ಸ್ಥಗಿತ ಸ್ಥಿತಿಯಲ್ಲಿದ್ದ ಅನಾಧುನಿಕ ಸಮಾಜಗಳಲ್ಲಿ, ಆಧುನಿಕ ಶಿಕ್ಷಣದ ಪರಿಣಾಮವಾಗಿ ಈ ಚಲನೆ ಸಾಧ್ಯವಾಯಿತು.

ಆದರೆ ಈ ಬಗೆಯ ಚಲನೆಯ ಸಂದರ್ಭದಲ್ಲಿ ಆಧುನಿಕ ಪೂರ್ವ ಹಾಗೂ ಆಧುನಿಕ ರಚನೆಗಳೆರಡೂ ಮುಂದುವರೆಯುತ್ತಿದ್ದವು. ಕುವೆಂಪುರವರು 'ಕಾನೂರು ಹೆಗ್ಗಡಿತಿ'[17]ಯಲ್ಲಿ ಆಧುನಿಕತೆಯನ್ನು ನಿರ್ವಹಿಸುವ ಕ್ರಮವು ಈ ಆಧುನಿಕತೆಯು ಉಂಟುಮಾಡುವ ದ್ವಂದ್ವಗಳನ್ನು ಸೂಚಿಸುತ್ತದೆ.

ಆಧುನಿಕ ಶಿಕ್ಷಣ ಪಡೆದು ಬಂದ ಹೂವಯ್ಯನಿಗೆ ವೈದಿಕ, ಜಾನಪದ ಧರ್ಮದ ಆಚರಣೆಗಳೆರಡೂ ಕ್ಷುದ್ರವಾಗಿ ಕಾಣತೊಡಗುತ್ತವೆ. ತನ್ನ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಧಾರ್ಮಿಕ ಪ್ರಭುತ್ವ, ದೇಶೀ ಜನರ ಮೌಢ್ಯ, ಶೂದ್ರರ ದಾಸ್ಯಗಳ್ಯಾವುವು ಅವನಿಗೆ ಸಮ್ಮತವಲ್ಲ. ಹೂವಯ್ಯನು ಆಧುನಿಕ ಶಿಕ್ಷಣದಿಂದ ಪಡೆದ ನೋಟಕ್ರಮಗಳಿಂದ ತನ್ನ ಸಮಾಜವನ್ನು ನೋಡತೊಡಗಿದ್ದರಿಂದ ಇಲ್ಲಿನ ಕ್ಷುದ್ರತೆ ಅವನನ್ನು ದ್ವಂದ್ವಕ್ಕೆ ಒಳಗು ಮಾಡುತ್ತದೆ.

ಈ ಬಗೆಯ ದ್ವಂದ್ವಗಳಿಂದಲೆ ಅವನ ಜೀವನದ ನಿರ್ಣಾಯಕ ಘಟ್ಟಗಳು ನಿಯಂತ್ರಿತವಾಗುತ್ತವೆ. ಸೀತೆಯನ್ನು ಇಷ್ಟಪಡುವ ಹೂವಯ್ಯನು ಅವಳನ್ನು

ವಿವಾಹವಾಗಲಾಗುವುದಿಲ್ಲ, ತನ್ನ ಸಮಾಜದ ಆಚರಣೆಗಳನ್ನು ಒಪ್ಪಿಕೊಳ್ಳದೆ, ಅವುಗಳಿಂದ ವಿಮುಖನಾದುದರಿಂದ; ಅವನಿಗೆ ಜನರೊಡನೆ ಮುಕ್ತವಾಗಿ ಬೆರೆಯಲಾಗುವುದಿಲ್ಲ. ಇದೇ ಸಮಾಜ, ತಾನು ರಕ್ಷಿಸಿದ 'ಬಲೀಂದ್ರ'ನನ್ನು ಬಲಿ ತೆಗೆದುಕೊಳ್ಳುತ್ತದೆ. ತನ್ನ ತಾಯಿಯು ತನ್ನ ಮಾತುಗಳನ್ನು ಕೇಳದ ಅಸಹಾಯಕತೆ ಅವನದು. ಕೊನೆಗೆ ಕಾನುಬೈಲಿನ ನೆತ್ತಿ ತಲುಪುವ ಸ್ಥಿತಿಗೆ ಹೂವಯ್ಯ ತಲುಪುವುದು ಈ ಆಧುನಿಕತೆಯ ದ್ವಂದ್ವದ ಕಾರಣಗಳಿಂದಾಗಿಯೆ. ಈ ಕಾದಂಬರಿಯ ಉಳಿದ ಪಾತ್ರಗಳಿಗೆ ಈ ಸಾಂಪ್ರದಾಯಿಕ ಸಮಾಜದ ಹಿಡಿತಗಳ ಬಗ್ಗೆ ಅರಿವಿಲ್ಲವೆಂದಲ್ಲ. ಆದರೆ, ಅವರಿಗೆ ಅದೊಂದು ಸಮಸ್ಯೆಯೆ ಅಲ್ಲ. ಏಕೆಂದರೆ, ಅವರು ಈ ಆಧುನಿಕ ದ್ವಂದ್ವಕ್ಕೆ ಒಳಗಾಗಿಲ್ಲ.

'ಮಲೆಗಳಲ್ಲಿ ಮದುಮಗಳು'[18] ಕೃತಿಯಲ್ಲಿ ಈ ವಿಷಯವು ಮತ್ತಷ್ಟು ಸ್ಪಷ್ಟಗೊಳ್ಳುತ್ತದೆ. ಮುಕುಂದಯ್ಯನಿಗೆ ಹೂವಯ್ಯ ಎದುರಿಸುವಷ್ಟು ಸಮಸ್ಯೆಗಳು ಎದುರಾಗುವುದಿಲ್ಲ. ಉಳಿದ ಜನರೊಡನೆ ಅವನಿಗೆ ಹೂವಯ್ಯನಿಗಿರುವಷ್ಟು ಅಂತರವಿಲ್ಲ. ಹಾಗೂ ಹೂವಯ್ಯನಂತೆ ಅವನು ದ್ವಂದ್ವಗಳಲ್ಲಿ ಮುಳುಗಲಾರ. ಹಾಗೆಯೇ, ಅವನ ಸಮಸ್ಯೆಗಳು ಅವನ ಸಮುದಾಯದ ಸಮಸ್ಯೆಗಳಾಗುತ್ತವೆ, ಸಮುದಾಯದ ಸಮಸ್ಯೆಗಳು ಅವನ ಸಮಸ್ಯೆಗಳಾಗುತ್ತವೆ.

ಶಿವರಾಮ ಕಾರಂತರ "ಮರಳಿ ಮಣ್ಣಿಗೆ"[19] ಕೃತಿಯು ಆಧುನಿಕತೆಯ ಇನ್ನೊಂದು ಮಗ್ಗುಲನ್ನು ಶೋಧಿಸುತ್ತದೆ. ಈ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ಪಡೆದ ಮೊದಲ ತಲೆಮಾರಿನ ಪ್ರತಿನಿಧಿಯಾದ 'ಲಚ್ಚ'ನು ಕುಟುಂಬದಿಂದ ಸಿಡಿದು ಆಧುನಿಕತೆ ತಂದ ಪರಿಸ್ಥಿತಿಗೆ ಸಿಕ್ಕು ಬಳಲುತ್ತಾನೆ. ಹಾಗೆಯೇ, ರಾಮನು ಎರಡನೆ ತಲೆಮಾರಿನವನಾಗಿ ಈ ಆಧುನಿಕತೆಯನ್ನು ನಿರ್ವಹಿಸುವ ಕ್ರಮಗಳನ್ನು ಕಲಿತವನಾಗಿದ್ದಾನೆ.

ಇದು ಆಧುನಿಕ ಶಿಕ್ಷಣ ಕ್ರಮವನ್ನು ಒಳಗೊಳ್ಳುವ ಕ್ರಮಗಳನ್ನು ಆಧುನಿಕ ಸಂದರ್ಭದಲ್ಲಿ ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಧೋರಣೆ. ಆಧುನಿಕ ಕ್ರಮಗಳಿಂದ ಆಧುನಿಕಪೂರ್ವ ಕ್ರಮವನ್ನು ಇದ್ದಕ್ಕಿದ್ದಂತೆ ಬದಲಿಸುವುದು ಸಾಧ್ಯವಾಗದು. ಅಂತೆಯೇ ಅವುಗಳ ಜೀವನಕ್ರಮವನ್ನು ಈ ಕ್ರಮಗಳು ಅರಿಯುವುದರಲ್ಲೂ ಸಮಸ್ಯೆಗಳಿವೆ. ಹೂವಯ್ಯನು ಕೂಡ ಮಲೆನಾಡಿನ ಪರಿಸರದಲ್ಲೆ ಇದ್ದರೂ, ಅವನದು ಆ ಸಮಾಜದ ಹೊರಗಿನಿಂದ ನೋಡುವ ಕ್ರಮ. ಹಾಗಾಗಿ, ಅವನಿಗೆ ಈ ಲೋಕವ್ಯವಹಾರಗಳೆಲ್ಲ ಕ್ಷುದ್ರ, ಅಪರಿಚಿತವಾದಂತೆ, ಉಳಿದ ಪಾತ್ರಗಳಿಗೆ ಹೂವಯ್ಯನ ನಡವಳಿಕೆ, ಮಾತು, ಕೃತಿ, ನಿಲುವು, ಧೋರಣೆಗಳು ಕೂಡ ಅಪರಿಚಿತವಾಗುತ್ತವೆ.

ಆದ್ದರಿಂದ, ಆಧುನಿಕತೆಯ ಅನುಸಂಧಾನದ ಸಂದರ್ಭದ ದ್ವಂದ್ವಗಳು ಆಧುನಿಕಪೂರ್ವ, ಆಧುನಿಕ ಸಮಾಜಗಳ ರಚನೆಗಳೆರಡರಿಂದಲೂ ನಿರ್ಧಾರಿತವಾಗುತ್ತಿರುತ್ತವೆ. ಆಧುನಿಕತೆ ಪ್ರತಿಪಾದಿಸುವ ಅಂಶಗಳೆಲ್ಲವೂ ಆಧುನಿಕಪೂರ್ವ ರಚನೆಗಳನ್ನು ಬದಲಾಯಿಸುವ ಪ್ರಯತ್ನಗಳಾಗಿರುತ್ತವೆ. ಆಗ ಈ ಎರಡು ಮಾದರಿಗಳು ಪರಸ್ಪರರ ಬಗ್ಗೆ ಅಪರಿಚಿತವಾಗುತ್ತವೆ.

ನಟರಾಜ್ ಹುಳಿಯಾರ್ ಅವರ ಪ್ರಕಾರ : "ವಸಾಹತುವಾದದ ಮೂಲಕ ಪ್ರವೇಶಿಸುವ ಅನ್ಯ ಸಂಸ್ಕೃತಿಯ ಆಕ್ರಮಣಕ್ಕೆ ದೇಶೀ ಸಂಸ್ಕೃತಿಗಳು ಹಲವು ಬಗೆಗಳಲ್ಲಿ ಪ್ರತಿಕ್ರಿಯಿಸುತ್ತಿರುತ್ತವೆ. ಆ ಪ್ರತಿಕ್ರಿಯೆಗಳಲ್ಲಿ ನೇರ ಸ್ವೀಕಾರ, ಸಂಘರ್ಷ, ಸ್ವಪ್ರತಿಪಾದನೆ, ಅನುಕರಣೆ, ಜೀರ್ಣಿಸಿಕೊಳ್ಳುವ ಕ್ರಿಯೆ, ಒಪ್ಪಂದ, ಶರಣಾಗತಿ, ಉಪೇಕ್ಷೆ, ದೇಶೀ ಮಾದರಿಗಳ ಪುನರುಜ್ಜೀವನ, ಬುಡಮೇಲು ಕೃತ್ಯ, ನಿಷ್ಕ್ರಿಯತೆ... ಹೀಗೆ ಹಲವು ಸಂಕೀರ್ಣ ಮಾದರಿಗಳಿರುತ್ತವೆ"[20]

ಈ ಆಧುನಿಕತೆ ತರುವ ಅನೇಕ ದ್ವಂದ್ವಗಳು ವಸಾಹತು ಸಮಾಜಗಳ ಭವಿಷ್ಯದ ಎಲ್ಲ ನೋಟಕ್ರಮಗಳಲ್ಲಿಯೂ ಮುಂದುವರೆಯುತ್ತವೆ. ಇವುಗಳಿಂದಾಗಿ ಅದರ ಪರಿಣಾಮವನ್ನು ಎಲ್ಲ ಕ್ಷೇತ್ರಗಳಲ್ಲಿ ಕಾಣಬಹುದು. ಅಂತೆಯೇ ದೇಶೀವಾದ ಹಾಗೂ ನಿರ್ವಸಾಹತೀಕರಣದ ಸಂದರ್ಭದಲ್ಲೂ ಈ ಬಗೆಯ ಸಂದಿಗ್ಧಳನ್ನೇ ಈ ದೇಶೀಸಮುದಾಯಗಳು ಎದುರಿಸುತ್ತವೆ.

ರಹಮತ್ ತರೀಕೆರೆಯವರು ದೇಶೀವಾದದ ಸಮಸ್ಯೆಗಳ ಬಗ್ಗೆ ಈ ಬಗೆಯಲ್ಲಿ ಪ್ರಶ್ನಿಸುತ್ತಾರೆ: "ಈ ಹೊತ್ತು ದೇಶೀವಾದಗಳನ್ನು ಮಂಡಿಸುತ್ತಿರುವವರು ಯಾರು? ಪ್ರಗತಿ ವೈಚಾರಿಕತೆ ಆಧುನಿಕತೆ ವಿಜ್ಞಾನಗಳನ್ನು ಬರೀ ಶಾಪವೆಂದು ಯಾಕೆ ಹೇಳಲಾಗುತ್ತಿದೆ? ಇದರ ಒಳಗಿನ ಆಶಯ ಯಾವುದು? ಆಧುನಿಕ ಜೀವನಕ್ರಮದ ಏಕತಾನತೆಯನ್ನು ಮುರಿಯಲು ಜಾನಪದದ ಮಾದರಿಗಳನ್ನು ವೇಷವಾಗಿ ಧರಿಸುವತ್ತ ಇಂದು ದೇಶೀವಾದ ಚಲಿಸುತ್ತಿದೆಯೇ? ಇದು ಯಾರನ್ನು ಕೈಹಿಡಿದು ನಡೆಸುವ ಹಸ್ತವಾದೀತು? ಆಧುನಿಕ ಸರಕು ಸಂಸ್ಕೃತಿಯನ್ನು ಅನುಭವಿಸಿ ಕಟ್ಟರೆಯಾದ ಮೇಲೆ, ಛೇಂಜಿಗಾಗಿ ಸಾಂಪ್ರದಾಯಕ ದೇಶೀಮಾದರಿಗಳು ಬೇಕೆನಿಸುತ್ತಿವೆಯೇ? ಪಾಶ್ಚಾತ್ಯ ಮಾದರಿಗಳಲ್ಲಿ ತೊಳಲಾಡುವಾಗ ಬಂದ ರಕ್ತಹೀನತೆಯನ್ನು ಬೇರಿಲ್ಲದ ಅನಾಥ ಸ್ಥಿತಿಯನ್ನೊ ಕಳೆದುಕೊಳ್ಳಲು ದೇಶೀವಾದದ ಅವಶ್ಯಕತೆಯಾಗಿದೆಯೇ? ದೇಶೀವಾದಗಳು ಈ ಕಾಲದ ಜರೂರೆಂದು ಮಾತಾಡುತ್ತಿರುವವರ ವರ್ಗದ ವೈಯಕ್ತಿಕ ಮರುಚೈತನ್ಯಗಳಿಗೆ ಘುಟ್ಟಿಕೊಂಡ ಪರ್ಯಾಯಗಳೋ, ನಾಡಿನ ಸಮುದಾಯಗಳನ್ನು ಸಮೃದ್ಧಿ–ಸಮಾನತೆಯ ಹಾದಿಗೆ

ಹಚ್ಚಬಲ್ಲ ಪರ್ಯಾಯಗಳೋ? ಈ ಮುಂತಾದ ಪ್ರಶ್ನೆಗಳನ್ನು ಸಮ್ಮುಖದಲ್ಲಿ ಇಟ್ಟುಕೊಂಡೆ ದೇಶೀವಾದಗಳ ಸ್ವರೂಪವನ್ನು ಪರಿಶೀಲಿಸಬೇಕಾಗಿದೆ."[21]

ಈ ಅಭಿಪ್ರಾಯದಲ್ಲಿ ದೇಶೀವಾದದ ಮಂಡನೆಯ ಹಿಂದೆಯೇ ಅಡಗಿರಬಹುದಾದ ಸಾಂಸ್ಕೃತಿಕ ರಾಜಕರಣವನ್ನು ಕುರಿತ ಪ್ರಶ್ನೆಗಳಿವೆ.

ರಹಮತ್ ತರೀಕೆರೆಯವರು ದೇಶೀವಾದ ಸಾಧ್ಯತೆಗಳ ಬಗ್ಗೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: "ಈಗಿನ ಅಧ್ಯಯನಗಳು ಜನಸಮುದಾಯದ ಲೋಕದಿಂದಲೇ ಬಂದ ಬುದ್ಧಿಜೀವಿಗಳ ಮೂಲಕ, ಪರ್ಯಾಯ ಸಂಸ್ಕೃತಿಯನ್ನು ರೂಪಿಸಿಕೊಳ್ಳುವ ಹಂಬಲದಲ್ಲಿ ಶುರುವಾಗಿವೆ. ಈ ಅಧ್ಯಯನಗಳಿಗೆ ಏಕಕಾಲಕ್ಕೆ ಅಬ್ಬರಿಸುತ್ತಿರುವ ಹಿಂದೂ ಕೋಮುವಾದೀ ಹಾಗೂ ಮುಸ್ಲಿಂ ಮೂಲಭೂತವಾದಿ ರಾಜಕಾರಣವನ್ನು ಎದುರಿಸುವ ಹಾಗೂ ನಿರ್ವಸಾಹತೀಕರಣಗೊಂಡು ಹೊಸ ಆತ್ಮವಿಶ್ವಾಸ ಪಡೆಯುವ ಉದ್ದೇಶವೂ ಇದ್ದಂತಿದೆ"[22].

ವಿ.ಬಿ.ತಾರಕೇಶ್ವರ್ ರವರ ಪ್ರಕಾರ: "ಆಧುನಿಕತೆಯ ಪರಿಣಾಮವಾಗಿ, ಆಧುನಿಕ ಪೂರ್ವದ ಸಾಮಾಜಿಕ ರಚನೆಗಳು "ನಷ್ಟ" ಹೊಂದಿದ್ದಕ್ಕೆ ಹಳಹಳಿಸುವುದರ ಜೊತೆಗೆ, ಆಧುನಿಕತೆಯ ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಆಧುನಿಕ ಪೂರ್ವದ ಸಾಮಾಜಿಕ ರಚನೆಗಳಿಗೆ ಮೊರೆಹೋಗುವುದನ್ನು ಮುಂದಿಡುತ್ತವೆ. ಅಲಕ್ಷಿತ ಅಧ್ಯಯನಗಳು ಪರಿಹಾರ ರೂಪವಾಗಿ ನಿರ್ವಸಾಹತೀಕರಣವನ್ನು ಮುಂದುಮಾಡಿದರೆ, ದೇಶೀ ಪ್ರಸ್ಥಾನ ನಿರ್ವಸಾಹತೀಕರಣವನ್ನು ವಸಾಹತು ಪೂರ್ವಸ್ಥಿತಿಗೆ ಹೋಗುವುದೆಂದು ವ್ಯಾಖ್ಯಾನಿಸುತ್ತದೆ"[23]

ದೇಶೀವಾದ ಹಾಗೂ ನಿರ್ವಸಾಹತೀಕರಣವನ್ನು ವಸಾಹತೋತ್ತರದ ವಸಾಹತು ವಿರೋಧೀ ಸಿದ್ಧಾಂತವಾಗಿ ಪರಿಗಣಿಸಲಾಗುತ್ತಿದೆ. ಮುಖ್ಯವಾಗಿ ಅದರ ನಕಾರಾತ್ಮಕ ಧೋರಣೆಗಳೆಡೆಗೆ ಇರಬೇಕಾದ ಎಚ್ಚರವನ್ನು ಡಿ.ಆರ್.ನಾಗರಾಜ್, ಬಾಲಚಂದ್ರ ನೇಮಾಡೆ, ಜಿ.ಎನ್.ದೇವಿ, ರಾಜೇಂದ್ರ ಚೆನ್ನಿ, ನಟರಾಜ್ ಹುಳಿಯಾರ್, ರಹಮತ್ ತರೀಕೆರೆ ಮೊದಲಾದವರು ಕೆಲವು ಉಪಯುಕ್ತ ಪ್ರಶ್ನೆಗಳೊಡನೆ ಈ ಪ್ರಕ್ರಿಯೆಗಳನ್ನು ಪರಿಭಾವಿಸುವ ಅವಶ್ಯಕತೆಯನ್ನು ಮಂಡಿಸುತ್ತಿದ್ದಾರೆ.

ದೇಶೀವಾದವು ಅನೇಕ ಸಂದರ್ಭಗಳಲ್ಲಿ ಪ್ರದೇಶ ಹಾಗೂ ಭಾಷೆಯನ್ನು ಕೇಂದ್ರವಾಗಿಟ್ಟುಕೊಂಡು ಮುಂದುವರೆಯುತ್ತಿರುತ್ತದೆ. ಆದರೆ, ನಿರ್ವಸಾಹತೀಕರಣವು ಇದಕ್ಕಿಂತ ವಿಶಾಲವಾದ ರಾಜಕೀಯ, ಸಾಂಸ್ಕೃತಿಕ ರಾಜಕಾರಣಗಳೆಡೆಗೂ ತನ್ನ ಗಮನ ನೀಡುತ್ತದೆ.

ಸಾಹಿತ್ಯದಲ್ಲಿ ದೇಶೀ ಮಾದರಿಗಳ ಸಾಧ್ಯತೆಗಳು

ನಟರಾಜ್ ಹುಳಿಯಾರ್‌ರವರ ಪ್ರಕಾರ: "ಆಫ್ರಿಕನ್ ಹಾಗೂ ಕನ್ನಡ ಕಾದಂಬರಿಗಳು ತಮ್ಮ ದೇಶೀ ಕಥಾ ಪರಂಪರೆಗಳೊಂದಿಗೆ ನಡೆಸಿದ ಅನುಸಂಧಾನಗಳ ತೌಲನಿಕ ಅಧ್ಯಯನದಲ್ಲಿ ದೇಶೀ ಭಾಷೆಯಲ್ಲಿ ಸೃಷ್ಟಿಯಾದ ಕನ್ನಡ ಕಾದಂಬರಿಗಿಂತ, ವಿದೇಶೀ ಭಾಷೆಯಲ್ಲಿ ಸೃಷ್ಟಿಯಾದ ಆಫ್ರಿಕನ್ ಕಾದಂಬರಿಯಲ್ಲಿ ದೇಶೀ ಕಥಾ ಪರಂಪರೆಗಳೊಂದಿಗಿನ ಸಂಬಂಧ ಹೆಚ್ಚು ಗಾಢವಾಗಿರುವುದು ಗೊತ್ತಾಗುತ್ತದೆ. ಹಾಗೆ, ನೋಡಿದರೆ, ಆಫ್ರಿಕಾದಂತೆ ಕನ್ನಡ ಸಂದರ್ಭದಲ್ಲೂ ಮೌಖಿಕ ಪರಂಪರೆಯ ಉಳಿವಿಗೆ ಕಾರಣವಾಗುವ ಅನಕ್ಷರತೆ ಹಾಗೂ ಸಾಂಪ್ರದಾಯಿಕ ಜೀವನ ಕ್ರಮಗಳೂ ಮುಂದುವರಿಯುತ್ತಿವೆ. ಸಾಂಪ್ರದಾಯಿಕ ಕಥನಗಳು, ಪುರಾಣಗಳು ಮತ್ತು ಮಹಾಕಾವ್ಯಗಳು ಹಲವು ರೂಪಗಳಲ್ಲಿ ಜನಜೀವನದಲ್ಲಿ ಉಳಿದುಕೊಂಡೇ ಬಂದಿವೆ. ಆದರೆ ಆಫ್ರಿಕನ್ ಕಾದಂಬರಿಯಂತೆ ಆಧುನಿಕ ಪೂರ್ವ ವಾಸ್ತವ ಗ್ರಹಿಕೆಯ ಪ್ರಧಾನ ಮಾರ್ಗಗಳಾದ ಪುರಾಣಗಳನ್ನು, ಸಾಂಪ್ರದಾಯಿಕ ಕಥನಗಳು ಹಾಗೂ ಕಥಾವಸ್ತುಗಳನ್ನು ಕನ್ನಡ ಕಾದಂಬರಿ ಬಳಸಿಕೊಂಡದ್ದು ಕಡಿಮೆ"[24] ಇದಕ್ಕೆ ಅಪವಾದವಾಗಿ ಚಂದ್ರಶೇಖರ ಕಂಬಾರರ 'ಕರಿಮಾಯಿ' ಹಾಗೂ ದೇವನೂರ ಮಹಾದೇವರ 'ಕುಸುಮಬಾಲೆ'ಗಳನ್ನು ನಟರಾಜ್ ಹುಳಿಯಾರ್‌ರವರು ಉದಾಹರಿಸುತ್ತಾರೆ.

'ಕುಸುಮಬಾಲೆ' ಕೃತಿಯು ದೇಶೀ ಕಥನ ಮಾದರಿಗಳ ಒಂದು ಆಧುನಿಕ ರೂಪ. ಪಶ್ಚಿಮದ ಕಾದಂಬರಿಯ ರೂಪಗಳಿಗಿಂತ ಭಿನ್ನವಾಗಿ ಕನ್ನಡದ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಿಂದ ರೂಪುಗೊಂಡಿರುವ ಚಾರಿತ್ರಿಕ ಕೃತಿ. ದಲಿತ ಚಳವಳಿಯ ಸಾಂಸ್ಕೃತಿಕ ಬೇರುಗಳನ್ನು ಆಳವಾಗಿಸುವ, ಅದರ ಬಿಳಲುಗಳನ್ನು ವಿಶಾಲಗೊಳಿಸುವ ಪ್ರಯತ್ನವೂ ಹೌದು.

ಡಿ.ಆರ್.ನಾಗರಾಜ್‌ರವರ ಪ್ರಕಾರ, "ಈ ಕಾದಂಬರಿಯ ಔಪಚಾರಿಕ ಪ್ರಯೋಗಶೀಲತೆಯ ಬೇರುಗಳನ್ನು ಜಾನಪದ ವಿವರಣೆಯಲ್ಲಿ ಕಾಣಬಹುದು. ಇದು ಗದ್ಯ ಮತ್ತು ಪದ್ಯಗಳ ನಡುವಿನ ವ್ಯತ್ಯಾಸವನ್ನು ರದ್ದುಪಡಿಸುವಂತಿದೆ... ಕನ್ನಡದಲ್ಲಿ ಪ್ರಥಮ ಬಾರಿಗೆ 'ಕುಸುಮಬಾಲೆ'ಯಲ್ಲಿ ಜ್ಯೋತಿಯ ಆತ್ಮಗಳು ಮತ್ತು ಜೋತ್ಯಮ್ಮಗಳು ಮಾನವರ ಭಾಷೆಯನ್ನು ಮಾತನಾಡುವುದಲ್ಲದೆ ಕತೆಯನ್ನು ಹೇಳುತ್ತವೆ"[25]

"ಕಲ್ಲೂ ನೀರು ಕರಗುತಿತ್ತೂ, ಆಗ ಕ್ರಿಯಾ ಮುಗಿಸಿದ ಜೋತಮ್ಮದೀರು ಕಸ್ಪಸುಕ ಮಾತಾಡಿಕೊಳ್ಳಲು ಆ ಗವ್ಗತ್ತಲ ಊರ ಮುಂದಲು ರೂಢಿಗತದಂತೆ ಕೂಡಿದರು. ಅವರು ಮಾತಾಡ್ಲಿ ಅಂತ ಇವರೂ, ಇವರು ಮಾತಾಡ್ಲಿ ಅಂತ ಅವರೂ– ಹೀಗಿದ್ದರು. ಆಗ ಅಲ್ಲಿಗೊಬ್ಬಳು ಹೊಸ ಜೋತಮ್ಮನು ಇಸ್ಕೂಲಮನೆ ದಿಕ್ಕಿಂದ ಬಂದವಳು ಬಸ್ಸಿನವರು ದಾನವಾಗಿ ಕಟ್ಟಿಸಿದ್ದ ಜಗುಲಿಕಲ್ಲಮ್ಯಾಲ ಉಸ್ಸೋ ಎಂದು ಕೂತು ನಿಟ್ಟುಸುರಾದಳು. ಆಗಲು, ಊರ್ಗ ದೊಡ್ಡೋರ ಹಟ್ಟಿ ಜೋತಮ್ಮನು"...[26]

'ಕುಸುಮಬಾಲೆ'ಯ ಈ ಭಾಗದಲ್ಲಿ ಕಾದಂಬರಿಯ ರೂಪಕ್ಕಿಂತ ಭಿನ್ನವಾದ ರೂಪದಲ್ಲಿರುವುದನ್ನು ಹಾಗೂ ಜ್ಯೋತಮ್ಮಗಳು ಮಾತನಾಡುತ್ತಿರುವುದನ್ನು ಕಾಣಬಹುದು. ಇದು ರೂಪ, ಮಂಡನಾಕ್ರಮ, ಶೈಲಿ, ರಚನೆ ಬಂಧಗಳಲ್ಲಿ ಇತರೆ ಕಾದಂಬರಿಗಳಿಗಿಂತ ಭಿನ್ನವಾಗಿದೆ.

ರಾಜೇಂದ್ರ ಚೆನ್ನಿಯವರ ಪ್ರಕಾರ : "ಈ ಕೃತಿಯಲ್ಲಿ ಆಧುನಿಕವಾಗುವುದೆಂದರೆ 'ಪೂರ್ವಿಕ', 'ಪೂರ್ವ' ಚರಿತ್ರೆಯ ಆಚೆಗೆ (?) ಇರುವುದರ ಕಡೆಗೆ ಹೊರಳುವುದು ಆಗಿದೆ. "ಕುಸುಮಬಾಲೆ" ಕೃತಿಯ ಪೂರ್ವಿಕನೆಂದರೆ "ಮಲೆಮಾದೇಶ್ವರ" ಕಾವ್ಯವೆನ್ನುವ ಇನ್ನೊಂದು ಕೃತಿ. ಕಾದಂಬರಿಯ ಭಾಷೆಯ ಲಯಗಳು, ಕಥನಸ್ವರೂಪದ ಬಗೆಗಳು ಮಲೆಮಾದೇಶ್ವರ ಕಾವ್ಯದಿಂದ ಬಂದಿರುವಂಥವು... ಇನ್ನೊಂದು ರೀತಿಯಲ್ಲಿ ನೋಡಿದರೆ, ಇಂದಿನ ಬಹುಪಾಲು ಓದುಗರಿಗೆ ತೀರ ವಿಶಿಷ್ಟವಾಗಿ ಕಾಣುವ ಈ ಕೃತಿಯ ಬರಹದ ಶೈಲಿ ಚಂಪೂ ಶೈಲಿಯಾಗಿದೆ"[27]

ಚಂದ್ರಶೇಕರಕಂಬಾರರ ಕಾವ್ಯ, ನಾಟಕ, ಕಾದಂಬರಿಗಳಲ್ಲೂ ದೇಶೀ ಮಾದರಿಗಳ ರೂಪವನ್ನು ಕಾಣಬಹುದು ಮತ್ತು ನಿರೂಪಣಾ ಕ್ರಮ, ಭಾಷಿಕ ಲಯ, ಛಂದಸ್ಸುಗಳಲ್ಲಿ ಈ ಬಗೆಯ ಪ್ರಯತ್ನಗಳು ಅವರ ಕೃತಿಗಳಲ್ಲಿವೆ. ಈ ಬಗೆಯು ಸಾಹಿತ್ಯಕ ರೂಪಗಳ ದೇಶೀ ಮಾದರಿಗಳ ಶೋಧನೆ ನಿರ್ವಸಾಹತೀಕರಣದ ಪ್ರಕ್ರಿಯೆಯಲ್ಲಿ ಪ್ರಮುಖವಾದುದು.

ನಟರಾಜ್ ಹುಳಿಯಾರ್‌ರವರು ಕನ್ನಡದಲ್ಲಿ ನಡೆದಿರುವ ನಿರ್ವಸಾಹತೀಕರಣದ ಬಗೆಗೆ, "ನಿರ್ವಸಾಹತೀಕರಣದ ಕಲ್ಪನೆ ಕುರಿತು ಆಫ್ರಿಕನ್ ಸಾಹಿತ್ಯ ಹಾಯ್ದು ಬಂದಿರುವ ತೀವ್ರ ವಾಗ್ವಾದಗಳ ಘಟ್ಟಗಳನ್ನು ಕನ್ನಡ ಸಾಹಿತ್ಯ ಹಾಯ್ದು ಬಂದಿಲ್ಲವಾದರೂ ಸೃಜನಶೀಲ ಲೇಖಕರು ತಳೆಯುತ್ತಾ ಬಂದಿರುವ ನಿಲುವುಗಳಲ್ಲಿ ಹಾಗೂ ನಡೆಸುತ್ತಾ ಬಂದಿರುವ ಪ್ರಯೋಗಗಳಲ್ಲಿ ಈ ನಿರ್ವಸಾಹತೀಕರಣದ ಹಂಬಲ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ

ವಿವಿಧ ಹಂತಗಳಲ್ಲಿ ಪ್ರಕಟವಾಗುತ್ತಾ ಬಂದಿದೆ. ಎಂ.ಎಸ್.ಪುಟ್ಟಣ್ಣನವರ ಆರಂಭದ ಕಾದಂಬರಿಗಳ ಕಥನ ತಂತ್ರದಿಂದ ಹಿಡಿದು ದೇವನೂರ ಮಹಾದೇವರ ದೇಶೀ ವಾಸ್ತವವಾದೀ ನೋಟದವರೆಗೂ, ಮಾಸ್ತಿಯಿಂದ ಕಂಬಾರರವರೆಗಿನ ತಾತ್ವಿಕ ಜಗತ್ತಿನವರೆಗೂ ಈ ನಿರ್ವಸಾಹತೀಕರಣದ ತುಡಿತ ಹೆಚ್ಚು ಅಬ್ಬರವಿಲ್ಲದೆ ತನ್ನ ಕೆಲಸ ಮಾಡುತ್ತಾ ಬಂದಿದೆ. ಶಂಕರ ಮೊಕಾಶಿ ಪುಣೇಕರ ಹಾಗೂ 'ಭವ'ದ ನಂತರದ ಅನಂತಮೂರ್ತಿಯವರಲ್ಲಿ ಈ ನಿರ್ವಸಾಹತೀಕರಣದ ಹಂಬಲ ಹೆಚ್ಚು ಪ್ರಜ್ಞಾಪೂರ್ವಕವಾಗಿ ಕಾಣುತ್ತಾ ಬಂದಿದೆ"[28] ಎನ್ನುತ್ತಾರೆ.

ಭಾಷಿಕ ನಿರ್ವಸಾಹತೀಕರಣದ ಸಾಧ್ಯತೆಗಳು

ಭಾಷೆಯು ಮಾನವರ ಲೋಕಗ್ರಹಿಕೆಯನ್ನು ಮಾತು ಹಾಗೂ ಬರಹದ ರೂಪಗಳೆರಡರಲ್ಲೂ ಅಭಿವ್ಯಕ್ತಿಗೊಳಿಸುವ ಮಾಧ್ಯಮ. ಲಿಪಿರಹಿತ ಭಾಷೆಗಳಿಗೆ ಬರಹ ರೂಪ ಇಲ್ಲದಿದ್ದರೂ, ಲಿಪಿಸಹಿತ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವ ಸಾಧ್ಯತೆಯೊಂದು ಇದೆ. ಭಾಷೆಯ ಪ್ರಾಥಮಿಕ ಅಗತ್ಯವಿರುವುದು ಸಂವಹನಕ್ಕಾಗಿ. ಆದರೆ, ಅದು ಅಷ್ಟಕ್ಕೆ ಸೀಮಿತವಾಗಿಲ್ಲ.

ಭಾಷೆಯು ಲೋಕ ಗ್ರಹಿಕೆಯ ಅಭಿವ್ಯಕ್ತಿಯಾಗಿರುವಂತೆಯೆ, ಲೋಕಗ್ರಹಿಕೆಯ ನಿಯಂತ್ರಣವಾಗುವುದು ಸಾಧ್ಯ. ಇದು ಜ್ಞಾನದ ರಾಜಕಾರಣದ ಸ್ಥಿತಿ. ಇಂತಹ ಸಂದರ್ಭದಲ್ಲಿ ಭಾಷೆಯ ಬಗೆಗಿನ ವಾಗ್ವಾದಗಳು ಅವಶ್ಯಕ.

ಭಾಷಿಕ ನಿರ್ವಸಾಹತೀಕರಣದ ಚರ್ಚೆಯಲ್ಲಿ ಗೂಗಿ ವಾ ಥಿಯಾಂಗೊ ಮಂಡಿಸಿದ 'ಪ್ರಜ್ಞೆಯ ನಿರ್ವಸಾಹತೀಕರಣ'ದ ಚಿಂತನೆಗಳು ಮುಂದುವರೆಯುತ್ತಿವೆ. ಗೂಗಿ ವಾ ಥಿಯಾಂಗೊ ತನ್ನ ಹಳೆಯ ಹೆಸರಾದ 'ಎನ್ ಗೂಗಿ'ಯನ್ನು ಬದಲಿಸಿಕೊಂಡು ವಸಾಹತುಶಾಹಿ ಭಾಷೆಯಿಂದ ನಿರ್ವಸಾಹತೀಕರಣಗೊಳ್ಳಲು ಗಿಕಯು ಭಾಷೆಯನ್ನು ಬಳಸಲಾರಂಭಿಸಿದ್ದು, ಈ ದೃಷ್ಟಿಯಿಂದ ಕ್ರಾಂತಿಕಾರಕ ಕ್ರಮವಾಗಿದೆ.

ಪ್ರಸ್ತುತ ಕನ್ನಡದಲ್ಲಿ ಡಿ.ಎನ್.ಶಂಕರ ಭಟ್‌ರವರು ಕೂಡ ಡಿ.ಎನ್.ಶಂಕರ ಬಟ್ ಆಗುವ ಮೂಲಕ, ಕನ್ನಡ ಭಾಷೆಯ ನಿರ್ವಸಾಹತೀಕರಣದ ಕುರಿತು ಸಂಶೋಧಿಸುತ್ತಿರುವವರು.

ಡಿ.ಎನ್.ಶಂಕರ ಬಟ್‌ರವರ ಕೆಲವು ಪ್ರಮೇಯಗಳೆಂದರೆ,

1. ಕನ್ನಡ ಭಾಷೆಗೆ ಸಂಸ್ಕೃತ ಮೂಲವಲ್ಲ
2. ಆ ಕಾರಣದಿಂದ ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಬೇಕು
3. ಸಂಸ್ಕೃತದ ಅನವಶ್ಯಕ ಹೇರಿಕೆ ಕನ್ನಡದ ಮೇಲಿದೆ
4. ಕನ್ನಡದ ಕಲಿಕೆಗೆ ಸಂಸ್ಕೃತವೆ ಅಡ್ಡಿ
5. ಸಂಸ್ಕೃತ ಪದಗಳ ಬದಲು ಕನ್ನಡದ ಪದಗಳ ಸೃಷ್ಟಿ ಸಾಧ್ಯ
6. ಸಂಸ್ಕೃತದ ಮಹಾಪ್ರಾಣಾಕ್ಷರಗಳು ಬೇಕಿಲ್ಲ

ಈ ಪ್ರಮೇಯಗಳನ್ನು ಮಂಡಿಸುತ್ತಿರುವಾಗ ಶಂಕರ ಬಟ್ ಅವರು ಎತ್ತುತ್ತಿರುವ ಪ್ರಶ್ನೆಗಳಲ್ಲಿ ಭಾಷಿಕ ನಿರ್ವಸಾಹತೀಕರಣದ ಸಾಧ್ಯತೆಗಳನ್ನು ಶೋಧಿಸುತ್ತಿದ್ದಾರೆ. ಅವರ ಪ್ರಕಾರ: "ಅವಶ್ಯವಿದ್ದರೂ ಇಲ್ಲದಿದ್ದರೂ ಕನ್ನಡ ಬರಹಗಳಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವಂತಹ ಪ್ರವೃತ್ತಿ ನಮ್ಮ ಬರಹಗಾರರಲ್ಲಿ ಕಾಣಿಸುತ್ತಿದೆ. ಇದಲ್ಲದೆ ಈ ಪದಗಳನ್ನು ಆದಷ್ಟು ಮಟ್ಟಿಗೆ ಸಂಸ್ಕೃತದಲ್ಲಿರುವ ಹಾಗೆಯೇ ಉಳಿಸಿಕೊಳ್ಳುವ ಪ್ರಯತ್ನವೂ ನಡೆಯುತ್ತಿದೆ. ಆದರೆ, ಸಾಮಾನ್ಯ ಕನ್ನಡಿಗರ ಮಾತಿನಲ್ಲಿ, ಅದರಲ್ಲೂ ಕೆಳವರ್ಗದ ಜನರ ಮಾತಿನಲ್ಲಿ, ಸಂಸ್ಕೃತ ಪದಗಳು ಜಾಸ್ತಿ ಬಳಕೆಯಾಗುವುದಿಲ್ಲ ಮತ್ತು ಬಳಕೆಯಾಗುವವುಗಳೂ ಹಲವು ರೀತಿಯಲ್ಲಿ ಬದಲಾಗಿರುತ್ತವೆ"[29]

ಅಂತೆಯೇ, ಅವರು ಭಾಷಿಕ ಕಾರಣದಿಂದಾಗಿ ಸಾಮಾಜಿಕ ಸ್ತರದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಯ ಬಳಕೆಯಲ್ಲಿರುವ ವ್ಯತ್ಯಸ್ತರೂಪಗಳಲ್ಲಿ ಕನ್ನಡವೇ ಪ್ರಧಾನವಾಗಿರುವುದನ್ನು ಗುರುತಿಸುತ್ತಾರೆ.

ಭಾಷೆಯು ಪ್ರಜ್ಞೆ ಹಾಗೂ ಲೋಕಗ್ರಹಿಕೆಗಳನ್ನು ನಿಯಂತ್ರಿಸುವುದರಿಂದಾಗಿ ಭಾಷಿಕ ನಿರ್ವಸಾಹತೀಕರಣವು ಅಗತ್ಯವಾಗುತ್ತದೆ. ಸಂಸ್ಕೃತಿ ವ್ಯಕ್ತವಾಗುವ ಒಂದು ರೂಪ ಭಾಷೆಯಾಗಿರುವಂತೆಯೆ, ಬೌದ್ಧಿಕ ಚಟುವಟಿಕೆಗಳಲ್ಲೊಂದು. ಆಧುನಿಕ ತಂತ್ರಜ್ಞಾನ, ವಿಜ್ಞಾನ, ಶಿಕ್ಷಣಗಳಲ್ಲಿ ಭಾಷೆಯ ಅಗತ್ಯವು ಆತ್ಯಂತಿಕ ಪ್ರಮಾಣದ್ದು. ಜ್ಞಾನದ ಪ್ರಜಾಪ್ರಭುತ್ವೀಕರಣದಲ್ಲಿ ಭಾಷೆಯು ವಹಿಸುವ ಪಾತ್ರವು ಗಮನಾರ್ಹವಾದುದು.

ಆಧುನಿಕೋತ್ತರ ಸಂದರ್ಭದಲ್ಲಿಯೂ ಭಾಷೆಯ ಅವಶ್ಯಕತೆಯು ತೀರಾ ಅನಿವಾರ್ಯವಾಗಿದೆ. ಈ ಬಗೆಯ ಒತ್ತಡಗಳಲ್ಲಿ, ಭಾಷೆಯ ಬಳಕೆಯನ್ನ ನಿಯಂತ್ರಿಸುತ್ತಿರುವ ಕ್ರಮಗಳು ಸಾಮಾಜಿಕ ಕಾರಣಗಳಿಂದ ಉಂಟಾಗುತ್ತವೆ. ಸಂಸ್ಕೃತದ ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಲಾಗದ ಶೂದ್ರಾತಿಶೂದ್ರರ ಅಭಿವ್ಯಕ್ತಿಯು ಈ ಕಾರಣದಿಂದ ಕುಂಠಿತವಾಗುತ್ತಿದೆ.

ಡಿ.ಎನ್.ಶಂಕರ ಬಟ್‌ರವರ ಪ್ರಕಾರ, ನಾವೀಗ ಬರೆಯುತ್ತಿರುವ ಹಾಗೂ ಮಾತನಾಡುತ್ತಿರುವ ಕನ್ನಡ ರೂಪಗಳಿಗೆ ವ್ಯತ್ಯಾಸವಿದೆ. ಮಹಾಪ್ರಾಣಾಕ್ಷರಗಳಾದ ಖ, ಛ, ಠ, ಥ, ಫ ಮತ್ತು ಘ, ಝ, ಢ, ಧ, ಭ ಗಳು ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳಲ್ಲಿ (ಸುಖ, ವ್ಯಥೆ, ಪರಿಚ್ಛೇದ, ವಿಘ್ನೇಶ್ವರ, ಪ್ರಧಾನ, ವಿಫಲ, ಭಯಂಕರ) ಮೊದಲಾದವುಗಳಲ್ಲಿ ಮಾತ್ರ ಬಳಕೆಯಾಗುವುದರಿಂದ ಕನ್ನಡ ಪದಗಳಲ್ಲಿ ಬರುವುದಿಲ್ಲ. ಇವುಗಳನ್ನು ಅಲ್ಪ ಪ್ರಾಣಾಕ್ಷರಗಳಾಗಿಯೆ (ಕ,ಚ,ಟ,ತ,ಪ ಮತ್ತು ಗ,ಜ,ಡ,ದ,ಬ) ಉಚ್ಚರಿಸಲಾಗುತ್ತದೆ.[30]

ಇಂಗ್ಲಿಷ್‌ನಿಂದ ಪದಗಳನ್ನು ಅನುವಾದ ಮಾಡುವಾಗ ಕನ್ನಡದ ಪದಗಳ ಬದಲಿಗೆ ಸಂಸ್ಕೃತ ಪದಗಳನ್ನು ಸೃಷ್ಟಿಸಲಾಗುತ್ತಿದೆ. ಆದರೆ, ಅದರ ಬದಲು ಕನ್ನಡದ್ದೇ ಸಾಧಿತರೂಪಗಳನ್ನು ಪಡೆಯಬಹುದು ಅಥವಾ ಹಳಗನ್ನಡದ ಪದಗಳನ್ನು ಬಳಸಬಹುದು ಎಂಬ ಅಭಿಪ್ರಾಯವನ್ನು ಶಂಕರ ಬಟ್‌ರವರು ವ್ಯಕ್ತಪಡಿಸುತ್ತಾರೆ.

ಅವರ ಪ್ರಕಾರ ಈ ಎಲ್ಲ ಬಗೆಗಳೂ ಸಂಸ್ಕೃತದ ಅಂಧಾನುಕರಣೆಯಿಂದ ನಡೆಯುತ್ತಿದೆ. ಆದ್ದರಿಂದ ಕನ್ನಡದಲ್ಲಿ ಲಿಪಿಕ್ರಾಂತಿಯಾಗಬೇಕೆಂದು 'ಹೊಸ ಬರಹ'ದ ಪ್ರಯತ್ನ ನಡೆಸಿದ್ದಾರೆ. ಈ ಪ್ರಯೋಗದಲ್ಲಿ ಋ ,ಐ, ಔ, ಖ, ಛ, ಠ, ಥ, ಫ, ಘ, ಝ, ಢ, ಧ, ಭ, ಷ ಹಾಗೂ ವಿಸರ್ಗಗಳಿಲ್ಲದ ಕನ್ನಡವನ್ನು ಬರೆಯುವ ಪ್ರಯೋಗವಿದೆ.[31]

ಸಂಸ್ಕೃತದಿಂದ ಬಿಡುಗಡೆ ಹೊಂದುವುದರ ಜೊತೆಗೆ ಇಂಗ್ಲಿಷ್ ಪದಗಳಿಗೂ ಕೂಡ ಕನ್ನಡದ ರೂಪಗಳನ್ನೆ ಬಳಸುವ ಹಾಗೂ ಪ್ರಾಚೀನ ಕನ್ನಡ ರೂಪಗಳನ್ನು ಸಂಸ್ಕೃತದ ಬದಲು ಬಳಸುವ ಪ್ರಯತ್ನವನ್ನು ಕೂಡ ಶಂಕರ ಬಟ್‌ರವರು ನಡೆಸುತ್ತಿದ್ದಾರೆ.[32]

ಭಾಷಿಕ ನಿರ್ವಸಾಹತೀಕರಣವು ನಿರ್ವಸಾಹತೀಕರಣದ ಬಹುಮುಖ್ಯ ಘಟ್ಟವಾಗಬಲ್ಲದು. ಈ ಬಗೆಯ ಪ್ರಯತ್ನವು ಸಾಮಾಜಿಕ ತಾರತಮ್ಯಗಳ ನಿವಾರಣೆ ಮಾಡುತ್ತದೆ ಮತ್ತು ಭಾಷೆಯ ಕಲಿಕೆಯನ್ನು ಸರಳಗೊಳಿಸುತ್ತದೆ. ಶಂಕರ ಬಟ್ ರವರು ಹೇಳುವಂತೆ ಸಂಸ್ಕೃತ ಪದಗಳನ್ನು ಬಿಡುವುದರಿಂದ 15 ಅಕ್ಷರಗಳು ಕಡಿಮೆಯಾಗುವ ಮೂಲಕ ಭಾಷೆಯನ್ನು ಕಲಿಯುವುದು ಸುಲಭವಾಗುತ್ತದೆ.

ಬರಹದ ರೂಪಕ್ಕೂ ಆಡುಮಾತಿನ ರೂಪಕ್ಕೂ ಇರುವ ಅಂತರವನ್ನು ಕೂಡ ಇಲ್ಲವಾಗಿಸುವುದು ಈ ಮೂಲಕ ಸಾಧ್ಯವಾಗುತ್ತದೆ.

	ಪ್ರಚಲಿತ ರೂಪ	ಹೊಸ ಬರಹ
ಉದಾ:	ಸಂಸ್ಕೃತ	ಸಂಸ್ಕ್ರುತ
	ವಿಷಯ	ವಿಶಯ
	ಕೆಳವರ್ಗ	ಕೆಳವರ‍್ಗ
	ಮುಖ್ಯ	ಮುಕ್ಯ [33]

ಈ ಬಗೆಯ ಪ್ರಯತ್ನವೊಂದು ಆರಂಭವಾಗಿರುವುದು ಕನ್ನಡದ ನಿರ್ವಸಾಹತೀಕರಣದ ಚಿಂತನೆಗಳಿಗೆ ಪೂರಕವಾಗಿದೆ.

ಉಲ್ಲೇಖಗಳು

1. ಕೆ.ವಿ.ತಿರುಮಲೇಶ್, ವಿಮರ್ಶೆ ಮತ್ತು ದೇಶೀಯತೆ, ಸಂ: ಪಂಡಿತಾರಾಧ್ಯ, ಸಾಹಿತ್ಯ ವಿಮರ್ಶೆ ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.2001. ಪು19
2. ಅದೇ, ಪು.20
3. ರಾಜೇಂದ್ರ ಚೆನ್ನಿ, ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1999, ಪು.2
4. ಅದೇ,
5. ಕೆ.ವಿ.ತಿರುಮಲೇಶ್, ವಿಮರ್ಶೆ ಮತ್ತು ದೇಶೀಯತೆ, ಸಂ: ಪಂಡಿತಾರಾಧ್ಯ, ಸಾಹಿತ್ಯ ವಿಮರ್ಶೆ ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.2001. ಪು19,20
6. ರಾಜೇಂದ್ರ ಚೆನ್ನಿ, ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1999, ಪು.5
7. ಅದೇ,
8. ಅದೇ, 6
9. ಅದೇ, 4, 5
10. ಅದೇ, 5
11. ಡಾ.ಡಿ.ಆರ್ ನಾಗರಾಜ್, ಸಂದರ್ಶನ: ನಟರಾಜ್ ಹುಳಿಯಾರ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು.83
12. ಮೂ: ಬಾಲಚಂದ್ರ ನೆಮಾಡೆ, ಅ: ಎಸ್. ಬಾಗೇಶ್ರೀ, ನಾವು ಅಂತಾರಾಷ್ಟ್ರೀಯ ಸಾಧುಗಳಾಗಬೇಕೆ?, ದೇಶೀದರ್ಶನಗಳು, ಸಂ: ನ.ರವಿಕುಮಾರ, ಅಭಿನವ, ಬೆಂಗಳೂರು, 1996, ಪು.106
13. ಅದೇ, ಪು. 107
14. ಅದೇ,
15. ಡಾ.ಡಿ.ಆರ್ ನಾಗರಾಜ್ , ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, 2006, ಪು. 83
16. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್, ಬೆಂಗಳೂರು, 2002 ಪು. 123
17. ಕುವೆಂಪು, ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು, 2006
18. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, 2010
19. ಡಾ.ಕೆ.ಶಿವರಾಮಕಾರಂತ, ಮರಳಿ ಮಣ್ಣಿಗೆ, ಸಪ್ನ ಬುಕ್ ಹೌಸ್, ಬೆಂಗಳೂರು, 2007

20. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು.
21. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್, ಬೆಂಗಳೂರು, 2002 ಪು. 125
22. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್, ಬೆಂಗಳೂರು, 2002 ಪು. 131
23. ವಿ.ಬಿ.ತಾರಕೇಶ್, ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು. 16
24. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು. 81
25. ಡಿ.ಆರ್.ನಾಗರಾಜ್, ಸಾಮುದಾಯಿಕ ಸ್ಮೃತಿಯೊಂದಿಗೆ ಜೈವಿಕ ಸಂಪರ್ಕ ಸ್ಥಾಪಿಸುವ ಮಹಾದೇವ, ಯಾರ ಜಪ್ತಿಗೂ ಸಿಗದ ನವಿಲುಗಳು, ಅಭಿನವ ಚಾತುರ್ಮಾಸಿಕ, ಸಂಪುಟ: 5 ಮತ್ತು 6, ಸಂಚಿಕೆ: 2,3 ಮತು 1, ಪು.160.
26. ದೇವನೂರ ಮಹಾದೇವ, ಕುಸುಮಬಾಲೆ, ಪುಸ್ತಕ ಪ್ರಕಾಶನ, ಮೈಸೂರು, 2004, ಪು.3
27. ರಾಜೇಂದ್ರ ಚೆನ್ನಿ, ನಿರಚನವಾದಿ ಓದು, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಸಂ: ಡಾ.ಅಮರೇಶ ನುಗಡೋಣಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008, ಪು.232.
28. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು.306
29. ಡಿ.ಎನ್. ಶಂಕರ ಭಟ್, ಕನ್ನಡ ಬರಹವನ್ನು ಸರಿಪಡಿಸೋಣ!, ಭಾಷಾ ಪ್ರಕಾಶನ, ಮೈಸೂರು, 2005, ಪು.16
30. ಅದೇ, 21
31. ಡಿ.ಎನ್. ಶಂಕರ ಬಟ್, ಮಾತಿನ ಒಳಗುಟ್ಟು, ಬಾಶಾಪ್ರಕಾಶನ, ಹೆಗ್ಗೋಡು, 2008

32. ಡಿ.ಎನ್. ಶಂಕರ ಬಟ್, ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು, ಬಾಶಾಪ್ರಕಾಶನ, ಹೆಗ್ಗೋಡು, 2008

33. ಡಿ.ಎನ್. ಶಂಕರ ಬಟ್, ಮಾತಿನ ಒಳಗುಟ್ಟು, ಬಾಶಾಪ್ರಕಾಶನ, ಹೆಗ್ಗೋಡು, 2008

ಅಧ್ಯಾಯ–5

ಸಮಾರೋಪ

'ನಿರ್ವಸಾಹತೀಕರಣ: ಡಿ.ಆರ್.ನಾಗರಾಜ್‌ರವರ ಚಿಂತನೆಗಳು' ಎಂಬ ವಿಷಯದ ಮೂಲಕ ಕನ್ನಡದಲ್ಲಿ ಇದುವರೆಗೆ ನಡೆದಿರುವ ನಿರ್ವಸಾಹತೀಕರಣ ಚಿಂತನೆಗಳ ಸ್ವರೂಪವನ್ನು ಡಿ.ಆರ್.ನಾಗರಾಜ್‌ರವರ ಕೃತಿಗಳ ಮೂಲಕ ಅರಿಯುವ ಉದ್ದೇಶವನ್ನು ಈ ಪ್ರಬಂಧ ಹೊಂದಿತ್ತು.

ವಸಾಹತೋತ್ತರದ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಸಂದರ್ಭದಲ್ಲಿರುವ ನಿರ್ವಸಾಹತೀಕರಣದ ಚರ್ಚೆಗಳು ಹೊರ ಹಾಗೂ ಒಳ ವಸಾಹತುಶಾಹಿಗಳೆರಡರಿಂದಲೂ ಬಿಡುಗಡೆ ಹೊಂದುವುದರೆಡೆಗೆ ಗಮನ ನೀಡುತ್ತಿವೆ. ವಸಾಹತುಶಾಹಿಯ ವಿರೋಧದಲ್ಲಿ ಹುಟ್ಟುವ ನಿರ್ವಸಾಹತೀಕರಣ ಪ್ರಕ್ರಿಯೆಯು ಹಲವು ನೆಲೆಗಳಲ್ಲಿ ಏಕಕಾಲಕ್ಕೆ ನಡೆಯಬೇಕಾದ ಅಗತ್ಯವನ್ನು ಡಿ.ಆರ್.ನಾಗರಾಜ್ ರವರ ಚಿಂತನೆಗಳಿಂದ ಕಂಡುಕೊಳ್ಳಬಹುದು.

ವಸಾಹತೋತ್ತರದಲ್ಲಿ ನಿರ್ವಸಾಹತೀಕರಣ ಪ್ರಕ್ರಿಯೆಯು ವಿಶಿಷ್ಟ ಆಯಾಮ ಪಡೆಯುತ್ತದೆ. ವಸಾಹತುಶಾಹಿಗಳ ಆಡಳಿತ ಕ್ರಮಗಳಿಂದ ನಿರ್ವಸಾಹತೀಕರಣಗೊಳ್ಳುವುದು, ವಸಾಹತುಶಾಹಿಗಳ ಆಡಳಿತದಿಂದ ಬಿಡುಗಡೆ ಹೊಂದಿದ್ದಕ್ಕಿಂತ ಮುಖ್ಯವೆಂದು ಪರಿಗಣಿಸಲಾಗುತ್ತಿದ್ದರೂ, ಅದರಿಂದ ಬಿಡುಗಡೆ ಹೊಂದುವುದು ಅಷ್ಟು ಸರಳವಲ್ಲ.

ವಸಾಹತುಶಾಹಿ ಆಧುನಿಕತೆಯು ಸೃಷ್ಟಿಸಿದ ದ್ವಂದ್ವವು ದೇಶೀ ಸಮುದಾಯಗಳಲ್ಲಿ ಆಧುನಿಕೋತ್ತರದಲ್ಲೂ ಮುಂದುವರೆಯುತ್ತವೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ, ಕೈಗಾರಿಕಾ ರಚನೆಗಳಲ್ಲಿ ಯಾವ ಮಾದರಿಗಳನ್ನು ಒಪ್ಪಿಕೊಳ್ಳಬೇಕೆಂಬುದು ಪ್ರಮುಖ ಸಮಸ್ಯೆಯಾಗುತ್ತದೆ.

ಒಂದೆಡೆ ಆಧುನಿಕಪೂರ್ವ ರಚನೆಗಳ ಹಿಡಿತದಿಂದ ಮುಕ್ತವಾಗುವ ಅವಕಾಶವಿದ್ದರೆ, ಮತ್ತೊಂದೆಡೆ ಹೊಸದರೆಡೆಗಿನ ಆಮಿಷಗಳ ನಡುವೆಯೂ ಅವ್ಯಕ್ತ ಅಪನಂಬಿಕೆ, ಸಂಶಯಗಳಿರುತ್ತವೆ. ಪ್ರಜಾಪ್ರಭುತ್ವ, ಆಧುನಿಕ ಶಿಕ್ಷಣ, ಯಂತ್ರ ನಾಗರಿಕತೆ, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅವುಗಳ ಉದ್ಯೋಗವಕಾಶ, ಜಾಗತೀಕರಣ,

ಉದಾರೀಕರಣ, ಖಾಸಗೀಕರಣಗಳೆಲ್ಲವುಗಳ ಬಗೆಗಿರುವುದು ಈ ಬಗೆಯ ದೃಷ್ಟಿಯೇ. ಯಾವುದಾದರೂ ಒಂದನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಾಧ್ಯತೆಗಳ ಬಗ್ಗೆ ಅನಿರ್ದಿಷ್ಟತೆ, ಅಸ್ಪಷ್ಟ ನಿಲುವುಗಳು ಇದರಿಂದ ಹುಟ್ಟುತ್ತವೆ.

ಇಂತಹ ಸಮಸ್ಯೆಗಳಿಗೆಲ್ಲ ದೇಶೀವಾದವನ್ನು ಮಂಡಿಸಲಾಗುತ್ತದೆ. ದೇಶೀವಾದವೂ ಕೂಡ ಇಂತಹ ಅನಿರ್ದಿಷ್ಟತೆ, ಅಸ್ಪಷ್ಟ ನಿಲುವುಗಳಿಂದಲೇ ಕೂಡಿದೆ. ದೇಶೀವಾದದ ಮಂಡನೆ ಮಾಡುವವರಲ್ಲಿ ಕೂಡ ಎರಡು ಬಗೆಗಳಿವೆ. ಒಂದು, ದೇಶೀ ಹೆಸರಿನಲ್ಲಿ ಅಸಂಖ್ಯ ಮಾದರಿಗಳಿಗೆ ಇರುವ ಬಹುಮುಖತೆಯನ್ನು ಒಪ್ಪಿಕೊಳ್ಳುವವರು. ಇನ್ನೊಂದು, ಬಹುಮುಖತೆಯನ್ನು ಏಕಾಕೃತಿಯಾಗಿ ಮಂಡಿಸುವ ಅಥವಾ ಏಕರೂಪೀಕರಿಸುವ ಮಾದರಿಯದು. ಇದರಲ್ಲಿ ಎರಡನೆ ಮಾರ್ಗವು ಅಂತಿಮವಾಗಿ ಕೋಮುವಾದಿ, ಮೂಲಭೂತವಾದಿಯಾಗಿ ಬದಲಾಗುತ್ತದೆ.

ನವವಸಾಹತುಶಾಹಿಗಳ ಕಾಲದಲ್ಲಿ ನಿರ್ವಸಾಹತೀಕರಣ ಪ್ರಕ್ರಿಯೆಯು ತೀವ್ರವಾದ ಸ್ವರೂಪವನ್ನು ಪಡೆಯುತ್ತದೆ. ಇದಕ್ಕೆ ಕಾರಣ ಬಿಡುಗಡೆಯ ಹಂಬಲವಾದರೂ, ಈ ಬಗೆಯ ಧೋರಣೆಗಳಿಗೆ ಅನೇಕ ಸಾರಿ ತಾನು ಒಪ್ಪಿಕೊಂಡು, ಅನುಭವಿಸುತ್ತಿರುವ ವಸಾಹತುಶಾಹಿಯ ಚಿಂತನಾಕ್ರಮಗಳೇ ಅಡ್ಡಿಯಾಗುವುದರಿಂದ ದೇಶೀ ಚಿಂತನಕ್ರಮಗಳ ಸಮಸ್ಯೆಗಳು ಬೆಳೆಯುವುದಕ್ಕೆ ಕಾರಣವಾಗುತ್ತವೆ.

ನಿರ್ವಸಾಹತೀಕರಣ ಕುರಿತ ಆಲೋಚನೆಗಳಲ್ಲಿ ಇದುವರೆಗೂ ಆಗಿ ಹೋದದ್ದರ ಬಗ್ಗೆ ಒತ್ತು ಕೊಟ್ಟಿರುವುದರಿಂದಾಗಿ ಮತ್ತು ವಸಾಹತು ಎಂಬ ಪೆಡಂಭೂತವು ನಮ್ಮ ಅರಿವು, ಅರ್ಥೈಸುವಿಕೆ ಹಾಗೂ ಅನ್ವಯಿಸುವಿಕೆಯ ಪ್ರಮಾಣವನ್ನು ಮೀರಿ ಬೇರೆಬೇರೆ ರೂಪಗಳಲ್ಲಿ ಜಗತ್ತನ್ನೇ ಆಕ್ರಮಿಸಿಕೊಂಡಿರುವುದರಿಂದ, ಅದರ ವಿರುದ್ಧ ನಾವು ಸಿದ್ಧಗೊಳ್ಳಬೇಕಾದ ಅಸ್ತ್ರಗಳು ಇನ್ನೂ ಶಕ್ತಿಶಾಲಿಯಾಗಿರಬೇಕು ಮತ್ತು ಪರಿಣಾಮಕಾರಿಯಾಗಿರಬೇಕು ಎಂಬುದನ್ನು ಮನಗಾಣಬಹುದು.

ಸಾಹಿತ್ಯಕ, ರಾಜಕೀಯ, ಸಾಂಸ್ಕೃತಿಕ ನಿರ್ವಸಾಹತೀಕರಣದ ಬಗ್ಗೆ ಇಲ್ಲಿ ಅಧ್ಯಯನ ನಡೆಸಲಾಗಿದ್ದು, ಮುಂದಿನ ಹಂತದಲ್ಲಿ ಮಹಿಳೆಯರ, ದಲಿತರ, ರೈತರ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು, ನಿರ್ವಸಾಹತೀಕರಣದ ಚಿಂತನೆಗಳನ್ನು ಮುಂದುವರೆಸುವ ಸಾಧ್ಯತೆಗಳಿವೆ.

ಆಕರ ಗ್ರಂಥಗಳು

1. ಡಾ.ಡಿ.ಆರ್ ನಾಗರಾಜ್, ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, ಹೆಗ್ಗೋಡು, ನಾಲ್ಕನೇ ಮುದ್ರಣ, 2003
2. ಡಾ.ಡಿ.ಆರ್ ನಾಗರಾಜ್ ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಎರಡನೇ ಮುದ್ರಣ, 2006
3. ಡಿ.ಆರ್ ನಾಗರಾಜ್, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಮೂರನೇ ಮುದ್ರಣ, 2002
4. ಡಿ.ಆರ್ ನಾಗರಾಜ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಮೂರನೇ ಮುದ್ರಣ, 2006
5. ಡಿ.ಆರ್ ನಾಗರಾಜ್, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
6. ಮೂ: ಡಿ.ಆರ್ ನಾಗರಾಜ್, ಅ: ಎಂ.ಎಸ್.ಆಶಾದೇವಿ, ಉರಿಚಮ್ಮಾಳಿಗೆ, ವಸಂತ ಪ್ರಕಾಶನ, ಬೆಂಗಳೂರು, ಮೊದಲನೇ ಮುದ್ರಣ 2002
7. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004 ಮೊದಲನೇ ಮುದ್ರಣ
8. ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ, ಹಿಂದ್ ಸ್ವರಾಜ್ಯ, ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ಐದನೇ ಮುದ್ರಣ,2008
9. ರಾಜೇಂದ್ರ ಚೆನ್ನಿ, ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಎರಡನೇ ಮುದ್ರಣ, 1999

ಪರಾಮರ್ಶಿತ ಗ್ರಂಥಗಳು

1. ಮೂ: ಅಶೀಶ್ ನಂದಿ, ಅಶೀಶ್ ನಂದಿ ವಿಚಾರ, ಅ: ಕೆ.ವಿ.ಸುಬ್ಬಣ್ಣ, ಪ್ರೊ.ಕು.ಶಿ ಹರಿದಾಸ್ ಭಟ್ಟ, ಕೆ.ವಿ.ಅಕ್ಷರ ಜಶವಂತ ಜಾಧವ್, ಅಕ್ಷರ ಪ್ರಕಾಶನ, ಹೆಗ್ಗೋಡು, ಮೊದಲನೇ ಮುದ್ರಣ 1995
2. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್, ಬೆಂಗಳೂರು, ಮೊದಲನೆ ಮುದ್ರಣ, 2002
3. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಎರಡನೇ ಮುದ್ರಣ, 2008
4. ರಹಮತ್ ತರೀಕೆರೆ, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊದಲನೇ ಮುದ್ರಣ, 2004
5. ಮೂ: ಗೂಗಿ ವಾ ಥಿಯಾಂಗೋ , ಅ:ರಹಮತ್ ತರೀಕೆರೆ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ಮೊದಲನೆ ಮುದ್ರಣ, 1996
6. ವಿ.ಬಿ.ತಾರಕೇಶ್ವರ್, ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಮೊದಲನೆ ಮುದ್ರಣ, 2006
7. ಸಂ:ನ.ರವಿಕುಮಾರ, ದೇಶೀ ದರ್ಶನಗಳು, ಅಭಿನವ, ಬೆಂಗಳೂರು ಮೊದಲ ಮುದ್ರಣ, 1999
8. ಪ್ರಸನ್ನ, ದೇಸಿ ಜೀವನ ಪದ್ಧತಿ, ಒಂಟಿದನಿ ಪ್ರಕಾಶನ, ಹೆಗ್ಗೋಡು, 2005
9. ಪ್ರಸನ್ನ, ಯಂತ್ರಗಳನ್ನು ಕಳಚೋಣ ಬನ್ನಿ, ಒಂಟಿದನಿ ಪ್ರಕಾಶನ, ಹೊಗ್ಗೋಡು, 2009
10. ಮೂ: ಪ್ರೊ. ಸುನಿಲ್‌ಸಹಸ್ರಬುಧೆ, ಅ: ಕೆ.ಪುಟ್ಟಸ್ವಾಮಿ, ಆಧುನಿಕ ವಿಜ್ಞಾನಕ್ಕೆ ಗಾಂಧಿ ಸವಾಲು, ಕನ್ನಡ ಪುಸ್ತಕ ಪ್ರಾಧಿಕಾರ, ಎರಡನೆ ಮುದ್ರಣ, 2007
11. ಚಂದ್ರಶೇಖರ ಕಂಬಾರ, ದೇಶೀಯ ಚಿಂತನ, ಅಂಕಿತ ಪುಸ್ತಕ,. ಬೆಂಗಳೂರು, ಮೊದಲನೆ ಮುದ್ರಣ 2007
12. ಡಿ.ಎನ್.ಶಂಕರ ಭಟ್, ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?, ಭಾಷಾ ಪ್ರಕಾಶನ, ಮೈಸೂರು, ಮೊದಲನೆ ಮುದ್ರಣ, 2005
13. ಡಿ.ಎನ್.ಶಂಕರ ಭಟ್, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು, ಎರಡನೇ ಮುದ್ರಣ, 2001
14. ಡಿ.ಎನ್.ಶಂಕರ ಭಟ್, ಕನ್ನಡ ನುಡಿಯ ಬಗೆಗೆ ಚಿಂತನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
15. ಡಿ.ಎನ್.ಶಂಕರ ಭಟ್, ಕನ್ನಡ ಬರಹವನ್ನು ಸರಿಪಡಿಸೋಣ, ಭಾಷಾ ಪ್ರಕಾಶನ, ಮೈಸೂರು, ಮೊದಲನೆ ಮುದ್ರಣ, 2005

16. ಡಿ.ಎನ್.ಶಂಕರ ಬಟ್, ಮಾತಿನ ಒಳಗುಟ್ಟು, ಬಾಶಾಪ್ರಕಾಶನ, ಹೆಗ್ಗೋಡು, ಮೊದಲನೆ ಮುದ್ರಣ, 2008
17. ಡಿ.ಎನ್.ಶಂಕರ ಬಟ್, ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು, ಬಾಶಾಪ್ರಕಾಶನ, ಹೆಗ್ಗೋಡು, ಮೊದಲನೆ ಮುದ್ರಣ, 2008
18. ಡಾ.ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ಮೊದಲನೆ ಮುದ್ರಣ, 2009
19. ಡಾ.ಟಿ.ವೆಂಕಟೇಶಮೂರ್ತಿ, ಕನ್ನಡ ನಾಟಕ: ಯಾಜಮನ್ಯ ಸಂಕಥನ, ಅಧ್ಯಯನ ಮಂಡಲ, ಬೆಂಗಳೂರು, ಮೊದಲನೆ ಮುದ್ರಣ, 2009
20. ಕೆ.ಸಿ. ಶಿವಾರೆಡ್ಡಿ, ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು ಮೊದಲನೆ ಮುದ್ರಣ, 2003
21. ಬಸವರಾಜ ಕಲ್ಗುಡಿ, ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಮೂರನೆಯ ಮುದ್ರಣ, 2001
22. ಕುವೆಂಪು, ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು, 2006
23. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, 2010
24. ಡಾ.ಕೆ.ಶಿವರಾಮಕಾರಂತ, ಮರಳಿ ಮಣ್ಣಿಗೆ, ಸಪ್ನ ಬುಕ್ ಹೌಸ್, ಬೆಂಗಳೂರು, 2007
25. ದೇವನೂರು ಮಹಾದೇವ, ದೇವನೂರು ಮಹಾದೇವ ಅವರ ಕೃತಿಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು, 1997
26. ಸಂ: ಡಾ.ಅಮರೇಶ ನುಗಡೋಣಿ ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡವಿಶ್ವ ವಿದ್ಯಾಲಯ, ಹಂಪಿ, 2008
27. ಸಂ: ಡಾ.ಕೆ.ರವೀಂದ್ರನಾಥ, ಅಧ್ಯಯನದ ವಿಧಿ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008
28. ಯಾರ ಜಪ್ತಿಗೂ ಸಿಗದ ನವಿಲುಗಳು, ಅಭಿನವ ಚಾತುರ್ಮಾಸಿಕ
29. G.N.DEVY, AFTER AMNESIA, Orient Longman Limited, Hyderabad, 1992,
30. Original: Michel Foucault, Translation: A.M.Sheridan smith , the Archaeology of knowledge, London and New York, 2009
31. Edward W.said, Orientalism, penguin Books, New delhi, 2001
32. Edward W.said, Culture And Imperialism, vintage, London, 1994
33. Robert.J.C.Young, Post Colonialism, Oxford University Press, 2003

34. ಡಾ.ಸಿಎನ್.ರಾಮಚಂದ್ರನ್, ವಸಾಹತೋತ್ತರ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2002